॥ ಶ್ರೀ ರಾಮ ॥

ಕರ್ನಾಟಕ
ಲೇಖನ ಮಣಿಮಂಜರಿ



ಕರ್ನಾಟಕ ಸಾಹಿತ್ಯ ಸಿಧಿ

ಶಾ. ವೆಂಕಟರಮಣಯ್ಯ, ಅಲಕಾಪುರ

ಇವರಿಂದ ಬರೆಯಲ್ಪಟ್ಟುದು



ಕರ್ಣಾಟಕ ಸಾಹಿತ್ಯ ನಿಧಿ

ಶಾ|| ವೆಂಕಟರಮಣಯ್ಯ, ಅಲಕಾಪುರ.

॥ ಶ್ರೀ ರಾಮ ॥

ಶ್ರೀ ಕರ್ಣಾಟಕ

ವಚನ ಮಣಿಮಂಜರಿ



ಕರ್ಣಾಟಕ ಸಾಹಿತ್ಯ ನಿಧಿ

ಶಾ. ವೆಂಕಟರಮಣಯ್ಯ, ಅಲಕಾಪುರ

ಇವರಿಂದ ಬರೆಯಲ್ಪಟ್ಟದು

ಬೆಂಗಳೂರು ಸಿಟಿ ಅರಳೇಪೇಟೆಯಲ್ಲಿರುವ
ಬಿ. ಬಿ. ಡಿ. ಪವರ್ ಪ್ರೆಸ್‌ನಲ್ಲಿ ಮುದ್ರಿಸಲ್ಪಟ್ಟಿತು.
೧೯೨೯

|| ಶ್ರೀರಾಮ ||

ಮಣಿಮಂಜರಿಯ ವಿಷಯವಾಗಿ ಪಂಡಿತರ ಅಭಿಪ್ರಾಯಗಳು.

ಸವಿನಯ ವಿಜ್ಞಾಪನೆಗಳು.

ಹರ್ಷಪುರಸ್ಸರವಾಗಿ ಪ್ರೇಷಿತವಾದ ಶ್ರೀಮನ್ಮಣಿಮಂಜರಿಯ ಕರ್ಣಾಟಕಾನುವಾದವನ್ನು ಆಮೂಲಾಗ್ರವಾಗಿ ಯಥಾಭಿಲಷಿತವಾಗಿ ಓದಿದೆನು. ಇದು ಪಾಠಕರಿಗೆ ತುಂಬಾ ಉಲ್ಲಾಸವನ್ನು ಮಾತ್ರವಲ್ಲದೆ ಹಲವು ಪ್ರಮೇಯ ಜ್ಞಾನವನ್ನು ಉಂಟುಮಾಡುವುದರಲ್ಲಿ ಪಟುತರವಾಗಿದೆ. ಇದು ನಿರಂತರವೂ ನಿರಂತರಾಯವಾಗಿ ಪ್ರಚಾರವಾಗುತ್ತಾ, ಸರ್ವತ್ರ ಆದರಣೀಯವಾಗಿರಲು ಸಂದೇಹವಿಲ್ಲ.

ತಮ್ಮ ಪ್ರೀತಿಪಾತ್ರ,
ವಿಠಲಮೂರ್ತ್ಯಾಚಾರ್ಯ,
ಮಿಡಲ್‌ಸ್ಕೂಲ್ ಹೆಡ್ಮಾಸ್ಟರ್,
೧೮-೧೨-೧೯೨೬ ಮಂಚೇನಹಳ್ಳಿ,
ಗೋರೀಬಿದನೂರು ತಾಲ್ಲೂಕು.

ಶ್ರೀ॥ ಮ॥ ರಾ॥ ರಾ॥ (ಹಲಕೂರು) ಅಲಕಾಪುರ ಶಾ॥ ವೆಂಕಟರಮಣಯ್ಯನವರು ಚಿರಕಾಲದಿಂದ ಕರ್ಣಾಟಕ ಭಾಷಾ ಜ್ಞಾನವನ್ನು ಸಂಪಾದಿಸಿ, ಅನೇಕ ಗದ್ಯಪದ್ಯ ರೂಪವಾದ ನಾಟಕಾದಿ ಕರ್ಣಾಟಕ ಗ್ರಂಥಗಳನ್ನು ರಚಿಸಿ, ಪ್ರಸಿದ್ಧ ಕವಿಗಳಾಗಿಯೂ ಲೋಕಸೇವಾ ನಿರತರಾಗಿಯೂ ಇರುವುದು ವ್ಯಕ್ತವಾದ ವಿಷಯವು. ಇವರು ಶ್ರೀ ಭಾರತ ಭಾಗವತ ರಾಮಾಯಣಾದಿ ಗ್ರಂಥಗಳ ಸಾರಸಂಗ್ರಹ

ರೂಪವಾದ ಮಣಿಮಂಜರಿ ಎಂಬ ಸಂಸ್ಕೃತ ಗ್ರಂಥಾಭಿಪ್ರಾಯ ಪ್ರಕಾಶಕವಾದ ಕರ್ಣಾಟಕ ಭಾಷಾರೂಪವಾದ ಈ ನೂತನ ಗ್ರಂಥ ವನ್ನು ರಚಿಸಿ ಕಳುಹಿಸಿದರು. ಇದನ್ನು ಆಮೂಲಾಗ್ರ ನೋಡೋ ಣದರಿಂದ ಬಹಳ ಸಂತೋಷವಾಯಿತು. ಇವರು ತಮ್ಮ ಕವಿತಾ ಪರಿಶ್ರಮವನ್ನು ಉತ್ತಮವಾದ ವಿಷಯದಲ್ಲಿ ವಿನಿಯೋಗಿಸಿರುತ್ತಾರೆ. ಶಬ್ದಾರ್ಥಾಲಂಕಾರ ಸಂಪನ್ನವಾಗಿ ಬಹು ವಿಷಯಗಳಿಂದೊಡಗೂಡಿ ಆಧುನಿಕಜನರಿಗೂ ಸಂಗ್ರಾಹಕವಾಗಿರುವ ಈಗ್ರಂಥವು ಕ್ಷಿಪ್ರದಲ್ಲೇ ಮುದ್ರಿತವಾಗಿ ಲೋಕೋಪಕಾರಕವಾಗೋಣದರದ್ವಾರಾ ಗ್ರಂಥ ಕರ್ತರಿಗೆ ಇತೋಪ್ಯಧಿಕವಾದ ಪುಣ್ಯಕೀರ್ತಿ ಲಾಭವಾಗುವುದೆಂದು ನಂಬಿರುತ್ತೇನೆ.

ಹೊಳವನಹಳ್ಳಿ ಶೇಷಾಚಾರ್ಯ,

೨೦–೧–೧೯೨೭ ಅರಮನೆ ಮಹಾವಿದ್ವಾನ್,

ಬೆಳ್ಳಾವೆ ನರಹರಿಶಾಸ್ತ್ರಿಯು, ಸಾ॥ ನ. ವಿ. ಗಳು.

ತಾವು ನನ್ನಲ್ಲಿ ಕೊಟ್ಟಿದ್ದ ತಮ್ಮ “ಮಣಿಮಂಜರೀ ಗ್ರಂಥದ ಕರ್ಣಾಟಕಾನುವಾದ”ವನ್ನು ಆಮೂಲಾಗ್ರವಾಗಿ ನೋಡಿದೆನು. ದ್ವೈತಮತದವರ ಪವಿತ್ರಗ್ರಂಥಗಳಲ್ಲಿ “ಮಣಿಮಂಜರಿ”ಯು ಒಂದು ಮುಖ್ಯ ಗ್ರಂಥ;.......ಮುಖ್ಯವಾಗಿ ಮತಾಭಿಮಾನದಿಂದ ಪೂರ್ವ ಗ್ರಂಥವನ್ನು ಬಹುಮಂದಿ ಪಾಠಕರ ಅವಗಾಹನೆಗೆ ಅರ್ಹವಾಗು ವಂತೆ ಸುಲಭರೀತಿಯಿಂದ ತಾವು ಕನ್ನಡದಲ್ಲಿ ಬರೆದಿರುವುದು ಸಂತೋ ಷಾಸ್ಪದವಾಗಿದೆ. ತಮ್ಮ ಈ ಕರ್ಣಾಟಕ ಗ್ರಂಥವೇ ವಿಶೇಷವಾಗಿ ಜನರಲ್ಲಿ ಪ್ರಚಾರಕ್ಕೆ ಬರುವುದಾದರೆ ಅದ್ವೈತಿಗಳಲ್ಲಿ ಮಣಿಮಂಜರೀ ಗ್ರಂಥದ ವಿಷಯವಾಗಿ ವಿಷಮಭಾವಗಳೂ ಮನಃಕ್ಲೇಶಗಳೂ ತಲೆ

ದೋರಲವಕಾಶವಾಗುವುದಿಲ್ಲ. ಬ್ರಾಹ್ಮಣರಲ್ಲಿ ಬೇರೆಬೇರೆ ಪಂಗಡದವರು ತಂತಮ್ಮಲ್ಲಿ ವಿರಸಭಾವಗಳಿಂದ ಕಾದಾಡುವುದನ್ನು ತಪ್ಪಿಸಿ ಪರಸ್ಪರ ಸ್ನೇಹವನ್ನು ವೃದ್ಧಿಗೊಳಿಸಲು ....ಬಹುಮಟ್ಟಿಗೆ (ಇದು) ಸಹಾಯವಾಗುವುದೆಂದು ನಂಬಿದ್ದೇನೆ.

ಬೆಳ್ಳಾವೆ, ನರಹರಿಶಾಸ್ತ್ರಿ,
ಮಿಡಲ್‌ಸ್ಕೂಲ್ ಹೆಡ್ಮಾಸ್ಟರ್,
೪-೫-೧೯೨೭ ಬಸವನಗುಡಿ, ಬೆಂಗಳೂರು ಸಿಟಿ.

ಶ್ರೀಮಣಿಮಂಜರೀಕರ್ಣಾಟಕಾನುವಾದಾಭಿನಂದನಂ

ಮ. ಸ್ರ॥ ಪ್ರಕಟಂ ಶ್ರೀಮಧ್ವಶಾಸ್ತ್ರಾಂಬುನಿಧಿಗತ ಮಣಿಮಂಜರೀ ಗ್ರಂಥರತ್ನಂ । ಸುಕರಂಸಾರಂಪ್ರಸಾದಂ ಗುಣವೊದವೆ ಮಹಾಗದ್ಯಪದ್ಯಾದಿಕೃತ್ಯಾ ॥ ಕಿಕಸತ್ಕೀರ್ತಿಪ್ರತಿಷ್ಠಾಪನ ಗುಣಚಣಯುಕ್ತಿಪ್ರವೀಣ್ಯೈಕಮತ್ಯಾ । ದಿಕವಿಪ್ರೋದ್ಧಾರ ಕಂವೇಂಕಟರಮಣಕವೀಂದ್ರಂಸಖಾಯಂಮಝಾರೇ ॥೧॥

ಅನುವಾದಂಕನ್ನಡಂ, ಮುನ್ನಿನಘನತೆಗೆ ಲೋಪಂನಸುಂ ಬಾರದನ್ನಂ। ವಿನಯಂತಾಂಪೆರ್ಚುವನ್ನಂ ಪರಮತಜರಚಿತ್ತಕ್ಕೆ ಸಿಟ್ಟಾಗದನ್ನಂ ॥ ಘನಯುಕ್ತ್ಯಾಸಕ್ತಿ ಪ್ರಕಟನೆಕೆಯೆ, ಲೋಕೋಪಕಾರಕ್ಕೆತಕ್ಕಂ । ತನುವಾದಂ, ಸೂಕ್ತಗದ್ಯ ಕ್ರಮಸುಕಲನರತ್ನಂ, ಮಹಾಪ್ಪಂಚಿರತ್ನಂ ॥೨॥

ಚಂ॥ ಪೊಸಮಣಿಮಂಜರೀಕೃತಿಪಚೋಮಧುಮಾಧುರಿಕಾವ್ಯಕೃಜ್ಜಗ । ದ್ವಿಸರಮುದಾಳಿಮಾಳೆಗೆ ಪರಿಸ್ಫುಟತುಂದಿಲಭಾವವಿತ್ತುಸೊ॥ ರ್ಕಿಸದೆಯೆ ಮಾಣ್ಬುದೇ, ಸಕಲಪಾಮರರೋಳಿಗಮರ್ಥ ಮಾಗುವಂ । ತೆಸೆವಸುಕಾದಳಾಸದೃಶಪಾಕದೆ ಲೋಕದೆಮ್ಮೋ ಲ್ಮೆಯೊಂದದೇ ॥೩॥

ಕಂ॥ ಸಹಜಕವಿಚೆನ್ನಿಗಸಬಿ ।
ನ್ನಹವಿದ್ಧುಕೋಲಾರಧಾಂಗ್ಲಸೋನ್ನತಶಾಲಾ ॥
ವಹಕರ್ಣಾಟವಿಬುಧನಾ ।
ಮಹೀಸುರಪ್ರವರನಾಚತುರ್ವಾಗ್ವಿದನಾ ॥೪॥

೮–೧೦–೧೯೨೭ ಮಾದನಹಳ್ಳಿವಾಸ್ತವ್ಯಂ.

ಶಾ॥ ಪೂರ್ಣಪ್ರಜ್ಞಮತಾನುಯಾಯಿ ಸುಮನಸ್ಸೋತ್ಕಣ್ಠಕಣ್ಠಾದೃತಾ । ಗೈರ್ವಾಣೀ ಮಣಿಮಞ್ಜರೀತಿಸುಗುಣಸ್ಖ್ಯಾತಾ ಮಹಾಲಙ್ಕ್ರಿಯಾ ॥ ಸೈಷಾವೇಙ್ಕಟಶಬ್ದಪೂರ್ವರಮಣಪ್ರಾಜ್ಞೇನಕಾರ್ಣಾಟಕೀ । ಕ್ಲೃಪ್ತಾಪಿಸ್ವಯಮೇವಸರ್ವಜನತಾನೇತ್ರಾಟಸೀಭಾಸತಾಮ್ ॥೧॥

ಶಾ॥ ಪೂರ್ವಾವೇಕ್ಷಣವೀಕ್ಷಿತಪ್ರವಚನಸ್ವಾಧ್ಯಾಪಿತಾಲೋಚನೈಃ । ಸಂಬೋಧಾಪಗತಾತ್ಮನೀನಧಿಷಣಾಸಂಸ್ಕಾರಸಂಭಾವನೈಃ ॥ ಆಶ್ರಾನ್ತಶ್ರಮವದ್ಧಿಯಾಸಸುಮಯಾದ್ವಿಸ್ತ್ರಸ್ಸಖಿಸ್ಮೇತಯೋ। ಕಾರ್ಣಾಟೀ ಮಣಿಮಞ್ಜರೀ ಕೃತಿರಿಯಂಸಮ್ಯಕ್ತಯಾಽಶೋಧ್ಯತ ॥೨॥

ಶಾ॥ ಸ್ವಾಪೋದ್ಘಾತವಿಲೇಖನಾವಸರತಸ್ಸಾಕೂತಸಾವಿಷ್ಕೃತಾತ್। ಕಾರ್ಣಾಟೀ ಪರಿವರ್ತನಪ್ರಯತನಾತ್ ಕ್ಲಿಷ್ಟಾಸ್ತುರೋಽಯಂ ಸಖಾ॥ ಭೂಯಾದೇವಫಲೇಗ್ರಹಿಃ ಪ್ರಸದನಾತ್ಲಕ್ಷ್ಮೀಪತೇರಿತ್ಯಸೌ । ಆಶಾಸ್ತೇಕಮಲಾನಿವಾಸ ಕವಿರಾಟ್ಸಾಹಿತ್ಯವಿದ್ವನ್ಮಣಿಃ ॥೩॥

ಭಾ. ರಾ. ಶ್ರೀನಿವಾಸಾಚಾರ್ಯಶರ್ಮಾ
ಸಾಹಿತ್ಯಶಾಸ್ತ್ರ ಪ್ರಧಾನೋಪಾಧ್ಯಾಯಃ,
ಸಾಹಿತ್ಯವಿದ್ವತ್ಕವಿಮಣಿಃ,
ಶ್ರೀಮಹೀಶೂರನಗರ್ಯಾಮ್.

ಶ್ರೀಮನ್ಮಹಾರಾಜ ಸಂಸ್ಕೃತ ಮಹಾ ಪಾಠಶಾಲಾಯಾಮ್, ಪ್ರಭವ, ಭಾದ್ರ, ಕೃಷ್ಣೈಕಾದಶ್ಯಾಮ್

ಈ ಗ್ರಂಥವನ್ನು ಆದ್ಯಂತವಾಗಿ ಓದಿ ನೋಡಿಕೊಂಡೆನು. ಇದರಲ್ಲಿರುವ ಎಂಟು ಸರ್ಗಗಳಲ್ಲಿ ಮೊದಲೆರಡು ಸರ್ಗಗಳಲ್ಲಿ ಸಂಕ್ಷಿಪ್ತವಾದ ರಾಮಾಯಣದ ಕಥೆಯೂ ಮುಂದಿನೆರಡು ಸರ್ಗಗಳಲ್ಲಿ ಸಂಗ್ರಹವಾದ ಭಾರತದ ಕಥೆಯೂ ಮುಂದಿನ ಮೂರು ಸರ್ಗಗಳಲ್ಲಿ ಬೌದ್ಧ ಜೈನಮತಪ್ರವರ್ತಕರು ಮುಂತಾದವರ ಇತಿಹಾಸವೂ ಏಳನೆಯದರ ಕೆಲಭಾಗ ಎಂಟನೆಯದರಲ್ಲಿ ಅದ್ವೈತ ಮತಸ್ಥಾಪಕರು ಮುಂತಾದವರ ಚರಿತ್ರೆಯೂ ಕಡೆಯಲ್ಲಿ ದ್ವೈತಮತ ಸ್ಥಾಪಕರ ಸಂಕ್ಷಿಪ್ತ ಚರಿತ್ರೆಯೂ ಇದೆ. ಇದರ ಅಲ್ಪಸ್ವಲ್ಪ ಭಾಗವನ್ನು ಬಿಟ್ಟರೆ ಉಳಿದ ಎಲ್ಲವೂ ಸರ್ವರಿಗೂ ಸಾಮಾನ್ಯವಾಗಿ ಓದಲಿಕ್ಕೆ ಸಹಾಯವಾಗುವಂತಿದೆ. ಆದ್ದರಿಂದ ಸಂಸ್ಕೃತದ ಮಣಿಮಂಜರಿಯನ್ನೋದಿ ತಿಳಿಯಲಾರದ ಕನ್ನಡಿಗರೆಲ್ಲರಿಗೂ ಈ ಗ್ರಂಥವು ಅದರ ಅರ್ಥವನ್ನು ತಿಳಿಸುವದಕ್ಕೆ ತಕ್ಕ ಸಾಧನವಾಗದಿರಲಾರದು.

ಕಟ್ಟಿ ಶ್ರೀನಿವಾಸಮೂರ್ತ್ಯಾಚಾರ್ಯ,

ವಿಭವ ಚೈತ್ರ ವದಿ ೨ ಕನ್ನಡ ಪಂಡಿತ, ಧಾರವಾಡ.

ಮ||ರಾ|| ಕರ್ಣಾಟಕ ಸಾಹಿತ್ಯನಿಧಿ ಹಲಕೂರು (ಅಲಕಾಪುರ) ಶಾ|| ವೆಂಕಟರಮಣಯ್ಯನವರು ರಚಿಸಿದ ಮಣಿಮಂಜರಿ ಗ್ರಂಥ.... ....ವನ್ನು ಆರಂಭದಿಂದ ಕೊನೆಯವರೆಗೂ ಓದಿನೋಡಿದೆವು. ಮೂಲ ಗ್ರಂಥದ ಅರ್ಥವು ಪಾಮರರಿಗೂಕೂಡ ತಿಳಿಯುವಂತೆ ಸುಲಭವಾದ ಶೈಲಿಯಲ್ಲಿ......ಕನ್ನಡದಲ್ಲಿ ರಚಿಸಲ್ಪಟ್ಟಿದೆ ಎಂಬುವಕ್ಕೆ ಸಂದೇಹವಿಲ್ಲ. ಸಂಸ್ಕೃತವನ್ನರಿಯದ ದ್ವೈತರಿಗೆ ಈ ಗ್ರಂಥ ವಾಚನದಿಂದ ತುಂಬಾ ಸಂತೋಷವಾದೀತೆಂದು ನಂಬುತ್ತೇನೆ.

ದೇಶಪಾಂಡೆ ಹನುಮಂತರಾವ್,

ಗೋವಿಂದರಾವ್.

೧೭-೬-೧೯೨೮. ಟ್ರೇನಿಂಗುಕಾಲೇಜು, ಧಾರವಾಡ.

ಮಹಾಶಯರೆ !

ತಾವು ಕನ್ನಡದಲ್ಲಿ ಬರೆದಿರುವ ಮಣಿಮಂಜರಿಯನ್ನು ಆದ್ಯಂತವಾಗಿ ಓದಿನೋಡಿದೆನು. ಸಂಸ್ಕೃತ ಪರಿಚಯವಿಲ್ಲದವರು ಈ ಗ್ರಂಥದ ವಿಷಯವನ್ನು ಕನ್ನಡದಲ್ಲಿ ಅರಿಯುವುದಕ್ಕೆ ಇದು ಅನುಕೂಲವಾಗಿದೆ. ವೈದಿಕಧರ್ಮಕ್ಕೆ ಚ್ಯುತಿ ಬಂದಾಗ ಭರತಖಂಡದ ಆಚಾರ್ಯರುಗಳು ಸಕಾಲದಲ್ಲಿ ಅವತರಿಸಿ ನಿರಂತರ ಪರಿಶ್ರಮದಿಂದ ಜನರ ಮನಸ್ಸಿನಲ್ಲಿ ಎಷ್ಟುಮಟ್ಟಿಗೆ ಉದ್ಬೋಧನೆಯನ್ನುಂಟುಮಾಡಿ ಸನಾತನಧರ್ಮವನ್ನು ಪುನರುಜ್ಜೀವನ ಗೊಳಿಸುತ್ತಿದ್ದರೆಂಬುದು ಈ ಗ್ರಂಥ ಪಠನದಿಂದ ವೇದ್ಯವಾಗುವುದು.

ಮತಾಂತರದವರ ಮನಸ್ಸಿಗೆ ಒಪ್ಪದ ವಿಷಯಗಳು ಈ ಗ್ರಂಥದಲ್ಲಿ ತೋರುವಂತಿದ್ದರೂ ಅವು ವೈದಿಕ ಧರ್ಮೋದ್ಧಾರಕ್ಕಾಗಿ ಆ ಆಕಾಲಸ್ಥಿತಿಗೆ ತಕ್ಕಂತೆ ಉತ್ಸಾಹದಿಂದ ಕೈಕೊಂಡ ಮಾರ್ಗಗಳೆಂದು ಸಹಾನುಭೂತಿಯಿಂದ ದೃಷ್ಟಿಸಿ ಇದರಲ್ಲಿ ರಮ್ಯವಾಗಿ ವಿವರಿಸಿರುವ ಮಾಧ್ವಮತ ತತ್ವಗಳನ್ನು ವಾಚಕರು ತಿಳಿದು ಆನಂದಿಸುವರೆಂದು ನಂಬುತ್ತೇನೆ. ಇಲ್ಲವಾದರೆ ಸಮಗ್ರ ಬ್ರಾಹ್ಮಣ್ಯಕ್ಕೇ ಕುಂದಕವೊದಗುತ್ತಿರುವ ಈ ವಿಷಮಕಾಲದಲ್ಲಿ ಒಳ ಒಡಕುಗಳಿಂದ ಮತ್ತಷ್ಟು ಹಾನಿಗೆ ಕಾರಣವಾಗಬಹುದು.

ಇದುವರೆಗೂ ಕನ್ನಡಿಸದಿದ್ದ ಮಣಿಮಂಜರಿಯನ್ನು ಕನ್ನಡ ಬಲ್ಲವರ ಪ್ರಯೋಜನಾರ್ಥವಾಗಿ ತಾವು ಬರೆದು ವಂದ್ಯರಾಗಿರುತ್ತೀರಿ.

ಇತಿ ವಿಜ್ಞಾಪನೆ,

ಹೆಚ್. ಚೆನ್ನಕೇಶವಯ್ಯಂಗಾರ್ಯ,

೯–೧೨–೧೯೨೮. ಕರ್ಣಾಟಕಕಾಲೇಜು, ಧಾರವಾಡ.

ವಿದ್ಯಾವಾಚಸ್ಪತಿ, ಶ್ರೀಮಾನ್ ಸೇತುಮಾಧವಾಚಾರ್ಯರವರು, ಗಜೇಂದ್ರ ಗಡಕರ್, ವ್ಯಾಕರಣನಿಷ್ಣಾತ, ಶಾಸ್ತ್ರಿ (ಸಂಸ್ಕೃತ ಪಂಡಿತ) ಕರ್ಣಾಟಕ ಕಾಲೇಜು ಧಾರವಾಡ, ಇವರು ಮೇಲಿನ ಅಭಿಪ್ರಾಯವನ್ನೇ ಪುಷ್ಟೀಕರಿಸಿರುವರು.

|| ಶ್ರೀ ರಾಮ ||

ಸೌಜನ್ಯಶೀಲರಲ್ಲಿ ಸವಿನಯ ಪ್ರಾರ್ಥನೆ!

ಶ್ರೀಮಾನ್ ಮಧ್ವಾಚಾರ್ಯರವರ ಪ್ರಿಯ ಶಿಷ್ಯರಾದ ಕವಿ ಕುಲತಿಲಕ ತ್ರಿವಿಕ್ರಮ ಪಂಡಿತಾಚಾರ್ಯರವರ ಮಕ್ಕಳು ಶ್ರೀಮನ್ನಾರಾಯಣ ಪಂಡಿತಾಚಾರ್ಯರವರು, ತಮ್ಮ ಅಸಮಾನ ಗುರು ಭಕ್ತಿ ಪ್ರದರ್ಶನಾರ್ಥವಾಗಿ, ಶ್ರೀ ಮಣಿಮಂಜರಿ– ಶ್ರೀ ಮಧ್ವ ವಿಜಯ– ಎಂಬ ಅಮೂಲ್ಯ ಗ್ರಂಥಂಗಳನ್ನು ರಚಿಸಿರುವರು. ಮಣಿ ಮಂಜರಿಯು ಮಧ್ವವಿಜಯಮಹಾಕಾವ್ಯಕ್ಕೆ ಪೀಠಿಕಾ ರೂಪವೆನ್ನಬಹುದು. ಮೊದಲಿನ ಯುಗಂಗಳಲ್ಲಿ ಹನುಮದ್ಭೀಮಾವತಾರಂಗಳು ಶ್ರೀಮದ್ವಾಯ್ವಂಶದಿಂದ ಹೇಗಾದುವೋ ಹಾಗೆಯೇ ಶ್ರೀ ಮಧ್ವಾವತಾರವೂ ಶ್ರೀಮದ್ವಾಯ್ವಂಶದಿಂದಾದುದೆಂಬುದನ್ನೂ, ಹರಿ ಸರ್ವೋತ್ತಮ ಮತವು ಅನಾದಿ ಎಂಬುದನ್ನೂ ಈ ಗ್ರಂಥವು ತಿಳಿಸುವುದು. ಮತ್ತೂ ಈ ಮತಕ್ಕೆ ವ್ಯತಿರಿಕ್ತಂಗಳಾದ ಕೆಲವು ಮತಂಗಳ ತತ್ವಂಗಳೂ ಅವನ್ನು ಉಪೇಕ್ಷಿಸಲು ತಕ್ಕ ಕಾರಣಗಳೂ, ದ್ವೈತ ಮತ ಪ್ರಾಶಸ್ತ್ಯವೂ ಇದರಲ್ಲಿ ವಿವರಿಸಲ್ಪಟ್ಟಿರುವುವು. ಈ ಗ್ರಂಥದಲ್ಲಿ ಉಕ್ತವಾಗಿರುವ ವಿಷಯಂಗಳಾವುವೂ ಆಧಾರವಿಲ್ಲದೆ ಮೂಲ ಗ್ರಂಥಕಾರರ ಕೇವಲ ಸ್ವಕಪೋಲ ಕಲ್ಪಿತಂಗಳೆಂದು ಹೇಳಲಾಗುವುದಿಲ್ಲ! ಈ ಗ್ರಂಥದ ಕೆಲವು ಭಾಗಗಳಲ್ಲಿ ಮತಾಂತರದವರು ದ್ವೈತಿಗಳನ್ನು ಆಕ್ಷೇಪಿಸುವ ಕೆಲವು ವಿಷಯಗಳಿರುವುದೆಂದು ಒಪ್ಪಬೇಕು! ಈ ವಿಚಾರವಾಗಿ ನನ್ನ ಶ್ರೇಯಶ್ಚಿಂತಕರಾದ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪ್ರೊಫೆಸರವರಾಗಿರುವ ಶ್ರೀ|| ಮ|| ರಾ|| ಶ್ರೀ|| ವಿದ್ವಾನ್ ಎಚ್. ಚೆನ್ನಕೇಶವಯ್ಯಂಗಾರ್ಯರವರು "ಮತಾಂತರದವರ ಮನಸ್ಸಿಗೆ ಒಪ್ಪದ ವಿಷಯಂಗಳು ಈ ಗ್ರಂಥದಲ್ಲಿ ತೋರುವಂತಿದ್ದರೂ ಅವು ವೈದಿಕ ಧರ್ಮೋದ್ಧಾರಕ್ಕಾಗಿ ಆ ಆಕಾಲ ಸ್ಥಿತಿಗೆ

ತಕ್ಕಂತೆ ಉತ್ಸಾಹದಿಂದ ಕೈಕೊಂಡ ಮಾರ್ಗಗಳೆಂದು ಸಹಾನುಭೂತಿಯಿಂದ ದೃಷ್ಟಿಸಿ, ಇದರಲ್ಲಿ ರಮ್ಯವಾಗಿ ವಿವರಿಸಿರುವ ಮಾಧ್ವಮತ ತತ್ವಂಗಳನ್ನು ವಾಚಕರು ತಿಳಿದು ಆನಂದಿಸುವರೆಂದು ನಂಬುತ್ತೇನೆ! ಇಲ್ಲವಾದರೆ ಸಮಗ್ರ ಬ್ರಾಹ್ಮಣ್ಯಕ್ಕೇ ಕುಂದಕವೊದಗುತ್ತಿರುವ ಈ ವಿಷಮಕಾಲದಲ್ಲಿ ಒಳ ಒಡಕುಗಳಿಂದ ಮತ್ತಷ್ಟು ಹಾನಿಗೆ ಕಾರಣವಾಗಬಹುದು " ಎಂಬುದಾಗಿ ಅಪ್ಪಣೆಕೊಡಿಸಿರುವುದನ್ನು ನಾನು ಸಮ್ಮೋತನಾಡಿಗಳಲ್ಲಿ ವಿನಯದಿಂದ ಅರಿಕೆ ಮಾಡುವೆನು.

ಈಗ ಪ್ರಕಟವಾಗಿರುವ ಪುಸ್ತಕಂಗಳಲ್ಲಿ ಇರುವ ಈ ವಿಧವಾದ ನ್ಯೂನತೆಯು ಬಹುಶಃ ಪಂಡಿತವರ್ಯರಾದ ಮೂಲ ಗ್ರಂಥಕರ್ತರದಲ್ಲವೆಂದು ನಾನು ಭಾವಿಸಿ, ಪ್ರಾಜ್ಞರೂ ಸುಗುಣಮಣಿಗಣವಿಭೂಷಣರೂ ಆದ ಮೂಲಗ್ರಂಥಕರ್ತರೂ, ಸಂಸ್ಕೃತ ಕರ್ಣಾಟಕ ವ್ಯಾಖ್ಯಾನಕಾರರುಗಳೂ ನಮ್ಮ ಗುರುಗಳ ಸಮಾನರೆಂದು ಅಕಳಂಕಮತಿಯಿಂದ ಗೌರವಿಸಿ, ಅನೇಕ ಅಮೂಲ್ಯ ಪ್ರಮೇಯಂಗಳಿಂದೆಸೆವೀ ಗ್ರಂಥವು ಸರ್ವಜನಾದರಣೀಯವಾಗಿರಬೇಕೆಂದು ಬಯಸಿ, ಸಂಸ್ಕೃತಭಾಷಾನಭಿಜ್ಞರಾಗಿರುವ ಸಮ್ಮೋಡನಾಡಿಗಳಿಗೆ ಈ ಸದ್ಗ್ರಂಥದ ಸುಧೆಯನುಣಿಸಲೆಳಸಿ, ಈಗ ಪ್ರಚಾರದಲ್ಲಿರುವ ಪುಸ್ತಕಗಳೊಳಗೆ ಪರಮತೀಯರ ವಿಷಯವಾಗಿ ವಿವರಿಸಿರುವ ಕೇವಲ ದೂಷಣೀಯಾಂಶಗಳನ್ನು ದೂರೀಕರಿಸಿ, ನನ್ನ ಶಕ್ತ್ಯನುಸಾರವಾಗಿ ಮೂಲ ಗ್ರಂಥಕಾರರ ಅಭಿಪ್ರಾಯವು ಭಿನ್ನವಾಗದಂತೆ ಕನ್ನಡಿಸಿರುವೆನು. ತಮ್ಮ ಮತ ಪ್ರಾಶಸ್ತ್ಯವನ್ನು ಪ್ರಕಟಿಸುವಾಗ ಇತರ ಮತಂಗಳ ನ್ಯೂನಾತಿರೇಕಂಗಳನ್ನು ಯುಕ್ತರೀತಿಯಿಂದ ಸೂಚಿಸುವುದು ಅಷ್ಟು ತಪ್ಪು ಎಂದು ಗಣಿಸಲ್ಪಡಲಾರದು. ಕೇವಲ ಅಸೂಯೆಯಿಂದಲೇ ಇತರರ ಮರ್ಮಸ್ಪೃಕ್ಕಾಗುವಂತೆ ದೋಷೋದ್ಘಾಟನೆ ಮಾಡಿ, ತಮ್ಮ ದೂಷಣೆಯಿಂದಲೇ ಪ್ರತಿಪಕ್ಷೀಯರ ತೇಜೋಭಂಗವಾಗುವುದೆಂದು ಎಣಿಸುವುದೂ, ಆ ಮೂಲಕವೇ ತಮಗೆ ಪ್ರಾಶಸ್ತ್ಯವುಂಟಾಗುವುದೆಂದು ಭಾವಿಸುವುದೂ, ಸಮಂಜಸವಲ್ಲ

ವೆಂದು ನಾನೆಣಿಸುವಂತೆಯೇ ಆರಾದರೂ ತಿಳಿಯದಿರಲಾರರೆಂದೂಹಿಸುವೆನು.

ಈ ಅಭಿಪ್ರಾಯದಂತೆಯೇ ಈ ಗ್ರಂಥವನ್ನು ನಾನು ಸಿದ್ಧಗೊಳಿಸಿರುವುದರಿಂದ ಇದು ಮೂಲಗ್ರಂಥದ ಪ್ರತಿಬಿಂಬವಾಗದೆ ಅದರ ಛಾಯೆಯೆನ್ನಿಸುವುದು. ಆದುದರಿಂದಲೇ ಇದಕ್ಕೆ ಮಣಿಮಂಜರಿಯ ಕರ್ಣಾಟಕಾನುವಾದವೆಂಬ ಹೆಸರನ್ನು ತಪ್ಪಿಸಿ ನನ್ನ ಹಿತಾಕಾಂಕ್ಷಿಗಳ ಅಪ್ಪಣೆಯಂತೆ "ಶ್ರೀ ಕರ್ಣಾಟಕ ವಚನ ಮಣಿಮಂಜರಿ" ಎಂದು ಬದಲಾಯಿಸಿದುದಾಯಿತು. ನನ್ನ ಪದ್ಧತಿಯಂತೆ ಈ ಗ್ರಂಥವನ್ನು ಪರಿಷ್ಕರಣೆಯ ಬಗ್ಗೆ ಪಂಡಿತಮಂಡಲಿಗೆ ಸಮರ್ಪಿಸಿರಲು ಸಹಜ ಶಾಂತಿವಿಭೂಷಣರೂ ಪರೋತ್ಕರ್ಷ ಸಹಿಷ್ಣುಗಳೂ ಆಗಿರುವ ತ್ರಿಮತಸ್ಥ ಸುವಿಚಕ್ಷಣಮಣಿಗಳೂ ಆದರದಿಂದ ನನ್ನ ಪ್ರಾರ್ಥನೆಯನ್ನು ಲಾಲಿಸಿ ಪರಿಷ್ಕರಿಸಿ, ತಮ್ಮ ಸದಭಿಪ್ರಾಯಂಗಳನ್ನು ದಯೆಯಿಟ್ಟು ಆಶೀರ್ವಾದಪೂರ್ವಕವಾಗಿ ಅಪ್ಪಣೆಕೊಡಿಸಿರುವದನ್ನು ಕೃತಜ್ಞತೆಯೊಡನೆ ಶಿರಸಾವಹಿಸಿ ಗುಣಗ್ರಾಹಿಗಳಾದ ನಮ್ಮ ವಾಚಕವರ್ಗದ ಮುಂದಿರಿಸಿರುವೆನು.

ಈ ಗ್ರಂಥದಲ್ಲಿ ನನ್ನ ಅಲ್ಪಜ್ಞತೆಯಿಂದ ಉಂಟಾಗಿರಬಹುದಾದ ಆವ ದೋಷಂಗಳನ್ನಾದರೂ ದಯೆಯಿಟ್ಟು ಯುಕ್ತ ರೀತಿಯಿಂದ ನನಗೆ ಸೂಚಿಸಿ ಸರಿಪಡಿಸಿಕೊಳ್ಳುವಂತೆ ಮಾಡುವುದರ ಮೂಲಕವೂ, ಇದರಲ್ಲಿ ಗುಣಾಣುವಾದರೂ ಇದ್ದಲ್ಲಿ ಅದರಿಂದ ಸಂತೋಷಪಡುವುದರ ಮೂಲಕವೂ, ಇಂತಹ ಗ್ರಂಥಂಗಳನ್ನು ಅನಸೂಯೆಯಿಂದ ಪ್ರಚಾರಪಡಿಸಿ ಈಗ ಸಾಮಾನ್ಯವಾಗಿ ಲೋಕದಲ್ಲಿ ಹರಡಿರುವ ಪರಸ್ಪರ ಮತದ್ವೇಷಂಗಳನ್ನು ಹೋಗಲಾಡಿಸುವುದರಮೂಲಕವೂ, ಸಹಜ ಸುಗುಣವಿಭೂಷಣರಾದ ವಿಚಕ್ಷಣರು ತಮ್ಮ ಸೌಜನ್ಯವನ್ನು ಪ್ರಕಾಶಪಡಿಸಿ ಅಲ್ಪಜ್ಞನಾದ ನನಗೆ ಪ್ರೋತ್ಸಾಹವನ್ನೂ, ಕರ್ಣಾಟಕ ವಾಙ್ಮಯಕ್ಕೆ ಸಹಾಯವನ್ನೂ, ಲೋಕಕ್ಕೆ ಮಹೋಪಕಾರ

ವನ್ನೂ ಮಾಡಬೇಕೆಂದು ವಿನಯ ವಂದನಪೂರ್ವಕವಾಗಿ ಪ್ರಾರ್ಥಿಸುವೆನು.

ಈ ಗ್ರಂಥ ಪರಿಷ್ಕರಣೆಗೂ ಪ್ರಕಟನೆಗೂ ಸಹಾಯ ಮಾಡಿರುವ ಮಹಾಶಯರುಗಳ ಮಹೋಪಕಾರಗಳು ಚಿರಸ್ಮರಣೀಯಂಗಳಾಗಿರುವುವು.

ಸಜ್ಜನ ವಿಧೇಯ,
ಗ್ರಂಥಕರ್ತ.

ವಿಭವ ಸಂ॥ ಮಾರ್ಗಶಿರ ಶುದ್ಧ
೬ ಮಂಗಳವಾರ
ಶಾಲೀವಾಹನ ೧೮೫೦
ಹೂಣ ವರ್ಷ, ೧೮—೧೨—೧೯೨೮.

ಕರ್ಣಾಟಕ ಸಾಹಿತ್ಯ ನಿಧಿ,
ಶಾ. **ವೆಂಕಟರಮಣಯ್ಯ,**
ಅಲಕಾಪುರ.

ಅಶುದ್ಧ ಶೋಧನೆ.

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
11	17	ಮಹಾತ್ಮವನ್ನೇ	ಮಾಹಾತ್ಮ್ಯವನ್ನೇ
12	20	ಆಶಾಪರಭೀತಿಯಿಂದ	ಆಶಾಪದಭೀತಿಯಿಂದ
16	6	ಸವಯಸ್ಕರಾದ	ಸಮ ವಯಸ್ಕರಾದ
18	11	ದೇನುಕಾಸುರನನ್ನು	ಧೇನುಕಾಸುರನನ್ನು
19	12	ಮಯಾಪುತ್ರನಾದ	ಮಯುಪುತ್ರನಾದ
20	5	ಪರಾಯಣನಾದ	ಪರಾಯಣನೂ
48	19	ಬೋಧಿಸಿದರು	ಬೋಧಿಸಿದನು
56	4	ನಾದನು ಜಾರಾತಿ	ನಾದನುಜಾರಾತಿ

ಶ್ರೀರಾಮ

ಶ್ರೀ ಕರ್ಣಾಟಕ ವಚನ ಮಣಿಮಂಜರಿ

ಮೊದಲನೆಯ ಸರ್ಗ

ಕಂದ|| ಶ್ರೀರಮೆಯಾಣ್ಮನ ಚರಣಸ |
ರೋರುಹಕಭಿನಮಿಸಿ ಮಧ್ವಗುರುಗಳಶಿಷ್ಯರ್ ||
ನಾರಾಯಣಾರ್ಯರೊರೆದಾ |
ಸಾರಸುಮಣಿಮಂಜರೀ ಪ್ರಬಂಧಮನೀಗಳ್ ||೧||

ಕಂದ|| ವೇಂಕಟರಮಣಂ ಸಜ್ಜನ |
ಕಿಂಕರನಬ್ಜೋದರಾಂಘ್ರಿ ಪಂಕಜಮಧುಪಂ ||
ಶಂಕೆಯುದಳಿವಂದದೆಬರೆ |
ದಂಕನ್ನಡಭಾಷೆಯಲ್ಲಿ ಪದುಳಂಬಡೆಯಲ್ ||೨||

ಶ್ರೀಮದಾನಂದ ಜ್ಞಾನಂಗಳೇ ಆಕಾರವಾಗಿ ಉಳ್ಳ ಅಥವಾ ಭಜಕರಿಗೆ ಆನಂದ ಜ್ಞಾನಂಗಳನ್ನು ಅನುಗ್ರಹಿಸುವ, ಈಹೆ (ಇಚ್ಛೆ) ಯುಳ್ಳ, ಲಕ್ಷ್ಮೀದೇವಿಯ ಪತಿಯೂ ಮತ್ತು ಶ್ರೀಮದಾನಂದ ತೀರ್ಥರ ಭಕ್ತಿಗೆ ಮುಖ್ಯ ವಿಷಯನೂ, ನಾಶರಹಿತನೂ ಆದ, ಶ್ರೀಮನ್ನಾರಾಯಣ ಸ್ವಾಮಿಯನ್ನು ನಮಸ್ಕರಿಸುವೆನು. ಎಂಬು

ದಾಗಿ ನಮಸ್ಕ್ರಿಯಾತ್ಮಕ ಮಂಗಳಾಚರಣವನ್ನು ಮಾಡಿ ಶ್ರೀಮನ್ನಾರಾಯಣ ಪಂಡಿತಾಚಾರ್ಯರವರು ಗ್ರಂಥಾರಂಭವನ್ನು ಮಾಡುವರು.

ಸಮಸ್ತ ಸದ್ಗುಣ ಸಂಪನ್ನನಾದ ಪರಮಾತ್ಮನು ಮೊದಲು ಪ್ರಕೃತಿಯು ದೆಸೆಯಿಂದ, ಸತ್ವ-ರಜಸ್-ತಮೋ-ಗುಣಂಗಳನ್ನು ಸೃಜಿಸಿ, ಇವುಗಳಿಂದ ಬ್ರಹ್ಮದೇವರ ಶರೀರಭೂತವಾದ ಮಹತ್ತತ್ತ್ವವನ್ನು ಸೃಷ್ಟಿಸಿದನು. ಆ ಮಹತ್ತತ್ತ್ವದಿಂದ ಶಿವಸಂಗವಾದ ಅಹಂಕಾರತತ್ತ್ವವನ್ನೂ, ವೈಕಾರಿಕ-ತೈಜಸ-ತಾಮಸಗಳೆಂಬ ತತ್ತ್ವಗಳನ್ನೂ, ಇವುಗಳಿಂದ ದೇವತಾ ಸಂಬಂಧಿಗಳಾದ ದೇಹಂಗಳನ್ನೂ, ಮನಸ್ತತ್ತ್ವವನ್ನೂ, ಇಂದ್ರಿಯಂಗಳನ್ನೂ, ಆಕಾಶವನ್ನೂ, ಆಕಾಶದಿಂದ ವಾಯುವನ್ನೂ, ವಾಯುವಿನಿಂದ ತೇಜಸ್ಸನ್ನೂ, ತೇಜಸ್ಸಿನಿಂದ ಸಲಿಲವನ್ನೂ, ಸಲಿಲದಿಂದ ಇಳೆಯನ್ನೂ ಉಂಟುಮಾಡಿದನು.

ಆಮೇಲೆ ಬ್ರಹ್ಮಾಂಡವೇ ದೇಹವಾಗುಳ್ಳ ಅಜ್ಞಾನಾದಿ ಕೃತ ವಿಕಾರರಹಿತನಾದ ವಿಧಿಯನ್ನು ಉತ್ಪತ್ತಿಮಾಡಿದನು. ಆ ಬ್ರಹ್ಮಾಂಡದಲ್ಲಿ ಭೂಲೋಕ, ಭುವರ್ಲೋಕ, ಸುವರ್ಲೋಕ, ಜನೋಲೋಕ, ತಪೋಲೋಕ, ಮಹಾಲೋಕ, ಸತ್ಯಲೋಕ, ಎಂಬ ಊರ್ಧ್ವಲೋಕಂಗಳೇಳನ್ನೂ, ಅತಲ, ವಿತಲ, ಸುತಲ, ತಲಾತಲ, ರಸಾತಳ, ಮಹಾತಳ, ಪಾತಾಳ ಎಂಬ ಅಧೋಲೋಕಂಗಳೇಳನ್ನೂ ಉಂಟುಮಾಡಿದನು. ಆಮೇಲೆ ಪುರುಷನಾಮಕರಾದ ಬ್ರಹ್ಮದೇವರು, ತಾತ್ವಿಕರಾದ ದೇವತೆಗಳನ್ನೂ, ನಿತ್ಯಸನ್ಯಾಸಿಗಳಾದ ಮತ್ತು ಹರಿಧ್ಯಾನ ತತ್ಪರರಾದ ಸನಕಾದಿ ಯೋಗಿಗಳನ್ನೂ, ದೋಷಂಗಳೇ ಪ್ರಧಾನವಾಗುಳ್ಳ ದೈತ್ಯರನ್ನೂ, ಪಂಚಪರ್ವ (ತಮಸ್ಸು-ಮೋಹ-ಮಹಾಮೋಹ - ತಾಮಿಸ್ರ - ಅಂಧತಾಮಿಸ್ರ ಎಂಬ ಐದು ಪರ್ವಂಗಳು) ಸಂಬಂಧಿಯಾದ ಅವಿದ್ಯೆಯನ್ನೂ, ಬ್ರಹ್ಮಚರ್ಯಾದಿ ವರ್ಣಾಶ್ರಮ ಧರ್ಮವ್ಯವಸ್ಥೆಯನ್ನೂ ಮಾಡಿದನು. ಮತ್ತು ಆ ಬ್ರಹ್ಮ

ದೇವರ ಅಂಗಂಗಳ ದೆಸೆಯಿಂದ ಮರೀಚಿ-ಅತ್ರಿ ಮೊದಲಾದ ಮಹ ರ್ಷಿಗಳುತ್ಪನ್ನರಾದರು. ಆ ಮರೀಚಿ ಮುನೀಂದ್ರನಿಂದ ವಾಮನ ಮೂರ್ತಿಯ ಜನಕನೆನ್ನಿಸಿದ ಕಶ್ಯಪ ಮಹರ್ಷಿಯು ಜನಿಸಿದನು. ಆ ಕಶ್ಯಪಮಹರ್ಷಿಯು ಅನೇಕ ವಿಧಂಗಳಾದ ಸಂತಾನಂಗಳನ್ನು ಪಡೆಯುವ ಕಾಂಕ್ಷೆಯಿಂದ, ದಿತಿ–ಅದಿತಿ–ದನು–ಕದ್ರು–ವಿನತೆ– ಕೀಕಸೆ ಮುಂತಾದ ಹದಿಮೂರು ಮಂದಿ ಸ್ತ್ರೀಯರನ್ನು ಮದುವೆ ಯಾದನು. ದಿತಿಯಲ್ಲಿ ದೈತ್ಯರೂ, ಅದಿತಿಯಲ್ಲಿ ದೇವತೆಗಳೂ, ದನು ಎಂಬವಳಲ್ಲಿ ದಾನವರೂ, ಕದ್ರುವಿನಲ್ಲಿ ಬಗೆಬಗೆಯಾದ ವಿಷಂಗಳಿಂದ ಕೂಡಿದ ಕ್ರೂರ ಸರ್ಪಂಗಳೂ, ವಿನತಾದೇವಿಯಲ್ಲಿ ಅರುಣ–ಗರು ಡರೂ, ಕೀಕಸಾದೇವಿಯಲ್ಲಿ ರಾಕ್ಷಸರೂ ಹುಟ್ಟಿದರು. ಈ ಕಶ್ಯಪ ಮಹರ್ಷಿ ಸುತರಾದ ಸವಿತೃ(ಸೂರ್ಯ)ದೇವರ ದೆಸೆಯಿಂದ ಮಾನವ ರಿಗೆ ತಂದೆಯೆನಿಸುವ ವೈವಸ್ವತಾಖ್ಯಮನುವುದಿಸಿದನು. ಆ ವೈವ ಸ್ವತ ಮನುವಿನ ಮೂಗಿನಿಂದ ಅವನು ಸೀನುವಾಗ ಶ್ರೀಮಂತನಾದ, ಇಕ್ಷ್ವಾಕು ಮಹಾರಾಜನುದ್ಭವಿಸಿದನು. ಆ ಇಕ್ಷ್ವಾಕು ಮಹಾ ರಾಜನು ಬ್ರಹ್ಮದೇವರ ವರಪ್ರಸಾದದಿಂದ ಶ್ರೀರಂಗನಾಥಸ್ವಾಮಿಯ ಪ್ರತಿಮೆಯನ್ನು ಪಡೆದು ಅದನ್ನಾರಾಧಿಸುತ್ತಿದ್ದನು. ಆತನಿಗೆ ವಿಕುಕ್ಷಿಯೆಂಬ ರಾಜನು ಮಗನಾದನು. ಹೀಗೆ ಈ ವಂಶದಲ್ಲಿ ಪಾರಂಪರ್ಯವಾಗಿ ಪುರಂಜಯನೇ ಮೊದಲಾದ ಅನೇಕರು ಜ್ಞಾನಿ ಗಳೂ ರಾಜರ್ಷಿಗಳೂ ಪರಾಕ್ರಮಶಾಲಿಗಳೂ ಆದ ರಾಜರು ಜನಿಸಿ ದರು. ಇವರಲ್ಲಿ ಪ್ರಸಿದ್ಧನಾದ ದಶರಥಮಹಾರಾಜನು ಇಕ್ಷ್ವಾಕು ಮಹಾರಾಜನಿಗೆ ಬ್ರಹ್ಮದೇವರಿಂದ ಲಬ್ಧವಾಗಿ ಆತನ ವಂಶಪಾರಂಪ ರ್ಯವಾಗಿ ತನಗೆ ಪ್ರಾಪ್ತವಾಗಿದ್ದ ಶ್ರೀ ರಂಗನಾಥಮೂರ್ತಿಯನ್ನು ಆರಾಧಿಸುತ್ತಾ ವಿಷ್ಣುಭಕ್ತನೂ ಪರಾಕ್ರಮಶಾಲಿಯೂ ಆಗಿ ಧರ್ಮ ದಿಂದ ರಾಜ್ಯಭಾರಮಾಡುತ್ತಿದ್ದನು.

ಆ ಕಾಲದಲ್ಲಿ ಮಹಾ ರಾಕ್ಷಸನಾದ ರಾವಣನಿಂದ ಪೀಡಿತ ರಾದ ದೇವತೆಗಳು ಕ್ಷೀರ ಸಮುದ್ರಶಾಯಿಯಾದ ಮಹಾ ವಿಷ್ಣು

ವಿಸ ಮರೆ ಹೊಕ್ಕು ಆ ಪರಮಾತ್ಮನನ್ನು ಭೂಭಾರಹರಣಾರ್ಥವಾಗಿ ಭೂಲೋಕದಲ್ಲಿ ಅವತರಿಸಬೇಕೆಂದು ಪ್ರಾರ್ಥಿಸಿ, ವಾಗ್ದಾನವನ್ನು ಪಡೆದು ಬ್ರಹ್ಮದೇವರ ಆಜ್ಞೆಯಂತೆ ತಾವುಗಳು, ಕಪಿ-ಭಲ್ಲೂಕ-ಗೋಲಾಂಗೂಲರೂಪಂಗಳಿಂದ ಭೂಮಿಯಮೇಲುದಿಸಿದರು. ಅದೇ ಸಮಯದಲ್ಲಿಯೇ ದಶರಥಮಹಾರಾಜನು ಪುತ್ರಕಾಮೇಷ್ಟಿಯನ್ನಾಚರಿಸಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗಿರಲು, ಶ್ರೀಮನ್ನಾರಾಯಣನು ದೇವತೆಗಳ ಪ್ರಾರ್ಥನೆಗಳನ್ನು ಈಡೇರಿಸಲಿಕ್ಕೂ, ದಶರಥ ರಾಜನ ಇಷ್ಟಾರ್ಥಪೂರಣಮಾಡಲಿಕ್ಕೂ, ಆ ದಶರಥರಾಜನ ಪಟ್ಟಮಹಿಷಿಯರಲ್ಲಿ ದೊಡ್ಡವಳಾದ ಕೌಸಲ್ಯಾ ದೇವಿಯಲ್ಲಿ ಶ್ರೀರಾಮಾಭಿಧಾನದಿಂದ ಅವತರಿಸಲಿಚ್ಛಿಸಿದನು. ದಶರಥರಾಜಕೃತ ಪುತ್ರಕಾಮೇಷ್ಟಿಯ ಪೂರ್ಣಾಹುತಿಯ ಸಮಯದಲ್ಲಿ ವೈತಾನಾಗ್ನಿಯಿಂದ ಆವಿರ್ಭವಿಸಿದ ದೇವತೆಯಿಂದ ಕೊಡಲ್ಪಟ್ಟ ಪರಮಾನ್ನವನ್ನು ದಶರಥರಾಜನು ತನ್ನ ಮಹಿಷಿಯರಿಗೆ ಹಂಚುವಾಗ ತನ್ನ ಬಳಿಯಲ್ಲಿದ್ದ ಕೌಸಲ್ಯಾದೇವಿಗೆ ಅರ್ಧವನ್ನೂ ಉಳಿದರ್ಧದಲ್ಲಿ ಸುಮಿತ್ರಾದೇವಿಗೆ ಅರ್ಧವನ್ನೂ ಉಳಿದರ್ಧವನ್ನು ಎರಡುಭಾಗಮಾಡಿ ಕೈಕಯಿದೇವಿಗೆ * ಒಂದಂಶವನ್ನು ಕೊಟ್ಟು ಉಳಿದ ಒಂದುಪಾಲೆಂದರೆ ಮೊದಲಿನ ಪಾಯಸದಲ್ಲಿ ಎಂಟರಲ್ಲೊಂದುಪಾಲನ್ನು ಆರಿಗೆ ಕೊಡಬೇಕೆಂಬ ಆಲೋಚನೆಯುಂಟಾಗಿ, ಮೊದಲನವಳಾದ ಕೌಸಲ್ಯಾದೇವಿಗೆ ಅರ್ಧಭಾಗವೂ, ಎರಡನೆಯವಳಾದ ಸುಮಿತ್ರಾದೇವಿಗೆ ನಾಲ್ಕರಲ್ಲಿ ಒಂದುಭಾಗವೂ ಮೂರನೆಯವಳಾದ ಕೈಕಯಿದೇವಿಗೆ ಎಂಟರಲ್ಲಿ ಒಂದು ಭಾಗವೂ ಕೊಟ್ಟಿರುವುದು ಯುಕ್ತವಾಗಿದೆ. ಉಳಿದಿರುವ ಎಂಟನೆಯೊಂದಂಶವನ್ನೂ ಕೈಕಯಿದೇವಿಗೆ ಕೊಟ್ಟರೆ ಎರಡನೆಯವಳಿಗೂ ಮೂರನೆಯವಳಿಗೂ ಸಮವಾಗಿ ಕೊಟ್ಟಂತಾಗುವುದರಿಂದ ಆ ಕ್ರಮವು ಸರಿಯಲ್ಲ. ಎರಡನೆಯವಳಿಗೆ ಮೂರನೆಯವಳಿಗಿಂತಲೂ ಹೆಚ್ಚಿನ ಅಂಶವನ್ನು ಕೊಡುವುದು ಸರಿಯೆಂದುಭಾವಿಸಿ ಉಳಿದಿದ್ದಂಶವನ್ನು ಸುಮಿತ್ರಾದೇವಿಗೇಕೊಟ್ಟನು.

* „ಕೈಕೇಯಿ" ಶಬ್ದವು ಶ್ರುತಿ ದುಷ್ಟವಾದೀತೆಂದು „ಕೈಕಯಿ" ಎಂದು ತಿದ್ದಿದೆ.

ಈಕಾರಣದಿಂದಲೇ ಕೌಸಲ್ಯಾದೇವಿಗೆ ಶ್ರೀರಾಮಮೂರ್ತಿ, ಸುಮಿತ್ರಾದೇವಿಗೆ ಲಕ್ಷ್ಮಣಮೂರ್ತಿ ಮತ್ತು ಶತ್ರುಘ್ನನು, ಕೈಕಯೀದೇವಿಗೆ ಭರತನು, ಉದಿಸಿದರು. ಭರತನು ಪ್ರದ್ಯುಮ್ನಾಂಶದಿಂದಲೂ, ಶತ್ರುಘ್ನನು ಅನಿರುದ್ಧಾಂಶದಿಂದಲೂ, ಲಕ್ಷ್ಮಣನು, ಶೇಷಾಂಶದಿಂದಲೂ ಶ್ರೀರಾಮಮೂರ್ತಿ ಶೇಷಶಾಯಿಯ ಅಂಶದಿಂದಲೂ ಅವತರಿಸಿದುದರಿಂದಲೇ ಸಹಜವಾದ ಪರಸ್ಪರಾನುರಾಗವುಳ್ಳವರಾಗಿದ್ದರು.

ದಶರಥಮಹಾರಾಜನು ಧರ್ಮ–ಅರ್ಥ–ಕಾಮ–ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಂಗಳಿಂದಲೋ ಎಂಬಂತೆ ಈ ನಾಲ್ವರು ಮಕ್ಕಳಿಂದ ಕೂಡಿ ಆನಂದದಿಂದಿದ್ದನು. ಒಂದಾನೊಂದು ಸಮಯದಲ್ಲಿ ವಿಶ್ವಾಮಿತ್ರ ಮಹರ್ಷಿಗಳು ಸಿದ್ಧಾಶ್ರಮದಲ್ಲಿ ತಾವು ಆಚರಿಸುತ್ತಿದ್ದ ಯಜ್ಞಕ್ಕೆ ವಿಘ್ನಕಾರಿಗಳಾದ ರಾಕ್ಷಸರನ್ನು ನಿಗ್ರಹಿಸಲೋಸುಗ ಲಕ್ಷ್ಮಣಸಹಿತನಾದ ಶ್ರೀರಾಮಮೂರ್ತಿಯನ್ನು ಕರೆದುಕೊಂಡು ಹೋಗಲು, ಶ್ರೀರಾಮಮೂರ್ತಿಯು, ತಾಟಕೆಯೆಂಬ ರಾಕ್ಷಸಿಯನ್ನೂ ಅವಳ ಅನುಯಾಯಿಗಳನ್ನೂ ಸಂಹರಿಸಿ, ಯಜ್ಞವಿಘ್ನಕರರಾದ ರಾಕ್ಷಸರನ್ನು ನಿಗ್ರಹಮಾಡಿ, ಯಜ್ಞ ಸಮಾಪ್ತಿ ನಂತರ ವಿಶ್ವಾಮಿತ್ರ ಮಹರ್ಷಿಗಳೊಡನೆ ವಿದೇಹರಾಜ್ಯವನ್ನು ಪ್ರವೇಶಿಸಿ, ರಾಜಧಾನಿಯಾದ ಮಿಥಿಲಾನಗರವನ್ನು ಸೇರಿ, ಜನಕನೆಂಬ ಅಲ್ಲಿಯ ರಾಜನಿಂದ ಸನ್ಮಾನಿತನಾಗಿ, ಆತನಲ್ಲಿದ್ದ ಶೈವ ಧನುವನ್ನು ಮುರಿದು, ಆತನ ಸುತೆಯೆನಿಸಿದ ಜಾನಕೀದೇವಿಯನ್ನು ಪಾಣಿಗ್ರಹಣ ಮಾಡಿಕೊಂಡು, ಆಬಳಿಕ ಆಕೆಯಿಂದಲೂ ಲಕ್ಷ್ಮಣ–ವಸಿಷ್ಠ–ವಿಶ್ವಾಮಿತ್ರ ಮಹರ್ಷಿಗಳಿಂದಲೂ, ಕೂಡಿ ಅಯೋಧ್ಯಾನಗರವನ್ನು ಸೇರಿದನು. ಆ ಸಮಯದಲ್ಲಿ ವಸಿಷ್ಠರು ಬೃಹಸ್ಪತ್ಯಾಚಾರ್ಯರಂತೆಯೂ, ವಿಶ್ವಾಮಿತ್ರರು ಶುಕ್ರಾಚಾರ್ಯರಂತೆಯೂ, ಲಕ್ಷ್ಮಣಮೂರ್ತಿಯು ಪುನರ್ವಸು ನಕ್ಷತ್ರದಂತೆಯೂ, ಸೀತಾದೇವಿಯು ಚಂದ್ರಿಕೆಯಂತೆಯೂ ಶ್ರೀರಾಮಮೂರ್ತಿಯು ಚಂದ್ರಮನಂತೆಯೂ ಪ್ರಕಾಶಿಸುತ್ತಿದ್ದರು. ಸದಾನಂದಜ್ಞಾನಂಗಳೇ ಮೂರ್ತಿಮತ್ತಾಗಿ

ರುವ ಶ್ರೀರಾಮಮೂರ್ತಿಯು ಆ ನಗರ ಪ್ರವೇಶಾನಂತರದಲ್ಲಿ ತಂದೆಯಾದ ದಶರಥರಾಜನಿಗೂ, ತಾಯಿಯರಾದ ಕೌಸಲ್ಯಾ–ಸುಮಿತ್ರಾ–ಕೈಕಯಿದೇವಿಯರಿಗೂ, ಇನ್ನೂ ಇರುವ ಆರ್ಯರಿಗೂ ವಂದಿಸಿ, ಪಟ್ಟಣಿಗರ ಅಪೂರ್ವವಾದ ಭಕ್ತಿ ವಿಶ್ವಾಸಂಗಳಿಗೆ ಪಾತ್ರನಾಗಿದ್ದನು.

ಆಬಳಿಕ ತನ್ನ ದೊಡ್ಡ ಮಗನಾದ ಶ್ರೀರಾಮಮೂರ್ತಿಗೆ ರಾಜ್ಯಾಭಿಷೇಕ ಮಾಡಬೇಕೆಂದು ದಶರಥ ಮಹಾರಾಜನು ಪ್ರಯತ್ನಿಸಲು, ಮಂಥರೆಎಂಬ ದಾಸಿಯ ದುರ್ಬೋಧನೆಯಿಂದ ಕೈಕಯಿಯು ತನ್ನ ಮಗನಾದ ಭರತನಿಗೆ ರಾಜ್ಯಾಭಿಷೇಕ ಮಾಡಬೇಕೆಂದೂ ಶ್ರೀರಾಮನನ್ನು ಅರಣ್ಯವಾಸಕ್ಕೆ ಕಳುಹಿಸಬೇಕೆಂದೂ, ತನಗೆ ಆತನು ಹಿಂದೆ ಕೊಟ್ಟಿದ್ದ ಎರಡು ವರಂಗಳನ್ನು ಈ ರೀತಿಯಾಗಿ ನೆರವೇರಿಸಬೇಕೆಂದು ಹಠವನ್ನು ಹಿಡಿದಳು. ತಮ್ಮನಾದ ಲಕ್ಷ್ಮಣನಿಂದಲೂ ಸತಿಯಾದ ಸೀತಾದೇವಿಯಿಂದಲೂ ಕೂಡಿ ಶ್ರೀರಾಮಮೂರ್ತಿಯು ತನ್ನ ಪಿತೃವಾಕ್ಯಪರಿಪಾಲನೆಗೋಸ್ಕರ, ಅರಣ್ಯಕ್ಕೆ ಹೊರಟು ಹೋದನು. ಅಲ್ಲಿ ಅಣ್ಣನ ಅಪ್ಪಣೆಯಂತೆ ಲಕ್ಷ್ಮಣನು ರಾವಣನತಂಗಿಯೂ ಪಂಚಬಾಣಲುಪ್ತವಿವೇಕಿನಿಯೂ ಆದ ಶೂರ್ಪಣಖೆ ಎಂಬವಳ ಕರ್ಣನಾಸಿಕೆಗಳನ್ನು ಛೇದಿಸಿದುದರಿಂದ ಕೋಪೋದ್ರಿಕ್ತರಾದ, ಖರ–ದೂಷಣ–ತ್ರಿಶಿರರೆಂಬ ಆಕೆಯ ಸಂಬಂಧಿಗಳಾದ ಸುಪ್ರಸಿದ್ಧರಾದ ರಾಕ್ಷಸರು ತಮ್ಮ ಹದಿನಾಲ್ಕುಸಾವಿರ ಸೈನ್ಯದೊಡನೆ ಯುದ್ಧಕ್ಕೆ ಬರಲು, ಆ ಸರ್ವ ದುಷ್ಟರನ್ನೂ ಶ್ರೀರಾಮಮೂರ್ತಿಯು ಲೀಲಾಮಾತ್ರವಾಗಿ ಅರ್ಧ ಮುಹೂರ್ತದಲ್ಲಿ ಸಂಹರಿಸಿದನು. ಶ್ರೀರಾಮಮೂರ್ತಿಯೊಬ್ಬನಾಗಿದ್ದರೂ ಆ ಘೋರ ಯುದ್ಧಕಾಲದಲ್ಲಿ ಶತ್ರುಗಳಿಗೆ ಸರ್ವತೋಮುಖವಾಗಿ ಅನೇಕ ಸಹಸ್ರ ಶ್ರೀರಾಮರಿರುವಂತೆ ತೋರುತ್ತಿದ್ದನು. ಭಗವನ್ಮಾಯೆಯನ್ನು ವರ್ಣಿಸಲಸಾಧ್ಯ !

ಇಂತು ಕರ್ಣಾಟಕವಚನ ಮಣಿಮಂಜರಿಯಲ್ಲಿ
ಮೊದಲನೆಯ ಸರ್ಗವು ಮುಗಿದುದು

॥ ಶ್ರೀರಾಮಾರ್ಪಣಮಸ್ತು ॥

—:o:—

ಎರಡನೆಯ ಸರ್ಗ

ಪೂರ್ವೋಕ್ತ ರೀತಿಯಲ್ಲಿ ಅವಮಾನಿತಳಾದ ಶೂರ್ಪಣಖೆಯ ನಿಮಿತ್ತವಾಗಿ ಶ್ರೀರಾಮಮೂರ್ತಿಗೆ ತಕ್ಕ ಪ್ರತೀಕಾರ ಮಾಡಬೇಕೆಂಬ ಉದ್ದೇಶದಿಂದ ರಾವಣನು ಅರಣ್ಯದಲ್ಲಿದ್ದ ಸೀತಾದೇವಿಯನ್ನು ಅಪಹರಿಸಬೇಕೆಂದು ಪ್ರಯತ್ನಿಸುತ್ತಿರಲು, ಸರ್ವಜ್ಞೆಯಾದ ಸೀತಾದೇವಿಯು ತನ್ನಂತೆಯೇ ಒಂದಾಕೃತಿಯನ್ನು ನಿರ್ಮಿಸಿ, ಅದರಲ್ಲಿ ಇಂದ್ರನನ್ನು ಆವಾಹನೆ ಮಾಡಿ, ತಾನು ಸ್ವಯಂ ಕೈಲಾಸಕ್ಕೆ ಪ್ರಯಾಣ ಮಾಡಿದಳು. ಬಳಿಕ ರಾವಣನು, ಆ ಆಶ್ರಮದಲ್ಲಿ ತನಗೆ ಕಾಣಿಸುತ್ತಿದ್ದಾ ಸೀತಾಕೃತಿಯನ್ನೇ ಸಾಕ್ಷಾತ್ ಸೀತಾದೇವಿಯೆಂಬ ಭ್ರಾಂತಿಯಿಂದ ಅಪಹರಿಸಿಕೊಂಡುಹೋಗಿ ತನ್ನ ಲಂಕಾಪುರದಲ್ಲಿಯ ಅಶೋಕವನವೆಂಬ ಉದ್ಯಾನವನದಲ್ಲಿರಿಸಿದ್ದನು.

ಇತ್ತ ಶ್ರೀರಾಮಮೂರ್ತಿ ನಿತ್ಯಾವಿಯೋಗಿನಿಯಾದ ಸೀತಾದೇವಿಯನ್ನು ತಾನು ಕಾಣುತ್ತಿದ್ದರೂ, ಲೋಕರಿಗೆ ನೀತಿಯನ್ನು ಬೋಧಿಸುವುದಕ್ಕಾಗಿ ಸೀತಾದೇವಿಯನ್ನು ಕಾಣದೆ ವ್ಯಥೆಯೊಂದುತ್ತಿರುವವನ ರೀತಿಯಲ್ಲಿ ನಟಿಸುತ್ತಿದ್ದನು. ಆ ಸಮಯದಲ್ಲಿ ವಾಯುದೇವರ ಅಂಶದಿಂದ ಅಂಜನಾದೇವೀ ಗರ್ಭಸಂಭೂತರೂ ವಿಷ್ಣುಸೇವಾತತ್ಪರರೂ, ನಿರ್ದೋಷರೂ, ಭಕ್ತಿಪೂರ್ಣರೂ, ಆದ ಹನುಮಂತದೇವರು ಶ್ರೀರಾಮಮೂರ್ತಿಯನ್ನು ಕಂಡು, "ದುಃಖರಹಿತನಾಗಿ ಸುಖಲೀಲೆಯೇ ಸ್ವಭಾವವಾಗಿರುವ ಶ್ರೀರಾಮಮೂರ್ತಿ! ನಿನಗೆ ನಮಸ್ಕಾರವು! ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಬೇಕು." ಎಂದು ಅನೇಕ ಬಗೆಯಾಗಿ ಲೋಕ ಶಿಕ್ಷಾಗುರುವಾದ ಶ್ರೀರಾಮಮೂರ್ತಿಯನ್ನು ಪ್ರಾರ್ಥಿಸಿದರು. ಶ್ರೀರಾಮಮೂರ್ತಿಯು ಹನುಮಂತದೇವರೊಡನೆ ಹೋಗಿ ಸುಗ್ರೀವನನ್ನು ಕಂಡು ಆತನ ಸ್ನೇಹ

ವನ್ನು ಸಂಪಾದಿಸಿ, ಆತನ ಅಣ್ಣನಾದ ವಾಲಿಯನ್ನು ಸಂಹರಿಸಿದನು. ಆ ಸುಗ್ರೀವನಿಂದಾಜ್ಞಪ್ತರಾದ ಕಪಿಸೈನಿಕರು ನಾಲ್ಕು ದಿಕ್ಕುಗಳಿಗೂ ಸೀತಾನ್ವೇಷಣಕ್ಕಾಗಿ ಹೊರಟರು. ದಕ್ಷಿಣ ದಿಕ್ಕಿಗೆ ಆಂಜನೇಯಮೂರ್ತಿಯು ಹೊರಟು, ಸಮುದ್ರವನ್ನು ಲಂಘಿಸಿ, ಲಂಕೆಯಲ್ಲಿ ಸೀತಾದೇವಿಯನ್ನು ಸಂದರ್ಶಿಸಿ, ಆಕೆಗೆ ವಂದಿಸಿ, ಶ್ರೀರಾಮಮೂರ್ತಿಯ ಅಂಗುಳೀಯಕವನ್ನು ಆಕೆಗೆ ಸಮರ್ಪಿಸಿ, ಆಕೆಯಿಂದ ಚೂಡಾಮಣಿಯನ್ನು ಗುರುತಿಗಾಗಿ ಪಡೆದುಕೊಂಡು ಮುಂದಿನ ಕಾರ್ಯಸಾಧನೆಗಾಗಿ ಆಕೆ ಇದ್ದ ಅಶೋಕವನದಲ್ಲಿಯ ಒಂದು ಮರವನ್ನೇರಿ ಗರ್ಜಿಸಿ, ಆ ವನವನ್ನು ಭಂಗಮಾಡುತ್ತಿರಲು, ಯುದ್ಧಕ್ಕೆ ಬಂದ ರಾವಣನ ಮಗನಾದ ಅಕ್ಷನೇ ಮೊದಲಾದ ಅನೇಕಮಂದಿ ರಾಕ್ಷಸರನ್ನು ಕೊಂದು, ಇಂದ್ರಜಿತ್ತು ಪ್ರಯೋಗಿಸಿದ ಬ್ರಹ್ಮಾಸ್ತ್ರಕ್ಕೆ ಗೌರವವನ್ನು ಕೊಡಬೇಕೆಂಬ ಸದುದ್ದೇಶದಿಂದ ಆ ಬ್ರಹ್ಮಾಸ್ತ್ರಕ್ಕೆ ಬದ್ಧನಂತಿದ್ದು ರಾವಣನ ಆಸ್ಥಾನಕ್ಕೆ ಹೋಗಿ ಅಲ್ಲಿ ಅವನ ಆಜ್ಞೆಯಂತೆ ತನ್ನ ಬಾಲಕ್ಕೆ ರಾಕ್ಷಸರು ಹೊತ್ತಿಸಿದ ಬೆಂಕಿಯಿಂದಲೇ ಆ ಲಂಕಾಪುರವನ್ನು ದಹಿಸಿ, ಬಳಿಕ ಸಮುದ್ರವನ್ನು ದಾಟಿ ಹಿಂದಕ್ಕೆ ಬಂದು ತಟದಲ್ಲಿದ್ದ ಜಾಂಬವದಾದಿಗಳನ್ನೊಡಗೊಂಡು ಹೋಗಿ ಶ್ರೀರಾಮಮೂರ್ತಿಯನ್ನು ಸಂದರ್ಶಿಸಿ, ಚೂಡಾಮಣಿಯನ್ನು ಸಮರ್ಪಿಸಿ, ವಂದಿಸಿ, ಸೀತಾದೇವಿಯ ವೃತ್ತಾಂತವೆಲ್ಲವನ್ನೂ ನಿವೇದಿಸಿ ಸಂತೋಷಪಡಿಸಿದನು.

ಆಮೇಲೆ ಶ್ರೀರಾಮಮೂರ್ತಿಯು ಆಂಜನೇಯಮೂರ್ತಿಯಿಂದಲೂ, ಲಕ್ಷ್ಮಣ, ಸುಗ್ರೀವ, ಜಾಂಬವದಾದಿ ಸಕಲ ಪರಿವಾರದಿಂದಲೂ ಕೂಡಿ, ಸಮುದ್ರತೀರಕ್ಕೆ ಬಂದು ನಲಾದಿ ಕಪಿಸೈನ್ಯದಿಂದ ಸಮುದ್ರದಲ್ಲಿ ಬೆಟ್ಟಗಳ ಸೇತುವನ್ನು ನಿರ್ಮಿಸಿ, ಆ ಮಾರ್ಗವಾಗಿ ಸಮಸ್ತ ಪರಿವಾರದೊಡನೆಯೂ ಲಂಕಾಪುರವನ್ನು ಸೇರಿದನು.

ಅಲ್ಲಿ ಶ್ರೀರಾಮಮೂರ್ತಿಗೂ ರಾವಣನಿಗೂ ಘೋರ ಯುದ್ಧಾರಂಭವಾಗಲು ಪರಮಭಕ್ತನಾದ ಆಂಜನೇಯಮೂರ್ತಿಯು ಭಗವ

ತ್ಪ್ರೀತ್ಯರ್ಥವಾಗಿ ಅತಿಬಲರಾದ ನಿಕುಂಭಾದಿ ರಾಕ್ಷಸರನ್ನು ನಾಶಮಾಡಿದನು. ಮತ್ತು ಗಂಧಮಾದನ ಪರ್ವತವನ್ನು ತಂದು ಅದರಲ್ಲಿದ್ದ ಮೃತ ಸಂಜೀವಿನ್ಯಾದಿ ಮೂಲಿಕೆಗಳ ಗಾಳಿಯಿಂದ ಇಂದ್ರಜಿತ್ತುವಿನಿಂದ ಮೂರ್ಛೆಯೊಂದಿಸಲ್ಪಟ್ಟಿದ್ದ ಲಕ್ಷ್ಮಣನನ್ನೂ, ಕಪಿಸೈನ್ಯವನ್ನೂ ಚೇತರಿಸಿಕೊಳ್ಳುವಂತೆ ಮಾಡಿದನು. ಆಬಳಿಕ ಲಕ್ಷ್ಮಣನು ಇಂದ್ರಜಿತ್ತುವನ್ನು ಸಂಹರಿಸಿದನು. ಶ್ರೀರಾಮಮೂರ್ತಿಯು ರಾವಣಕುಂಭಕರ್ಣರನ್ನು ಕೊಂದನು. ಈ ರೀತಿಯಾಗಿ ದುಷ್ಟನಿಶಾಚರನಿಚಯ ನಿಧನಾನಂತರ ಶ್ರೀರಾಮಮೂರ್ತಿ ಅಶೋಕವನಕ್ಕೆ ಹೋಗಿ ಅಲ್ಲಿದ್ದ ಸೀತಾದೇವಿಯನ್ನು ಪರಿಗ್ರಹಿಸಿ, ಸೀತಾಲಕ್ಷ್ಮಣಾಂಜನೇಯಾದಿ ಸಮಸ್ತ ಪರಿವಾರದೊಡನೆ ಪುಷ್ಪಕವಿಮಾನಾರೂಢನಾಗಿ ಅಯೋಧ್ಯಾನಗರಿಗೆ ಬಂದು ಶ್ರೀರಾಮಪದಭಕ್ತಿಯುಕ್ತನಾದ ಭರತನಿಂದ ಪೂಜೆಗೊಂಡು, ಆತನನ್ನು ಸಂಭಾವಿಸಿ, ಪಟ್ಟಣಿಗರೆಲ್ಲರಿಂದಲೂ ಪೂಜೆಗೊಳ್ಳುತ್ತ, ಅಂತಃಪುರಕ್ಕೆ ಹೋಗಿ ತಾಯಿಯರಿಗೆ ನಮಸ್ಕರಿಸಿ, ಅವರುಗಳಿಂದ ಆಶೀರ್ವಾದಂಗಳನ್ನು ಪಡೆದು, ರಾಜ್ಯಾಧಿಕಾರವನ್ನು ವಹಿಸಿ, ವರ್ಣಾಶ್ರಮ ಧರ್ಮಗಳನ್ನು ಕಾಪಾಡುತ್ತಾ ಸುಖದಿಂದಲೂ ವೈಭವದಿಂದಲೂ ಸತ್ಕೀರ್ತಿಯುತನಾಗಿ ಪ್ರಕಾಶಿಸುತ್ತಿದ್ದನು.

ಆಂಜನೇಯ ಮೂರ್ತಿಯು ಶ್ರೀರಾಮಮೂರ್ತಿಯ ಸನ್ನಿಧಾನದಲ್ಲಿ ಸನಕಾದಿ ಮಹರ್ಷಿ ಕರಕಮಲಸಂಜಾತವಂಶಜರಾದ ದುರ್ವಾಸಾದಿ ಮಹರ್ಷಿಗಳಿಗೆ ವೇದಂಗಳ ವ್ಯಾಖ್ಯಾನಂಗಳನ್ನು ಉಪದೇಶಿಸುತ್ತಿದ್ದನು.

ಶ್ರೀರಾಮಮೂರ್ತಿಯು ರಾಜ್ಯಭಾರಮಾಡುವ ಕಾಲದಲ್ಲಿ ಒಬ್ಬ ರಜಕನು, ತನ್ನನುಮತಿಯಿಲ್ಲದೆ (ತನ್ನ) ಹೆಂಡತಿಯು ತವರ್ಮನೆಗೆ ಹೋದುದಕ್ಕಾಗಿ ಕೋಪಿಸಿಕೊಂಡು "ಎಲೆ! ರಾವಣನಿಂದ ಅಪಹೃತಳಾದ ಸೀತೆಯನ್ನು ರಾಮನು ಮತ್ತೆ ತಂದಿಟ್ಟು

ಕೊಂಡಂತೆ ನಿನ್ನನ್ನು ನಾನು ಮತ್ತೆ ಮನೆಗೆ ಸೇರಿಸಲಾರೆನು!" ಎನ್ನುತ್ತಿದ್ದ ಮಾತನ್ನು ಗೂಢಚಾರರ ಮೂಲಕವಾಗಿ ಕೇಳಿ, ಶ್ರೀ ರಾಮಮೂರ್ತಿ ಲೋಕಾಪವಾದಕ್ಕೆ ಅಂಜಿದವನಂತೆ ತನ್ನ ಸತಿಯಾದ ಸೀತಾದೇವಿಯನ್ನು ಅರಣ್ಯಕ್ಕೆ ಕಳುಹಿಸಿದನು. ಆದರೆ ಸುರಾಣಕರೆಂಬ ದೈತ್ಯರಿಗೆ ನರಕಪ್ರಾಪ್ತಿಯುಂಟುಮಾಡುವುದಕ್ಕಾಗಿ ಶ್ರೀ ರಾಮಮೂರ್ತಿಯು ಸೀತಾದೇವಿಯನ್ನು ಬಿಟ್ಟಂತಿದ್ದನೇ ಹೊರತು ಆಕೆಯಲ್ಲಿ ಆವದೋಷವೂ ಇರಲಿಲ್ಲ. ಸಾಕ್ಷಾದ್ವಿಷ್ಣುವಿನ ಅವತಾರವಾದ ಶ್ರೀರಾಮಮೂರ್ತಿಯೇ ಲೋಕಾಪವಾದಕ್ಕೆ ಅಂಜಿದಾಗ ಸಾಮಾನ್ಯರು ಲೋಕಾಪವಾದಕ್ಕೆ ಹೆದರಲೇ ಬೇಕೆನ್ನುವುದು ಅತಿಶಯೋಕ್ತಿಯಲ್ಲ.

ಆ ಬಳಿಕ ಶ್ರೀರಾಮಮೂರ್ತಿ ತಾನೇ ಯಜ್ಞಪುರುಷನಾದರೂ ಲೋಕದವರಿಗೆ ಮಾರ್ಗದರ್ಶಕನಾಗಿ ಅಶ್ವಮೇಧಾದಿ ಯಜ್ಞಂಗಳನ್ನು ಮಾಡಿ ಪರಮಾತ್ಮನನ್ನೂ ತದ್ವಿಭೂತಿಗಳಾದ ದೇವತೆಗಳನ್ನೂ ತೃಪ್ತಿಪಡಿಸಿದನು. ಶ್ರೀ ಸೀತಾದೇವಿಯು ಆ ಯಜ್ಞಂಗಳಲ್ಲಿ ಯಜ್ಞವೇದಿಕೆಯಮೇಲೆ ಮೂರ್ತೀಭವಿಸಿದ್ದು ಅಜ್ಞರಿಗೆ ಮಾತ್ರ ಅದೃಶ್ಯಳಾಗಿದ್ದಳು. ಅನಂತರ ಶ್ರೀರಾಮಮೂರ್ತಿಯು ವರ್ಣಾಶ್ರಮ ಧರ್ಮಶಾಸ್ತ್ರವನ್ನೂ ಸಾಙ್ಖ್ಯ ಎಂದರೆ ಜ್ಞಾನಯೋಗ ಮತ್ತು ಕರ್ಮಯೋಗ ಶಾಸ್ತ್ರಂಗಳನ್ನೂ ಪ್ರಸಿದ್ಧ ಪಡಿಸಿದನು. ಆಂಜನೇಯಮೂರ್ತಿಯು ಆ ಶಾಸ್ತ್ರಗಳನ್ನು ಅಭ್ಯಾಸಮಾಡಿ ಸಹಜವಾಗಿ ಪರಮಹಂಸರೆನ್ನಿಸಿದ ಬ್ರಹ್ಮದೇವರ ಮಾನಸ ಸಂಜಾತರಾದ ಸನಕಾದಿಗಳಿಗೂ ಶ್ರವಣಮಾಡಿಸಿದನು. ಆಮಹನೀಯ ಯೋಗಿಗಳು ಆಂಜನೇಯ ಮೂರ್ತಿಯಿಂದ ಬೋಧಿತವಾದ ತತ್ತ್ವಾರ್ಥಂಗಳನ್ನು ಚೆನ್ನಾಗಿ ಗ್ರಹಿಸಿದರು. ಶ್ರೀರಾಮನೇ ಜಗನ್ನಿಯಾಮಕನು! ಶ್ರೀ ರಾಮನೇ ಸರ್ವರಿಗೂ ಗತಿದಾಯಕನು! ಶ್ರೀರಾಮನಿಗೆ ನಮಸ್ಕಾರ! ಎಂಬುದಾಗಿ ಪ್ರಪಂಚವು ಶ್ರೀರಾಮಮೂರ್ತಿಯನ್ನು ಅನವರತವೂ ಕೊಂಡಾಡುತ್ತಿದ್ದುದು. ಆ ಸಮಯದಲ್ಲಿ ದೇವತೆಗಳ

ಪ್ರಾರ್ಥನಾನುಸಾರವಾಗಿ ಶ್ರೀರಾಮಮೂರ್ತಿ ಸ್ವಸ್ಥಳವಾದ ವೈಕುಂಠಕ್ಕೆ ಹೊರಡಲಿಚ್ಛೆಯುಳ್ಳವನಾಗಿ ಲಕ್ಷ್ಮಣಾದಿಗಳನ್ನು ಹೊರಡುವಂತೆ ಹೇಳಿ "ಆರಾರು ನಿತ್ಯಸುಖಾಪೇಕ್ಷಿಗಳೋ ಅವರೆಲ್ಲರೂ ಈಗ ನಮ್ಮೊಡನೆ ವೈಕುಂಠಕ್ಕೆ ಹೊರಟು ಬರಬಹುದು!" ಎಂಬುದಾಗಿ ನಗರದಲ್ಲಿ ಡಂಗುರದ ಮೂಲಕ ಸಾರಿಸಿದನು. ಪ್ರತ್ಯಕ್ಷ ವಿಷಯಳಾದ ಶ್ರೀ ಸೀತಾದೇವಿಯಿಂದಲೂ, ಸಮಸ್ತ ಭಕ್ತಿಯುಕ್ತವಾದ ಪರಿವಾರದಿಂದಲೂ, ಲಕ್ಷ್ಮಣನಿಂದಲೂ ಕೂಡಿ ಉತ್ತರದಿಕ್ಕನ್ನು ಕುರಿತು ಹೊರಟು ಸಂಗಡಿಗರೆಲ್ಲರನ್ನೂ ಮೋಕ್ಷಸ್ಥಾನದಲ್ಲಿರಿಸಿ, ಆಂಜನೇಯ ಮೂರ್ತಿಗೆ ಮಾತ್ರ ಪಾಮರರನ್ನು ಉದ್ಧಾರಮಾಡುವುದಕ್ಕೋಸ್ಕರ ಭೂಮಿಯ ಮೇಲೆಯೇ ಇರುವಂತೆ ಆಜ್ಞಾಪಿಸಿ ಅವರಿಗೆ ಚಿರಂಜೀವಿತ್ವವನ್ನು ಅನುಗ್ರಹಿಸಿ, ಶ್ರೀ ಸೀತಾಲಕ್ಷ್ಮಣರೊಡನೆ ಸ್ವಸ್ಥಾನವನ್ನು ಸೇರಿದನು.

ಆಂಜನೇಯಮೂರ್ತಿಯು ಸತ್ಯವಾಕ್ಕಿನಿಂದಲೂ ವೈರಾಗ್ಯಯುಕ್ತವಾದ ಭಕ್ತಿಯಿಂದಲೂ ತದೇಕಧ್ಯಾನದಿಂದಲೂ, ಧೈರ್ಯದಿಂದಲೂ, ತಪಸ್ಸಿನಿಂದಲೂ ಆನಂದಕಾಲದಲ್ಲಿಯೂ ವಿಷಾದ ಸಮಯದಲ್ಲಿಯೂ ಕೂಡ ಶ್ರೀರಾಮಮೂರ್ತಿಯೇ ಗತಿ! ಎಂಬ ಮನಸ್ಸಿನಿಂದಲೂ ಶ್ರೀರಾಮನಾಮದ ಮಹಾತ್ಮೆಯನ್ನೇ ಕೀರ್ತನಮಾಡುತ್ತಾ ಕಿಂಪುರುಷ ಖಂಡದಲ್ಲಿ ಆನಂದದಿಂದಿರುವನು.

ಇಂತು ಕರ್ಣಾಟಕ ವಚನ ಮಣಿಮಂಜರಿಯಲ್ಲಿ

ಎರಡನೆಯ ಸರ್ಗವು ಮುಗಿದುದು.

ಶ್ರೀರಾಮಾರ್ಪಣಮಸ್ತು

—:o:—

ಮೂರನೆಯ ಸರ್ಗ

ಅತ್ರಿಮಹರ್ಷಿಗಳ ನೇತ್ರಜಾತನಾದ ಚಂದ್ರನಿಗೆ ಬುಧನೆಂಬ ಮಗನೂ,ಅವನಿಗೆ ಪುರೂರವಸ್ಸೆಂಬವನೂ,ಅವನಿಗೆ ಆಯುವೆಂಬವನೂ, ಆತನಿಗೆ ನಹುಷಮಹಾರಾಜನೂ, ಆರಾಜೇಂದ್ರನಿಗೆ ಬಲವೀರ್ಯ ಯುಕ್ತನಾದ ಯಯಾತಿಮಹಾರಾಜನೂ ಈರೀತಿ ವಂಶಾನುಕ್ರಮ ವಾಗಿ ಮಕ್ಕಳಾದರು. ಆ ಯಯಾತಿ ಮಹಾರಾಜನು ಶುಕ್ರಾಚಾ ರ್ಯರ ಮಗಳಾದ ದೇವಯಾನಿಯೆಂಬವಳಲ್ಲಿ ಯದು-ತುರ್ವಸು-ಎಂಬಿಬ್ಬರು ಮಕ್ಕಳನ್ನೂ ವೃಷಪರ್ವನ ಮಗಳಾದ ಶರ್ಮಿಷ್ಠೆಯಲ್ಲಿ, ದ್ರುಹ್ಯ-ಅನು-ಪೂರು-ಎಂಬ ಮೂವರು ಮಕ್ಕಳನ್ನೂ ಪಡೆದನು. ಮೊದಲ ಮಗನಾದ ಯದುರಾಜನ ವಂಶದಲ್ಲಿ ಕಾರ್ತವೀರ್ಯಾರ್ಜು ನನೇ ಮೊದಲಾದ ಭಗವದ್ಭಕ್ತರು ಜನಿಸಿದುದರಿಂದ ಆವಂಶಾಭಿವೃದ್ಧಿ ಯಾಯಿತು. ಪೂರುವಂಶದಲ್ಲಿ ದುಷ್ಯಂತ ಪುತ್ರನಾದ ಭರತನೇ ಮೊದ ಲಾದ ಭೂಪತಿಗಳುದಯಿಸಿದರು. ಆ ಭರತಾದಿಗಳ ಪರಾಕ್ರಮ ಸತ್ಕೀರ್ತಿಗಳು ದಿಗಂತವಿಶ್ರಾಂತಂಗಳಾದುವು.

ವರುಣ ದೇವರು ಶಂತನುರಾಜನಾಗಿ ಪೂರುವಂಶದಲ್ಲಿ ಉದಯಿ ಸಿದರು. ಆ ಶಂತನು ರಾಜನಿಗೆ ಭೀಷ್ಮ-ಚಿತ್ರಾಂಗದ-ವಿಚಿತ್ರ ವೀ ರ್ಯ-ಎಂಬ ಮಕ್ಕಳಾದರು. ವಿಚಿತ್ರವೀರ್ಯನಿಗೆ ಧೃತರಾಷ್ಟ್ರ-ಪಾಂಡು ಎಂಬ ಇಬ್ಬರು ತನಯರುಂಟಾದರು. ಪಾಂಡು ರಾಜನಿಗೆ ಕುಂತಿ-ಮಾದ್ರಿ-ಎಂಬಿಬ್ಬರು ಹೆಂಡತಿಯರು ! ಒಂದಾನೊಂದು ಕಾಲದಲ್ಲಿ ಪಾಂಡುರಾಯನು ಕಿಂದಮನೆಂಬ ಮುನಿಯಿಂದ ಶಪ್ತ ನಾಗಿ ಆಶಾಪರಭೀತಿಯಿಂದ ಸ್ತ್ರೀಸುಖಪರಾಙ್ಮುಖನಾಗಿ ಸತಿಯ ರೊಡನೆ ಅರಣ್ಯವಾಸಿಯಾಗಿದ್ದನು. ಅದುವರೆಗೆ ಸಂತಾನರಹಿತನಾಗಿ ದ್ದುದರಿಂದ ವಂಶಾಭಿವೃದ್ಧಿಗಾಗಿ ದುರ್ವಾಸ ಮಹರ್ಷಿಗಳಿಂದ ಉಪ ದಿಷ್ಟವಾದ ಮಂತ್ರಶಕ್ತಿಯಿಂದ ಕುಂತೀದೇವಿಗೆ ದೇವತೆಗಳ ಅನು ಗ್ರಹವುಂಟಾಯಿತು. ಆದರಿಂದ ಪುತ್ರರನ್ನು ಪಡೆಯುವಂತೆಯೂ, ಆಕೆಗೆ ಉಪದೇಶಿಸಲ್ಪಟ್ಟಿರುವ ಮಂತ್ರಗಳೊಳಗೆ ಒಂದು ಮಂತ್ರ

ವನ್ನು ಮಾದ್ರೀದೇವಿಗೆ ಉಪದೇಶಿಸುವಂತೆಯೂ, ಪಾಂಡುರಾಜನು ಕುಂತೀದೇವಿಗೆ ಆಜ್ಞಾಪಿಸಿದನು. ಆಕೆಯು ಯಮಧರ್ಮರಾಜನನ್ನು ಆರಾಧಿಸಿದುದರಿಂದ ಯುಧಿಷ್ಠಿರನನ್ನೂ, ವಾಯುದೇವನನ್ನು ಪೂಜಿಸಿದುದರಿಂದ ಭೀಮಸೇನನನ್ನೂ, ದೇವೇಂದ್ರನನ್ನು ಅರ್ಚಿಸಿದುದರಿಂದ ಅರ್ಜುನನನ್ನೂ ಪಡೆದಳು. ಅನಂತರ ಮಾದ್ರೀ ದೇವಿಯು ಅಶ್ವಿನೀ ದೇವತೆಗಳನ್ನು ಸೇವಿಸಿದುದರಿಂದ, ನಕುಲ–ಸಹದೇವರೆಂಬ ಅವಳಿ ಮಕ್ಕಳನ್ನೂ ಹೆತ್ತಳು. ಇತ್ತ ಧೃತರಾಷ್ಟ್ರರಾಜನ ಪತ್ನಿಯಾದ ಗಾಂಧಾರೀ ದೇವಿಯು ತನ್ನ ಜ್ಞಾತಿಯಾದ ಪಾಂಡುರಾಜನಿಗೆ ಮಕ್ಕಳಾದರೂ ತಮಗೆ ಮಕ್ಕಳಾಗಲಿಲ್ಲವಲ್ಲಾ ? ಎಂಬ ಅಸೂಯೆಯಿಂದ ತನ್ನ ಉದರವನ್ನು ಬಲವಾಗಿ ಗುದ್ದಿಕೊಳ್ಳಲು, ಅದುವರೆಗೆ ಆಕೆಯು ಗರ್ಭಿಣಿಯಾಗಿದ್ದುದರಿಂದ ಆ ಹೊಟ್ಟೆಯಲ್ಲಿದ್ದ ಪಿಂಡವು ಖಂಡ ಖಂಡವಾಗಿ ಒಡೆದು ನೆಲಕ್ಕೆ ಉರುಳಿದುದನ್ನು ಕಂಡು ಮತ್ತಷ್ಟು ಹೆಚ್ಚಾಗಿ ಶೋಕಿಸುತ್ತಿದ್ದಳು. ಆಗ ಶ್ರೀ ವೇದವ್ಯಾಸದೇವರು ಅಲ್ಲಿಗೆ ದಯಮಾಡಿಸಿ, “ ಮಿಂಚಿಹೋದ ಕಾರ್ಯಕ್ಕೆ ಮರುಗಿ ಫಲ ವೇನು ? ” ಎಂಬುದಾಗಿ ತಿಳಿವಳಿಕೆಯನ್ನು ಹೇಳಿ, ಆಗರ್ಭಶಕಲಂಗಳನ್ನು ಘೃತಪೂರ್ಣಕಟಾಹಂಗಳಲ್ಲಿಟ್ಟು ಒಂಬತ್ತು ತಿಂಗಳು ಪೂರ್ಣವಾಗುವವರೆಗೂಕಾಪಾಡಿದರೆ ಅವುಗಳಲ್ಲಿ ಶಿಶುಗಳುತ್ಪನ್ನವಾಗುವುವು, ಎಂದು ವರವನ್ನು ಕೊಟ್ಟುಹೋದರು. ಗಾಂಧಾರಿಯು ಆ ವಿಧವಾಗಿ ಮಾಡಲು ತಕ್ಕಕಾಲದಲ್ಲಿ ಆಖಂಡಂಗಳಿಂದ ದುರ್ಯೋಧನಾದಿ ನೂರು ಮಂದಿಗಂಡುಮಕ್ಕಳೂ, ದುಶ್ಶಲೆ ಎಂಬ ಹೆಣ್ಣು ಶಿಶುವೂ ಆದುವು. ಈ ಮಕ್ಕಳು ಪ್ರವರ್ಧಮಾನವಾಗುತ್ತಿರಲು ಪಾಂಚಾಲ ಬಾಹ್ಲಿಕಾದಿ ದೇಶಾಧಿಪತಿಗಳೂ ಕ್ರಮವಾಗಿ ಅವರವರ ನಗರಂಗಳಲ್ಲಿ ಅಭಿವೃದ್ಧಿಯೊಂದುತ್ತಿದ್ದರು.

ಯಯಾತಿರಾಜನ ಮೊದಲನೆಯ ಮಗನಾದ ಯದುರಾಜನ ವಂಶದಲ್ಲಿ ಆಹುತರಾಜನಿಂದ ಉಗ್ರಸೇನ–ದೇವಕ–ಎಂಬ ಇಬ್ಬರು ಮಕ್ಕಳುದಯಿಸಿದರು. ಉಗ್ರಸೇನನಿಗೆ ಕಂಸನೆಂಬ ದುಷ್ಪುತ್ರನು ಹುಟ್ಟಿದನು. ಇವನು ದೇವದ್ವಿಜ ವಿರೋಧಿಯಾಗಿ ಉತ್ಪಥ ಪ್ರವರ್ತಕ

ನಾಗಿರಲು, ಇವನ ನಿಗ್ರಹಾರ್ಥವಾಗಿಯೂ, ಪರಮಾತ್ಮನೇ ತಮ್ಮ ಪುತ್ರನಾಗಬೇಕೆಂದು ತಪಸ್ಸನ್ನು ಮಾಡಿ ಭಗವದನುಗ್ರಹವನ್ನು ಪಡೆದಿದ್ದ ದೇವಕೀದೇವಿ ವಸುದೇವರುಗಳ ಇಷ್ಟಾರ್ಥವನ್ನು ಈಡೇರಿಸುವುದಕ್ಕಾಗಿಯೂ ದೇವತೆಗಳಿಂದ ಭೂಭಾರಹರಣಾರ್ಥವಾಗಿ ಪ್ರಾರ್ಥಿತನಾಗಿಯೂ ಭೂಮಿಯುಮೇಲೆ ಅವತಾರಮಾಡಬೇಕೆಂದು ಪರಮಾತ್ಮನು ಇಚ್ಛಿಸಿದನು.

ದೇವಕ ರಾಜನಿಗೆ ದೇವಸಮ್ಮತಳಾದ ದೇವಕಿಯೆಂಬ ಮಗಳು ಜನಿಸಿದಳು. ಶೂರರಾಜನ ಮಗನಾದ ವಸುದೇವನಿಗೆ ಆಕೆಯನ್ನು ಕೊಟ್ಟು ಪರಮಸಂಭ್ರಮದಿಂದ ವಿವಾಹೋತ್ಸವವನ್ನು ಆಕೆಯ ಅಣ್ಣನಾದ ಕಂಸನು ನಡೆಯಿಸುತ್ತಿರುವಾಗ "ಎಲವೋ ಕಂಸನೆ! ಈಕೆಯ ಎಂಟನೆಯ ಗರ್ಭವು ನಿನಗೆ ಮಾರಕವಾಗುವುದು!" ಎಂದು ಅಶರೀರವಾಣಿಯಾಗಲು, ಅದನ್ನು ಕೇಳಿ ಕಂಸನು ಭಗ್ನಾಶಯನಾಗಿ ಆದಂಪತಿಗಳನ್ನು ಆಗಲೇ ಕೊಲ್ಲಲೆಣಿಸಲು, ಆ ಕೋಪಾವೇಶವನ್ನು ನೋಡಿ ಸಹಿಸಲಾರದೆ, ವಸುದೇವನು "ಭಾವ! ಎಂದಿಗೋ ನಡೆಯುವ ಕಾರ್ಯಕ್ಕೆ ನೀನೀಗಲೇ ಕೋಪಿಸಿ ಅಧರ್ಮದಿಂದ ನಮ್ಮನ್ನು ಈಗಲೇ ಕೊಲ್ಲಬಾರದು! ನಾವು ನಿನ್ನಿಂದ ಪಾಲಿತರಾಗಿರುವುದರಿಂದ ನಿನ್ನ ಮಕ್ಕಳಂತೆ ಇರುವೆವು. ನಿನ್ನ ಇಷ್ಟದಂತೆ ನಿರಂತರವೂ ನಾವು ನಡೆದುಕೊಳ್ಳುವೆವು. ನಮ್ಮನ್ನು ಬದುಕಿಸು!" ಎಂದು ಬೇಡಿಕೊಳ್ಳಲು ಆ ಕಂಸನಿಗೆ ದಯೆಬಂದು "ಹಾಗಾದರೆ ನಿಮಗೆ ಜನಿಸುವ ಮಕ್ಕಳನ್ನು ಆಕ್ಷಣವೇ ನನ್ನ ಕತ್ತಿಗೆ ಬಲಿಯಾಗಿ ಕೊಡಬೇಕು" ಎಂದು ಕೇಳಿ ಅವರಿಂದ ಒಪ್ಪಿಗೆಯನ್ನು ಪಡೆದರೂ ಅವರ ಮಾತಿನಲ್ಲಿ ನಂಬುಗೆಯಿಡದೆ ಅಂದಿನಿಂದಲೂ ಆ ದಂಪತಿಗಳನ್ನು ಒಂದು ಕಾರಾಗಾರದಲ್ಲಿ ಇರಿಸಿದ್ದನು. ಆರು ಮಕ್ಕಳು ಈ ಬಗೆಯಾಗಿ ನಾಶವಾದವು. ದೇವಕೀದೇವಿಯ ಏಳನೆಯ ಗರ್ಭವು ಸ್ರಾವವಾಯಿತೆಂಬ ನೆಪವುಂಟಾಗುವಂತೆ ಮಾಯೆಯು ಆಗರ್ಭವನ್ನು ಕೊಂಡೊಯ್ದು ರೋಹಿಣೀದೇವಿಯ ಗರ್ಭದಲ್ಲಿರಿಸಿದಳು. ಹೀಗೆ ಕೃಷ್ಣಾವತಾರಕ್ಕಿಂತಲೂ

ಮೊದಲು ವಸುದೇವನು ರೋಹಿಣಿಯೆಂಬ ತನ್ನ ಮತ್ತೊಬ್ಬ ಸತಿಯಲ್ಲಿ ಬಲರಾಮನೆಂಬ ಮಗನನ್ನು ಪಡೆದಿದ್ದನು. ಎಂಟನೆಯ ಗರ್ಭದಿಂದ ಅವತರಿಸಿಬಂದು ಶಂಖ-ಚಕ್ರ-ಗದಾ-ಪದ್ಮಧಾರಿಯಾಗಿ ಜ್ಞಾನಾನಂದ ಶರೀರನಾಗಿ ಕೇವಲ ಅಭಿವ್ಯಕ್ತನಾದ ಶ್ರೀಹರಿಯನ್ನು ವಸುದೇವ ದೇವಕಿಯರು ಕಂಡು ಸಂತೋಷದಿಂದ ಅನೇಕ ಪ್ರಕಾರವಾಗಿ ಸ್ತೋತ್ರಮಾಡಿದರು. ಆಗ ಮತ್ತೆ ಪ್ರಾಕೃತ ಶಿಶುವಿನಂತೆ ಕಂಡುಬಂದ ಪರಮಾತ್ಮನ ಆಜ್ಞೆಯಂತೆ ವಸುದೇವನು ಆ ಶಿಶುವನ್ನು ಗೋಕುಲದಲ್ಲಿ ಯಶೋದಾದೇವಿಯ ಮಗ್ಗುಲಲ್ಲಿ ಮಲಗಿಸಿ, ಆಗತಾನೆ ಆಕೆ ಹೆತ್ತಿದ್ದ ಒಂದು ಹೆಣ್ಣುಮಗುವನ್ನು ತಂದು ದೇವಕೀದೇವಿಯ ಮಗ್ಗುಲಲ್ಲಿ ಮಲಗಿಸಿ, ದೇವಕೀದೇವಿಯು ಪ್ರಸವಿಸಿದಳೆಂದು ಪ್ರಕಟಮಾಡಿದನು. ಆ ಸುದ್ದಿಯನ್ನು ಕೇಳುತ್ತಲೇ ಕ್ರೂರನಾದ ಕಂಸನು ಬಂದು ಆಗತಾನೆ ಜನಿಸಿದ ಹೆಣ್ಣು ಶಿಶುವನ್ನು ಈಚೆಗೆ ತರಿಸಿ ಅದನ್ನು ಯಥಾಪೂರ್ವವಾಗಿ ಕತ್ತರಿಸಿಹಾಕಬೇಕೆಂದು ಅದನ್ನು ಮೇಲಕ್ಕೆ ಹಾರಿಸಿ ಕತ್ತಿಯನ್ನೆತ್ತಲು, ಆ ಶಿಶು ಹಾಗೆಯೇ ಮೇಲಕ್ಕೆ ಹಾರಿ ಅಂತರಿಕ್ಷದಲ್ಲಿ ನಿಂತು "ಎಲೋ ದುಷ್ಟಕಂಸ! ನಿನಗೆ ಮೃತ್ಯುವಾದವನು ಬೇರೆ ಕಡೆಯಲ್ಲಿ ಬೆಳೆಯುತ್ತಿರುವನು!" ಎಂದು ಹೇಳಿ ಹಾಗೆಯೇ ಎಲ್ಲಿಗೋ ಹೊರಟುಹೋಯಿತು. ಆ ಶಿಶುವನ್ನೇ ದುರ್ಗಾದೇವಿಯೆನ್ನುವರು.

ಇತ್ತ ಕಂಸನು ತನ್ನ ಮರಣ ಭಯಪರಿಹಾರಕ್ಕಾಗಿ ಆಗತಾನೇ ಹುಟ್ಟಿರುವ ಮಕ್ಕಳೆಲ್ಲರನ್ನೂ ಕೊಲ್ಲುವಂತೆ ದುಸ್ಸ್ವಭಾವದ ತನ್ನ ಅಸುರ ಕಿಂಕರರಿಗೆ ಆಜ್ಞಾಪಿಸಲು, ಮಥುರೆ, ಗೋಕುಲಮುಂತಾದ ಅವನ ಅಧಿಕಾರಕ್ಕೆ ಒಳಪಟ್ಟ ನಗರಂಗಳಲ್ಲಿ ಆ ಕಿಂಕರರು ಅನೇಕ ಶಿಶುಗಳನ್ನು ಬಲಾತ್ಕಾರವಾಗಿಯೂ ಅನೇಕ ಉಪಾಯಗಳಿಂದಲೂ ಕೊಲ್ಲುತ್ತಿದ್ದರು. ಕಂಸನ ಧಾತ್ರಿಯಾದ ಪೂತನೆಯೆಂಬ ಅಸುರ ಸ್ತ್ರೀಯು ಗೋಕುಲದಲ್ಲಿದ್ದ ಶ್ರೀಕೃಷ್ಣಮೂರ್ತಿಗೆ ಮೊಲೆವಾಲನೂಡಿಸುವೆನೆಂದು ತಾನೆತ್ತಿಕೊಂಡು ಸ್ತನ್ಯವನ್ನೀಯುತ್ತಿರಲು ಶಿಶುರೂಪ

ಧಾರಿಯಾದ ಪರಮಾತ್ಮನು ಆ ನೆಪದಿಂದಲೇ ಅವಳ ಪ್ರಾಣವನ್ನು ಹೀರಿದನು. ಶಕಟ–ತೃಣಾವರ್ತ, ಮುಂತಾದ ಅಸುರರನ್ನು ಬಾಲ ಲೀಲೆಗಳಿಂದಲೇ ಕೊಂದನು. ವಸುದೇವನ ಪ್ರಾರ್ಥನಾನುಸಾರವಾಗಿ ಗರ್ಗಾಚಾರ್ಯರವರು ಬಲರಾಮಸಹಿತನಾದ ಶ್ರೀ ಕೃಷ್ಣಮೂರ್ತಿಗೆ ಕ್ಷತ್ರಿಯೋಚಿತವಾದ ಜಾತಕರ್ಮ ನಾಮಕರಣಾದಿ ಸಂಸ್ಕಾರಂಗಳನ್ನು ಮಾಡಿದರು. ಅಣ್ಣನಾದ ಬಲರಾಮನಿಂದಲೂ ಸಮಯಸ್ಕರಾದ ಇತರ ಬಾಲಕರಿಂದಲೂ ಕೂಡಿ ಶ್ರೀಕೃಷ್ಣಮೂರ್ತಿಯು ಮನೆಯ ಒಳಗೂ ಹೊರಗೂ ಅನೇಕ ವಿಧಂಗಳಾದ ಅಭಿಪ್ರಾಯ ಗರ್ಭಿತಂಗಳಾದ ಲೀಲೆಗಳಿಂದ ಲೋಕರನ್ನು ಆನಂದಪಡಿಸುತ್ತಿದ್ದನು. ಆ ಬಾಲಕನಾದ ಶ್ರೀಕೃಷ್ಣಮೂರ್ತಿಯು ಒಂದು ದಿನ ದಾರಿಯಲ್ಲಿಯ ಮಣ್ಣನ್ನು ತಿನ್ನುತ್ತಿರಲು ಅದನ್ನು ಕಂಡು ಪೋಷಕಳಾದ ಯಶೋದಾ ದೇವಿಯು ಮಾತೃಪ್ರೇಮದಿಂದ ಅವನನ್ನು ಬಯ್ಯುತ್ತಾ "ಬಾಯ್ದೆರೆ! ಬಾಯಲ್ಲಿಯ ಮಣ್ಣನ್ನು ಉಗುಳು!" ಎಂದು ಗದರಿಸಲು, ಆ ಕಪಟನಾಟಕಸೂತ್ರಧಾರಿಯು "ಇಲ್ಲಮ್ಮ! ನಾನು ಮಣ್ಣು ತಿನ್ನಲಿಲ್ಲ! ನನ್ನ ಬಾಯಲ್ಲಿ ಮಣ್ಣಿಲ್ಲ! ನೋಡು!" ಎಂದು ಬಾಯ್ದೆರೆದು ತನ್ನುದರದಲ್ಲಿ ಸಮಸ್ತ ಜಗತ್ತೂ ಇರುವುದನ್ನು ಆಕೆಗೆ ತೋರಿಸಿ ಆಶ್ಚರ್ಯ ಭೀತಿಗಳನ್ನುಂಟುಮಾಡಿದನು. ಒಂದು ದಿನ ಮೊಸರಿನಗಡಿಗೆಯನ್ನು ಒಡೆದು ಅದರಲ್ಲಿದ್ದ ಬೆಣ್ಣೆಯನ್ನು ಕದ್ದುಕೊಂಡು ರಹಸ್ಯವಾದೊಂದು ಸ್ಥಳಕ್ಕೆ ಹೋಗಿತಿಂದನು. ಯಶೋದಾದೇವಿಯು ಆ ಮಗನ ಚೇಷ್ಟೆಗಳನ್ನು ಸಹಿಸಲಾರದೆ ಒಂದು ಹಗ್ಗದಿಂದ ಅವನನ್ನು ಒಂದು ಒರಳುಕಲ್ಲಿಗೆ ಕಟ್ಟಿಹಾಕಿರಲು ಅವನು ಆ ಕಲ್ಲನ್ನು ಎಳೆದುಕೊಂಡು ಹೋಗುತ್ತ ಎರಡು ಮತ್ತಿಯ ಮರಗಳ ನಡುವೆ ಸುಗ್ಗಿದನು. ಇವನ ಎಳೆತದಿಂದ ಎರಡು ಮತ್ತಿಯ ಮರಗಳೂ ನೆಲಕ್ಕೆ ಉರುಳಿದುವು. ಆಗ ದಿವ್ಯಶರೀರಿಗಳಾದ ಇಬ್ಬರು ಸುಂದರರು ಶ್ರೀ ಬಾಲರೂಪದ ಪರಮಾತ್ಮನಿಗೆ ನಮಸ್ಕರಿಸುತ್ತಾ "ಮಹಾತ್ಮಾ! ನಲಕೂಬರ-ಮಣಿಗ್ರೀವರೆಂಬ ಕುಬೇರನ ಮಕ್ಕ

ಳಾಪ ನಾವು ನಾರದ ಮಹರ್ಷಿಗಳ ಶಾಪದಿಂದ ಈ ವೃಕ್ಷಗಳ ರೂಪದಿಂದಿದ್ದೆವು. ಇಂದಿಗೆ ನಿನ್ನ ದಯಾಪೂರಿತವಾದ ಬಾಲಲೀಲೆಯಿಂದ ನಮ್ಮ ಶಾಪವಿಮೋಚನೆಯಾಗಿ ನಾವು ಧನ್ಯರಾದೆವು, ಎಂದು ಅನೇಕ ಬಗೆಯಿಂದ ಸ್ತುತಿಸಿ ಪರಮಾತ್ಮನ ಆಜ್ಞೆಯನ್ನು ಪಡೆದು ತಮ್ಮೆಡೆಗೆ ಹೊರಟುಹೋದರು. ಭಗವತ್ಪ್ರೇರಣೆಯಿಂದ ಗೋಕುಲದಲ್ಲಿ ತೋಳ ಮುಂತಾದ ದುಷ್ಟ ಜಂತುಗಳ ಭಾಧೆಯುಂಟಾಗಲು ನಂದಗೋಪಾದಿಗಳು ಆ ಸ್ಥಳವನ್ನು ಬಿಟ್ಟು ಬೃಂದಾವನವೆಂಬಲ್ಲಿಗೆ ಹೋಗಿ ವಾಸ ಮಾಡುತ್ತಿದ್ದರು. ಅಲ್ಲಿ ಶ್ರೀಕೃಷ್ಣಮೂರ್ತಿಯು ಗೋಪಾಲಬಾಲ ಪರಿವೃತನಾಗಿ ಪಶು–ವತ್ಸಗಳ ಪಾಲಕನಾಗಿ, ವತ್ಸ-ಬಕ ಎಂಬ ಅಸುರರನ್ನು ಸಂಹರಿಸಿ ಗೋಪಾಲನೆನಿಸಿ ಪ್ರಮೋದದಿಂದಿದ್ದನು.

ಇಂತು ಕರ್ಣಾಟಕವಚನ ಮಣಿ ಮಂಜರಿಯಲ್ಲಿ

ಮೂರನೆಯಸರ್ಗವು ಮುಗಿದುದು.

॥ ಶ್ರೀರಾಮಾರ್ಪಣ ಮಸ್ತು ॥

ನಾಲ್ಕನೆಯ ಸರ್ಗ

ಆಬಳಿಕ ಶ್ರೀಕೃಷ್ಣಮೂರ್ತಿಯು ಯಮುನಾನದಿಯಲ್ಲಿಯ ಒಂದು ಮಡುವಿನಲ್ಲಿದ್ದ ಕಾಳಿಂಗನೆಂಬ ದುಷ್ಟ ಸರ್ಪವನ್ನು ಅಲ್ಲಿಂದ ಹೊರಡಿಸಿ, ಕಾಲಗತಿಯಿಂದ ಸಂಪ್ರಾಪ್ತವಾದ ಕಾಡುಗಿಚ್ಚನ್ನು ನುಂಗಿ, ವಿಷವೃಕ್ಷವನ್ನು ನಾಶಪಡಿಸಿ, ಗೋರೂಪದಿಂದ ಬಂದರಾಕ್ಷಸರುಗಳನ್ನು ಸಂಹರಿಸಿ, ಕತ್ತೆಯಾಕಾರದಿಂದ ಬಂದ ಒಬ್ಬ ದಾನವನನ್ನು ಕೊಂದು, ಕ್ರೂರಂಗಳಾದ ಮತ್ತು ಅಸುರಾಂಶಂಗಳಾದ ಏಳು ವೃಷಭಂಗಳನ್ನು ಸಾಯಿಸಿ, ಅವುಗಳನ್ನು ಕೊಂದವರಿಗೆ ತನ್ನ ಮಗಳಾದ ನೀಲಾದೇವಿಯನ್ನು ಮದುವೆಮಾಡುವೆನೆಂದು ಸಂಕಲ್ಪ ಮಾಡಿದ್ದ ಕುಂಭಕನೆಂಬ ಗೋಪಾಲಕನಿಗೆ ಸಂತೋಷವನ್ನುಂಟುಮಾಡಿ, ಅವನ ಮಗಳನ್ನು ಮದುವೆಯಾದನು. ಬಲರಾಮನು ಧೇನುಕಾಸುರನನ್ನು ಸದೆದನು. ಮತ್ತು ಪ್ರಲಂಬನೆಂಬವನನ್ನು ಸಂಹರಿಸಿದನು. ಮತ್ತೊಂದುಸಾರಿ ಉಂಟಾದ ದಾವಾಗ್ನಿಯನ್ನು ಶ್ರೀಕೃಷ್ಣಮೂರ್ತಿಯು ಪಾನಮಾಡಿದನು. ತಮ್ಮ ವಾಸಸ್ಥಾನದ ಸಮೀಪದ ಆಶ್ರಮದಲ್ಲಿದ್ದ ಬ್ರಾಹ್ಮಣರು ಭಗವತ್ಪೂಜೆಯೆಂದು ಪ್ರತೀಕಾ(ಪ್ರತಿಮೆ)ರ್ಚನೆಮಾಡುತ್ತಿದ್ದ ಸ್ಥಳಕ್ಕೆ ಹೋಗಿ ತಾನು ಕ್ಷುಧಾತುರನಾಗಿರುವಂತೆ ಹೇಳಿ ಅನ್ನವನ್ನು ಯಾಚಿಸಲು ಅಜ್ಞಾನದಿಂದ ಗಂಡಸರು ದೇವರ ಪೂಜೆಯಾದಲ್ಲದೆ ಇತರರಿಗೆ ಉಣ್ಣಲಿಕ್ಕುವುದಿಲ್ಲವೆಂದು ನಿರಾಕರಿಸಿದರೂ ಅವರಗೃಹಿಣಿಯರು ದಯಾರ್ದ್ರಹೃದಯದಿಂದಲೂ, ವಿವೇಕದಿಂದಲೂ ಸಿದ್ಧಮಾಡಿದ್ದ ಷಡ್ರಸೋಪೇತವಾದ ಅನ್ನವನ್ನು ಶ್ರೀಕೃಷ್ಣಮೂರ್ತಿಗೆ ಸಮರ್ಪಿಸಲಾಗಿ, ಅದನ್ನು ತನ್ನೊಡನಾಡಿಗಳೊಡನೆ ಭುಂಜಿಸಿ, ಆ ಸ್ತ್ರೀಯರಿಗೆ ಸಂತೋಷವನ್ನುಂಟುಮಾಡಿದನು. ಮತ್ತು ದೇವೇಂದ್ರನ ಪ್ರೀತ್ಯರ್ಥವಾಗಿ ಗೋಪಾಲ

ಕರು ಪ್ರತಿವರ್ಷವೂ ನಡೆಸುತ್ತಿದ್ದ ಮಹೋತ್ಸವವನ್ನು ಮಾಡಬೇಡಿ ರೆಂದು ತಾನು ಆಜ್ಞಾಪಿಸಿದಂತೆ ನಡೆದ ಗೋಪಾಲವರ್ಗವನ್ನು ನಿಗ್ರಹ ಮಾಡುವುದಕ್ಕೋಸ್ಕರ ಇಂದ್ರನಿಂದಾಜ್ಞಾಪ್ತಗಳಾದ ಮೇಘಂಗಳು ಸಹಿಸಲಶಕ್ಯವಾಗಿ ಮಳೆಯನ್ನು ಸುರಿಸುತ್ತಿರಲು, ಆ ಬಾಧೆಯನ್ನು ತಡೆಯಲಾರದೆ ದುಃಖಿಸುತ್ತಿದ್ದ ತನ್ನ ಸಂಗಡಿಗರನ್ನು ರಕ್ಷಿಸುವುದ ಕ್ಕಾಗಿ ಗೋವರ್ಧನಗಿರಿಯನ್ನು ಛತ್ರದಂತೆ ತನ್ನೊಂದು ಕೈಬೆರಳಿನಿಂದ ಲೇ ಎತ್ತಿ ಹಿಡಿದುಕೊಂಡು ಸಕಲರನ್ನೂ ಕಾಪಾಡಿ, ಇಂದ್ರನ ಗರ್ವ ಭಂಗವನ್ನುಮಾಡಿದನು. ಮತ್ತು ಗೌರೀ ಪೂಜೆಯನ್ನು ಮಾಡಿ ಶ್ರೀ ಕೃಷ್ಣಮೂರ್ತಿಯೇ ತಮ್ಮೊಡೆಯನಾಗಬೇಕೆಂದು ವರವನ್ನು ಪಡೆ ದಿದ್ದ ಗೋಪಕನ್ಯೆಯರೊಡಗೂಡಿ ತಾನೂ ವೇಣುಗಾನವನ್ನು ಮಾ ಡುತ್ತಾ ರಾಸಕ್ರೀಡಾನಂದವನ್ನು ಅನುಭವಿಸುತ್ತಿದ್ದನು.

ಶಂಖಚೂಡ–ಅರಿಷ್ಟ–ಕೇಶಿ–ಮಯೂಪುತ್ರನಾದ ವ್ಯೋಮ– ಮುಂತಾದ ಅಸುರರನ್ನು ಸಂಹರಿಸಿ, ಆವ ರೀತಿಯಿಂದಲಾದರೂ ತನ್ನನ್ನು ಕೊಲ್ಲಬೇಕೆಂಬ ಉದ್ದೇಶವುಳ್ಳ ಕಂಸನಿಂದ ಕಳುಹಲ್ಪಟ್ಟ ಅಕ್ರೂರನ ಪ್ರಾರ್ಥನೆಯಂತೆ ಬಲರಾಮನೊಡನೆ ಮಧುರಾಪುರಿ ಯನ್ನು ಸೇರಿ, ಆ ಕಂಸನಲ್ಲಿದ್ದ ಶೈವಧನುಸ್ಸನ್ನು ಭಂಗಗೊಳಿಸಿ, ತನ್ನ ಮೇಲೆ ಬಿದ್ದ ಕುವಲಯಾಪೀಡವೆಂಬ ಆನೆಯನ್ನೂ ಅದರ ಮಾ ವಟಿಗನನ್ನೂ, ಚಾಣೂರ–ಮುಷ್ಟಿಕ ಎಂಬ ಮಲ್ಲಯುದ್ಧ ವಿಶಾರದ ರಿಬ್ಬರನ್ನೂ ಹತಿಗೆಯ್ದು, ಸಿಂಹಾಸನಾಸೀನನಾಗಿದ್ದ ಕಂಸನ ಕೇಶ ಗ್ರಹಣಮಾಡಿ ಈಚೆಗೆ ಎಳೆದು, ಕಾಲಿನಿಂದ ಒದೆದು, ಕೊಂದು, ಅವನಿಗೆ ಸಹಾಯವಾಗಿಬಂದ ಸೈನ್ಯವೆಲ್ಲವನ್ನೂ ನಡೆದು, ಸಮಸ್ತ ಸಜ್ಜನರನ್ನೂ ಸಂತೋಷಪಡಿಸಿ, ತಮ್ಮ ತಾಯ್ತಂದೆಗಳನ್ನು ಸೆರೆ ಸಾಲೆಯಿಂದ ಬಿಡಿಸಿ, ತಾತನಾದ ಉಗ್ರಸೇನರಾಜನಿಗೆ ಪಟ್ಟಾಭಿ ಷೇಕವನ್ನು ಮಾಡಿಸಿ, ಕಂಸನ ವಧೆಗಾಗಿ ಕೋಪಗೊಂಡು ಯುದ್ಧಕ್ಕೆ ಬಂದ ಅವನ ಮಾವನಾದ ಜರಾಸಂಧನೆಂಬವನ ಸೈನ್ಯ ವನ್ನು ಯುದ್ಧದಲ್ಲಿ ಆಗಾಗ್ಗೆ ನಾಶಮಾಡುತ್ತಿದ್ದನು.

ಇತ್ತ ಪಾಂಡುರಾಜನು ಅರಣ್ಯದಲ್ಲಿ ಮೃತನಾಗಲು, ಆತನ ಮಕ್ಕಳಾದ ಯುಧಿಷ್ಠಿರಾದಿಗಳು ಮುನಿಗಳ ಸಾಯುಭಾರದಿಂದ ಹಸ್ತಿನಾವತಿಯನ್ನು ಸೇರಿ, ದುರ್ಯೋಧನಾದಿಗಳಿಂದ ಅನೇಕಬಗೆಯಾದ ಬಾಧೆಗಳನ್ನೊಂದುತ್ತಿದ್ದರು. ಈ ಸಂಗತಿಯು ಆರ್ತತ್ರಾಣಪರಾಯಣನಾದ ಶ್ರೀನಾರಾಯಣಾಂಶ ಸಂಭೂತನೂ ಆದ ಶ್ರೀಕೃಷ್ಣಮೂರ್ತಿಗೆ ತಿಳಿದುಬರಲು ತನ್ನ ಆಪ್ತ ಭಕ್ತನಾದ ಅಕ್ರೂರನನ್ನು ಹಸ್ತಿನಾವತಿಗೆ ಕಳುಹಿಸಿ, ಅವನ ಮೂಲಕವಾಗಿ ಧಾರ್ತರಾಷ್ಟ್ರರಿಗೆ ನೀತಿಯನ್ನು ಉಪದೇಶಿಸಿದರೂ ಅವರು ತಮ್ಮ ಕೆಟ್ಟ ನಡತೆಯನ್ನು ಬಿಡದಿದ್ದುದಕ್ಕಾಗಿ ಆ ಅಕ್ರೂರನು ಧೃತರಾಷ್ಟ್ರನನ್ನು ಕುರಿತು "ಎಲೈ ಮಹಾರಾಜನೇ ! ನಿನ್ನ ಮಕ್ಕಳು ತಮ್ಮ ಕೆಟ್ಟ ನಡತೆಗಳಿಂದ, ಮಹಾ ಬಾಹುಬಲ–ನೀತಿಬಲ–ದೈವಬಲ–ಸಂಪನ್ನನಾದ ಶ್ರೀ ಭೀಮಸೇನನ ಕೋಪಾಗ್ನಿಗೆ ಆಹುತಿಯಾಗುವರು." ಎಂದು ಹೇಳಿ ಭೀಮಸೇನಾರ್ಜುನರೊಡನೆ ಮಧುರಾಪುರಿಗೆ ಬಂದು ಶ್ರೀ ಕೃಷ್ಣಮೂರ್ತಿಗೆ ನಮಸ್ಕರಿಸಿ, ಆತನ ವಿಚಿತ್ರ ಚರಿತ್ರಂಗಳನ್ನು ಪಾಡಿ ಪೊಗಳಿಕೊಂಡು ಆ ಪರಮಾತ್ಮನ ಸೇವೆಯಲ್ಲಿ ನಿರತನಾಗಿದ್ದನು.

ಶ್ರೀ ಕೃಷ್ಣಮೂರ್ತಿಯು ತನ್ನವಿಯೋಗದಿಂದ ದುಃಖಿಸುತ್ತಿದ್ದ ಜನರನ್ನು ಸಮಾಧಾನ ಪಡಿಸುವುದಕ್ಕಾಗಿ ಉದ್ಧವನನ್ನು ಗೋಕುಲಕ್ಕೆ ಕಳುಹಿಸಿದನು. ಜರಾಸಂಧನನ್ನು ಅನೇಕವೇಳೆ ಯುದ್ಧದಲ್ಲಿ ಹತವೀರ್ಯನನ್ನಾಗಿಸಿದನು. ಸೃಗಾಲನೆಂಬ ದುಷ್ಟ ನೃಪನನ್ನು ಸದೆದು ಸಜ್ಜನನೆನಿಸಿದ ಅವನ ಮಗ ಶಕ್ರದೇವನಿಗೆ ಆ ರಾಜ್ಯಾಧಿಕಾರವನ್ನು ಕೊಟ್ಟು ರಕ್ಷಿಸಿದನು. ಆಬಳಿಕ ಭೀಷ್ಮಕ ರಾಜನ ಮಗಳಾದ ರುಕ್ಮಿಣೀದೇವಿಯನ್ನು ವಿವಾಹಮಾಡಿಕೊಂಡು ಸಾಕ್ಷಾದ್ರಮಾವತಾರಳಾದ ಮತ್ತು ಜ್ಞಾನಾನಂದ ರೂಪಿಣಿಯಾದ ಆದೇವಿಯೊಡನೆ ತಾನು ಪ್ರಾಕೃತ ಪುರುಷನಂತೆ ಆನಂದವನ್ನನುಭವಿಸುತ್ತಿದ್ದನು.

ಆ ಕಾಲದಲ್ಲಿ ಸೂರ್ಯದೇವರಿಂದ ಸತ್ರಾಜಿತನೆಂಬ ಯಾದವನು ವರವಾಗಿ ಪಡೆದಿದ್ದ ಸ್ಯಮಂತಕ ರತ್ನವನ್ನು ರಾಜನಾದ ಉಗ್ರಸೇನನಿಗೆ ಕೊಡುವಂತೆ ಶ್ರೀ ಕೃಷ್ಣಮೂರ್ತಿ ಕೇಳಿದರೂ ಅವನು ಧನಲೋಭದಿಂದ ಕೊಡದಿರಲು, ಒಂದಾನೊಂದು ದಿನ ಅವನ ತಮ್ಮನಾದ ಪ್ರಸೇನನು ಆ ರತ್ನವನ್ನು ಧರಿಸಿ ಮೃಗಯಾವಿಹಾರಕ್ಕೆ ಹೋಗಿದ್ದಾಗ, ಒಂದು ಸಿಂಹವು ಅವನನ್ನು ಕೊಂದು ಆ ರತ್ನವನ್ನು ತೆಗೆದುಕೊಂಡಿತು. ಆ ಸಿಂಹವನ್ನು ಜಾಂಬವಂತನೆಂಬ ಕರಡಿಯು ಸಂಹರಿಸಿ ಆ ರತ್ನವನ್ನು ಅಪಹರಿಸಿಕೊಂಡುಹೋಗಿ ತನ್ನ ಗುಹೆಯಲ್ಲಿಟ್ಟುಕೊಂಡಿತು. ಇದನ್ನರಿಯದೆ ಸತ್ರಾಜಿತನು "ಶ್ರೀಕೃಷ್ಣನೇ ಮಣಿಯನ್ನು ಅಪಹರಿಸಿ ನನ್ನ ತಮ್ಮನನ್ನು ಕೊಂದನು!" ಎಂದು ಅಪಲಪಿಸಿದನು. ಆ ನಿಂದೆಯನ್ನು ಪರಿಹರಿಸಿಕೊಳ್ಳಲೋಸುಗ ಶ್ರೀ ಕೃಷ್ಣಮೂರ್ತಿಯು ಅರಣ್ಯಕ್ಕೆ ಹೋಗಿ ನಡೆದ ಸಂಗತಿಗಳೆಲ್ಲವನ್ನೂ ಕಂಡು, ಜಾಂಬವಂತನೊಡನೆ ಯುದ್ಧಮಾಡಿ ಗೆದ್ದು ಅವನಿಂದ ಸ್ಯಮಂತಕರತ್ನವನ್ನೂ ಅವನ ಮಗಳಾದ ಜಾಂಬವತಿ ಎಂಬ ಕನ್ಯಾರತ್ನವನ್ನೂ ಪಡೆದುಕೊಂಡುಬಂದು, ಸತ್ರಾಜಿತನಿಗೆ ಆ ಸ್ಯಮಂತಕ ರತ್ನವನ್ನು ಕೊಟ್ಟು, ಆದ್ಯಂತವಾಗಿ ಆ ವೃತ್ತಾಂತವನ್ನು ಅವನಿಗೆ ತಿಳಿಸಲು, ಅವನು ತನ್ನ ತಪ್ಪಿಗಾಗಿ ನಾಚುಗೆಗೊಂಡು ಆ ಮಣಿಯೊಡನೆ ತನ್ನ ಮಗಳೂ ಶ್ರೀ ಲಕ್ಷ್ಮೀ ಸ್ವರೂಪಳೂ ಆದ ಸತ್ಯಭಾಮಾ ದೇವಿಯನ್ನು ನಿತ್ಯಾತ್ಮಕನಾದ ಶ್ರೀ ಕೃಷ್ಣಮೂರ್ತಿಗೆ ಪ್ರೀತಿಯಿಂದ ಸಮರ್ಪಿಸಿದನು. ಶ್ರೀ ಕೃಷ್ಣಮೂರ್ತಿಯು ಸತ್ಯಭಾಮಾ ದೇವಿಯನ್ನು ಮಾತ್ರ ಸ್ವೀಕರಿಸಿ, ಸ್ಯಮಂತಕಮಣಿಯನ್ನಾತನಿಗೆಯೇ ಹಿಂದಿರುಗಿ ಕೊಟ್ಟನು.

ಆಮೇಲೆ ಶ್ರೀ ಕೃಷ್ಣಮೂರ್ತಿಯು, ಹಂಸ–ಡಿಬಿಕರೆಂಬ ದೈತ್ಯಾಧಮರನ್ನು ನಿಧನಗೊಳಿಸಿ, ಶ್ರೀ ರುಕ್ಮಿಣೀ ದೇವಿಯಲ್ಲಿ ಪ್ರದ್ಯುಮ್ನ ಮೊದಲಾದ ಮಕ್ಕಳನೇಕರನ್ನು ಪಡೆದನು.

ಇತ್ತ ಪಾಂಡವರು ದ್ರೋಣಾಚಾರ್ಯರಿಂದ ಶಸ್ತ್ರಾಸ್ತ್ರಂಗಳ ಶಿಕ್ಷಣವನ್ನು ಪಡೆದು, ನಾನಾವಿಧವಾದ ಯುದ್ಧ ಕರ್ಮಂಗಳಲ್ಲಿ ಪಾಂಡಿತ್ಯವುಳ್ಳವರಾಗಿ, ತಮ್ಮ ಯೋಗಕ್ಷೇಮವನ್ನು ವಿಚಾರಿಸಲೋಸುಗ ಬಂದ ಶ್ರೀ ಕೃಷ್ಣಮೂರ್ತಿಯ ಸಂದರ್ಶನದಿಂದ ಆನಂದಪಟ್ಟು ಶ್ರೀ ಕೃಷ್ಣಮೂರ್ತಿಯೊಂದಿಗೆ ದ್ವಾರಕಾನಗರಕ್ಕೆ ಬಂದು ಅಲ್ಲಿಯ ಸರ್ವರಿಂದಲೂ ಸಂಭಾವಿತರಾಗಿ, ಆ ಮೂರ್ತಿಯಲ್ಲಿ ನಿರಂತರವೂ ಸುಪ್ರೀತಿಯಿಂದಲೂ, ಸದ್ಭಾವದಿಂದಲೂ, ಭಕ್ತಿಯಿಂದಲೂ, ಸುಖಾನುಭವ ಮಾಡುತ್ತಿದ್ದು ಆ ಮಹಾತ್ಮನ ಆಜ್ಞಾನುಸಾರವಾಗಿ ಹಸ್ತಿನಾವತಿಗೆ ಪ್ರಯಾಣಮಾಡಿದರು. ಮತ್ತು ಸ್ವಾಮಿಭಾವದಿಂದಲೂ, ಮಿತ್ರಭಾವದಿಂದಲೂ, ಬಂಧುಭಾವದಿಂದಲೂ, ಅವನೇ ಗಮ್ಯನೆಂಬ ಅಭಿಪ್ರಾಯದಿಂದಲೂ, ಆ ಶ್ರೀ ಕೃಷ್ಣಮೂರ್ತಿಯನ್ನೇ ಶರಣು ಹೊಂದಿದ್ದರು.

ಅವರು ಹಸ್ತಿನಾವತಿಗೆ ಬಂದಮೇಲೆ ಶಕುನಿ, ಕರ್ಣ ಮೊದಲಾದ ದುರ್ಮಂತ್ರಿಗಳ ದುಬೋಧನೆಯಿಂದ ಸಹಜವಾಗಿ ದುಷ್ಟಾತ್ಮರಾದ ದುರ್ಯೋಧನಾದಿಗಳು ಬಲಾತ್ಕಾರವಾಗಿ ಅವರನ್ನು ಊರಿಂದ ಹೊರಕ್ಕೆ ಹೊರಡಿಸಲು, ಅವರು ವನವಾಸ ಮಾಡುತ್ತ ತಿರುಗುತ್ತಿರುವಾಗ, ದಾರಿಯಲ್ಲಿ ಪರಾಕ್ರಮಶಾಲಿಯಾದ ಶ್ರೀಭೀಮಸೇನನು, ಹಿಡಿಂಬ–ಬಕ ಮುಂತಾದ ರಾಕ್ಷಸರನ್ನು ಸಂಹರಿಸಿದನು. ಬಳಿಕ ಆ ಪಾಂಡವರು ದ್ರುಪದರಾಜನ ಪಟ್ಟಣಕ್ಕೆ ಹೋಗಿ ಅರ್ಜುನನಿಗೆ ಲಕ್ಷ್ಯವೇಧನದಿಂದ ಪ್ರಾಪ್ತಳಾದ ದ್ರೌಪದೀ ದೇವಿಯನ್ನು ಶ್ರೀ ವೇದವ್ಯಾಸರ ಆಜ್ಞಾನುಸಾರವಾಗಿ ಐವರೂ ಮದುವೆಯಾದರು.

ಈ ಸಮಯದಲ್ಲಿ ಶ್ರೀ ಕೃಷ್ಣಮೂರ್ತಿಯು ತನ್ನ ಮಾವನಾದ ಸತ್ರಾಜಿತನನ್ನು ಕೊಂದ ಶತಧನ್ವ ರಾಜನನ್ನು ಸದೆದು, ಮತ್ತೆ ಪಾಂಚಾಲನಗರಕ್ಕೆ ಬಂದು, ದ್ರೌಪದೀ ದೇವಿಯೊಡನೆ ಪಾಂಡವ

ರನ್ನು ಕರೆದುಕೊಂಡು ಬಂದು, ಹಸ್ತಿನಾಪತಿಗೆ ಅನತಿದೂರದಲ್ಲಿ "ಇಂದ್ರಪ್ರಸ್ಥ" ವೆಂಬ ಪಟ್ಟಣವನ್ನು ವಿಶ್ವಕರ್ಮನಿಂದ ನಿರ್ಮಾಣ ಮಾಡಿಸಿ, ಆ ನಗರದಲ್ಲಿ, ಆ ಪಾಂಡವರನ್ನು ನಿಲ್ಲಿಸಿದನು. ಕಾಳಿಂದೀ ನದಿಯ ದಡದಲ್ಲಿ ಕುಳಿತು ಶ್ರೀ ಕೃಷ್ಣಮೂರ್ತಿಯೇ ತನ್ನೊಡೆಯ ನಾಗಬೇಕು! ಎಂದು ತಪಸ್ಸನ್ನು ಆಚರಿಸುತ್ತಿದ್ದ ಕಾಳಿಂದಿ ಎಂಬ ಕನ್ಯೆಯನ್ನು ವಿವಾಹವಾಗಿ ತಮ್ಮ ತಂದೆಯ ತಂಗಿಯ ಮಗಳಾದ ಮಿತ್ರವಿಂದೆಯನ್ನೂ ಕೇಕಯ ರಾಜಪುತ್ರಿಯಾದ ಲಕ್ಷ್ಮಣಾ ದೇವಿ ಯನ್ನೂ ಮದುವೆಯಾದನು.

ಒಂದುದಿನ ನಾರದರು ರೈವತಕ ಪರ್ವತದಲ್ಲಿ ಆನಂದದಿಂದಿದ್ದ ಈ ಕೃಷ್ಣಮೂರ್ತಿಯನ್ನು ಸಂದರ್ಶಿಸಿ "ಮಹಾನುಭಾವ ! ನೀನು ಮಹಾತ್ಮ ! ನೀನು ಧನ್ಯ ! ನೀನು ಪುಣ್ಯಶ್ಲೋಕ !" ಎಂದನೇಕ ರೀತಿಯಾಗಿ ಸ್ತುತಿಸಿ ನರಕಾಸುರನ ದೌಷ್ಟ್ಯವನ್ನು ವಿವರಿಸಿದರು. ಶ್ರೀ ಕೃಷ್ಣಮೂರ್ತಿಯು ಅದಿತಿಯ ಕರ್ಣಕುಂಡಲಗಳನ್ನು ಕಸಿದು ಕೊಂಡ ಕಾಶ್ಯಪೀಕುಮಾರನಾದ ದುಷ್ಟ ನರಕಾಸುರನನ್ನು ವಧಿಸಿ, ಅವನ ಸೆರೆಯಲ್ಲಿದ್ದ ಹದಿನಾರು ಸಾವಿರದ ನೂರು ಮಂದಿ ಕನ್ಯೆಯ ರನ್ನು ನಿರ್ಬಂಧದಿಂದ ಬಿಡಿಸಿ, ಅವರ ಪ್ರಾರ್ಥನೆಯಂತೆ ತಾನು ಅವರ ವಲ್ಲಭನಾಗಿ, ಅವರಲ್ಲಿ ಒಬ್ಬೊಬ್ಬಳಲ್ಲಿಯೂ ಹತ್ತು ಹತ್ತು ಮಂದಿ ಯಂತೆ ಮಕ್ಕಳನ್ನು ಪಡೆದನು. ಮತ್ತು ಶ್ರೀ ಸತ್ಯಭಾಮಾ ದೇವಿಯ ಪ್ರಾರ್ಥನಾನುಸಾರವಾಗಿ ಸ್ವರ್ಗಲೋಕದ ನಂದನವನ ದಲ್ಲಿದ್ದ ಪಾರಿಜಾತ ತರುವನ್ನು ತರಲು ಪ್ರಯತ್ನಿಸಿದಾಗ ಅಜ್ಞಾನ ವಶದಿಂದ ದೇವೇಂದ್ರನು ಯುದ್ಧಕ್ಕೆ ಬರಲು ಅವನನ್ನು ಜಯಿಸಿ ಆ ಪಾರಿಜಾತ ವೃಕ್ಷವನ್ನು ನಿಜನಗರವಾದ ದ್ವಾರಕಾ ನಗರಕ್ಕೆ ತಂದು ಅಲ್ಲಿ ಸ್ಥಾಪಿಸಿದನು. ಯುಧಿಷ್ಠಿರನ ರಾಜಸೂಯ ಯಾಗದ ನೆಪದಿಂದ ಶಿಶುಪಾಲ–ದಂತವಕ್ತ್ರರೆಂಬ ಕ್ರೂರರನ್ನು ಸಂಹರಿಸಿದನು. ಶ್ರೀ ಭೀಮಸೇನನು ಭಗವತ್ಪ್ರೀತ್ಯರ್ಥವಾಗಿ ಶ್ರೀ ಕೃಷ್ಣಮೂರ್ತಿ ಯೊಡನೆ ವೇಷಾಂತರದಿಂದ ಹೋಗಿ ಮಹಾ ಬಲಶಾಲಿಯಾದ ಜರಾ ಸಂಧನನ್ನು ವಧಿಸಿದನು.

ಕೆಲವು ಕಾಲಾನಂತರ ಹಸ್ತಿನಾವತಿಯಲ್ಲಿ ಶಕುನಿಯ ಸಹಾಯ ದಿಂದ ದ್ಯೂತದಲ್ಲಿ ದುರ್ಯೋಧನನು ಪಾಂಡವರನ್ನು ಸೋಲಿಸಿ, ಅವರನ್ನು ಅರಣ್ಯವಾಸ ಅಜ್ಞಾತವಾಸಂಗಳಿಗೆ ಕಳುಹಿಸಲು, ಶ್ರೀ ಕೃಷ್ಣಮೂರ್ತಿಯ ಪರಮಾನುಗ್ರಹಕ್ಕೆ ಪಾತ್ರರಾದಾಪಾಂಡವರು ಆ ಕಷ್ಟಂಗಳನ್ನು ಲೇಶವಾದರೂ ಕ್ಲೇಶವೊಂದದೆ ಕಳೆದ ಬಳಿಕ, ಉಪಪ್ಲಾವ್ಯ ನಗರದಲ್ಲಿ ಶ್ರೀ ಕೃಷ್ಣಮೂರ್ತಿಯ ಸಂದರ್ಶನವನ್ನು ಮಾಡಿ ಸಂತೋಷಿಸಿದರು. ಶ್ರೀ ಕೃಷ್ಣಮೂರ್ತಿ ದ್ವಾರಕಾ ನಗ ರಕ್ಕೆ ಹೊರಟುಹೋದ ಬಳಿಕ, ದುರ್ಯೋಧನನೂ ಅರ್ಜುನನೂ ತಂತಮ್ಮ ಯುದ್ಧದ ಕಾರ್ಯಕ್ಕೆ ಯಾದವರ ಸಹಾಯವನ್ನು ಅಪೇ ಕ್ಷಿಸಿ ಅಲ್ಲಿಗೆ ಬಂದರು. ಆಗ ಶ್ರೀಕೃಷ್ಣಮೂರ್ತಿಯು ಇಬ್ಬರ ಬರು ವಿಕೆಯನ್ನೂ ಅರಿತು, ತಾನೊಂದುಪಾಯವನ್ನು ಆಲೋಚಿಸಿಕೊಂಡು ನಿದ್ದೆ ಹೋಗುವವನಂತೆ ಮಲಗಿದ್ದನು. ದುರ್ಯೋಧನನು ಮೊದಲು ಬಂದು, ಮಲಗಿರುವವರನ್ನು ನಿದ್ದೆಯಿಂದೆಬ್ಬಿಸಬಾರದೆಂಬ ನೀತಿ ಯನ್ನು ನೆನಪಿಗೆ ತಂದುಕೊಂಡು, ತಾನು ರಾಜನಾದುದರಿಂದ ಬೇರೆ ಕಡೆಯಲ್ಲಿ ತನಗೆ ತಾನೇ ಮರ್ಯಾದೆಯನ್ನು ಮಾಡಿಸಿಕೊಳ್ಳಬಾರ ದಾದರೂ, ಮಲಗಿರುವವನ ಕಾಲು ಕಡೆಯಲ್ಲಿ ಕುಳಿತುಕೊಳ್ಳುವುದು ಅವಮಾನವೆಂದು ಬಗೆದು, ಶ್ರೀ ಕೃಷ್ಣಮೂರ್ತಿಯ ತಲೆಯಕಡೆ ಯಲ್ಲಿ ಕುಳಿತುಕೊಂಡನು. ಆಮೇಲೆ ಬಂದ ಅರ್ಜುನನು ತಾನಾ ಪರಮಾತ್ಮನ ಪರಮ ಭಕ್ತನಾದುದರಿಂದ ಆ ಮಹಾನುಭಾವನ ಪಾದಸೇವೆ ಮಾಡುವುದೇ ತನಗೆ ಧರ್ಮವೆಂದು ಬಗೆದು ಕಾಲುಕಡೆ ಯಲ್ಲಿ ಕುಳಿತುಕೊಂಡನು. ಇಬ್ಬರೂ ಕುಳಿತಮೇಲೆ ಶ್ರೀ ಕೃಷ್ಣ ಮೂರ್ತಿಯು ಎಚ್ಚರಗೊಂಡವನಂತೆ ಎದ್ದು, ಮೊದಲು ಕಾಲುಕಡೆ ಕುಳಿತಿರುವ ಅರ್ಜುನನನ್ನು ನೋಡಿ, ಆತನ ಯೋಗಕ್ಷೇಮವನ್ನು ವಿಚಾರಿಸಿದನು. ಬಳಿಕ ತಲೆಯಕಡೆ ಕುಳಿತಿದ್ದ ದುರ್ಯೋಧನನನ್ನು ಕಂಡು ಆತನ ಕುಶಲ ಪ್ರಶ್ನೆ ಮಾಡಿದನು. ಅವರು ತಂತಮ್ಮ ವಿಷ ಯಂಗಳನ್ನು ಅರಿಕೆಮಾಡಿದಮೇಲೆ ಶ್ರೀ ಕೃಷ್ಣಮೂರ್ತಿಯು "ಅಯ್ಯ! ದುರ್ಯೋಧನ ರಾಜ! ನೀನು ಮೊದಲು ಬಂದವನು!

ಅರ್ಜುನನು ಮೊದಲು ನೋಡಲ್ಪಟ್ಟವನು ! ಆದುದರಿಂದ ಇಬ್ಬರಿಗೂ ನಾನು ಸಮವಾಗಿ ಸಹಾಯಮಾಡಬೇಕಾದುದು ಯುಕ್ತವಾಗಿರುವುದು! ಆದಾಗಲೂ ನಿಮ್ಮಂತಹ ಬಂಧುಗಳ ಮೇಲೆ ಯುದ್ಧಮಾಡುವುದು ನನಗೆ ಇಷ್ಟವಿಲ್ಲ. ಈ ಕಾರಣದಿಂದ ಈ ಯುದ್ಧ ಪ್ರಸಕ್ತಿಯಲ್ಲಿ ನಾನು ನಿರಾಯುಧನಾಗಿರುವೆನು. ಆರೊಡನೆಯೂ ಯುದ್ಧವನ್ನು ಮಾಡುವುದಿಲ್ಲ. ಆಯುಧ ಸಂಪನ್ನರಾದ ಯಾದವರೆಲ್ಲರೂ ಒಂದು ಕಡೆಗೂ, ನಾನೊಬ್ಬನುಮಾತ್ರ ಒಂದು ಕಡೆಗೂ ನಿಲ್ಲುವೆವು. ಈಗ ನೀವು ಚೆನ್ನಾಗಿ ಆಲೋಚಿಸಿ ಹೇಳಿರಿ ! ನಿಮಗೆ ಆವುದು ಸಮ್ಮತವೋ ಅದರಂತೆ ನಡೆಯಿಸುವೆನು ! " ಎನ್ನಲು, ದುರ್ಯೋಧನನು ನಿರಾಯುಧನಾದೊಬ್ಬನಿಂದ ಏನಾದೀತೆಂದು ಭಾವಿಸಿ ಸಾಯುಧವಾದ ಸೈನ್ಯವನ್ನು ಅರ್ಜುನನು ಮೊದಲೇ ಅಪೇಕ್ಷಿಸುವನೋ ? ಎಂಬ ಶಂಕೆಯಿಂದ ಆತುರವುಳ್ಳವನಾಗಿ, "ಅಯ್ಯ! ಭಾವ! ನಾನು ಮೊದಲು ಬಂದವನಾದುದರಿಂದ ನಾನು ಮೊದಲು ಕೋರಿಕೊಳ್ಳಬೇಕಾಗಿದೆ! ನಾನು ಸಾಯುಧಸೈನ್ಯವನ್ನೇ ಬಯಸುವೆನು ! " ಎಂದನು. ಅರ್ಜುನನು ಅತ್ಯಂತ ಸಂತೋಷಪಟ್ಟು ನಿರಾಯುಧನಾದರೂ ತನ್ನ ಕುಲದೈವವೆಂಬ ಭಕ್ತಿಯಿಂದ ಶ್ರೀಕೃಷ್ಣಮೂರ್ತಿಯನ್ನು ಮಾತ್ರಅಪೇಕ್ಷಿಸಿದನು. ಅಕಳಂಕಾತ್ಮನಾದ ಭಕ್ತನಿಗಿನ್ನೇನು ಬೇಕು ? ಪರಮಾತ್ಮನನ್ನು ತನ್ನವನನ್ನಾಗಿಸಿಕೊಳ್ಳುವುದೇ ತಾನೆ?

ಆಬಳಿಕ ಶ್ರೀಕೃಷ್ಣಮೂರ್ತಿಯು ಅರ್ಜುನನಿಗೆ ಸಾರಥಿಯಾಗಿ ನಿಂತು, ಯುದ್ಧವನ್ನು ನಡೆಯಿಸಿ, ಭೂಮಿಗೆ ಭಾರಾಯಮಾನರಾಗಿದ್ದ ದುರ್ಯೋಧನಾದಿಗಳನ್ನು ನಾಶಮಾಡಿಸಿ, ಪರಮ ಭಾಗವತರಾದ ಪಾಂಡವರನ್ನು ರಕ್ಷಿಸಿದನು. ಮತ್ತು ತಮ್ಮ ವಂಶದವರಾದರೂ ಮಹಾದೌಷ್ಟ್ಯ ದುರಾಚಾರಗಳಿಂದ ದೂಷಿತರಾಗಿದ್ದ ಯಾದವರನ್ನು, ಗಾಳಿಯ ಹೊಡೆತದಿಂದ ಬಿದಿರು ಒಂದಕ್ಕೊಂದು ಘರ್ಷಣಮಾಡಿ ಬೆಂಕಿಯನ್ನು ಹುಟ್ಟಿಸಿ ವನವನ್ನೇ ನಾಶಮಾಡುವಂತೆ, ಸ್ವಪ್ರೂಹ ಕಲಹವನ್ನುಂಟುಮಾಡಿಸಿ, ಅವರವರೇ ನಾಶ

ವಾಗುವಂತೆ ಮಾಡಿದನು. ಮತ್ತು ತನ್ನ ಪ್ರಿಯಭಕ್ತರಾದ-ಉದ್ಧವ-ಸನಕಾದಿಗಳನ್ನೂ ಶಿಷ್ಯ ಸಹಿತರಾದ ದುರ್ವಾಸರೇ ಮೊದಲಾದವರನ್ನೂ ಯಥಾರ್ಥವಾದ ಸಮಸ್ತ ವೇದಾಂತ ಪ್ರವರ್ತನೆಗಾಗಿ ಆಜ್ಞಾಪಿಸಿ, ಪಾಂಡವಾದಿಗಳಿಗೆ ತಕ್ಕ ತಕ್ಕಂತೆ ಅಪ್ಪಣೆಯನ್ನು ಕೊಟ್ಟು, ಒಂದು ರೂಪದಿಂದ ಭೂಮಿಯಮೇಲೆ ಅದೃಶ್ಯಾಕಾರವನ್ನೂ, ಮತ್ತೊಂದು ರೂಪದಿಂದ ಸವಿತೃನಾಮಕ ಸೂರ್ಯಮಂಡಲವನ್ನೂ ಹೊಂದಿದನು.

ಈ ಬಗೆಯಾದ ವಿಚಿತ್ರ ಚರಿತ್ರೆಗಳುಳ್ಳ ಶ್ರೀಕೃಷ್ಣಮೂರ್ತಿಯ ದಿವ್ಯಾನುಗ್ರಹಕ್ಕೆ ಪಾತ್ರನಾದ ಶ್ರೀ ಭೀಮಸೇನನು ಸಜ್ಜನರಲ್ಲಿ ಸ್ವಭಾವ ಜನ್ಯವಾದ ದ್ವೇಷಬುದ್ಧಿಯುಳ್ಳ ಕ್ರೋಧವಶರಾದ ಮಣಿಮದಾದಿ ದೈತ್ಯರನ್ನು ದಮನಮಾಡಿದಮೇಲೆ, ದ್ರೌಪದೀದೇವಿಯೊಂದಿಗೆ ಯುಧಿಷ್ಠಿರಾದಿ ಪಾಂಡವರು ಶ್ರೀ ಕೃಷ್ಣಮೂರ್ತಿಯನ್ನೇ ಅನುಸರಿಸಿ, ಅವರವರ ಸ್ಥಾನಂಗಳನ್ನು ಪಡೆದರು. ಬಳಿಕ ಅರ್ಜುನಾತ್ಮಜನಾದ ಅಭಿಮನ್ಯುವಿನ ಸುತನಾದ ಪರೀಕ್ಷಿದ್ರಾಜನೆಂಬುವನು, ಅನಿರುದ್ಧಾತ್ಮಜನಾದ ವಜ್ರನಿಂದೊಡಗೂಡಿ, ಶತ್ರುಗಳನ್ನು ಜಯಿಸಿ, ಸರ್ವಾತ್ಮ ಯೋಗಿಯಾದ, ಶ್ರೀಹರಿಯ ಭಕ್ತನಾಗಿ ಸಾಮ್ರಾಜ್ಯ ಸುಖವನ್ನು ಅನುಭವಿಸಿದನು.

ಇಂತು ಕರ್ಣಾಟಕ ವಚನ ಮಣಿಮಂಜರಿಯಲ್ಲಿ
ನಾಲ್ಕನೆಯ ಸರ್ಗವು ಮುಗಿದುದು.
ಶ್ರೀರಾಮಾರ್ಪಣಮಸ್ತು

—:o:—

ಐದನೆಯ ಸರ್ಗ

ಆಬಳಿಕ ಶ್ರೀಕೃಷ್ಣಮೂರ್ತಿ ಭೀಮಸೇನರುಗಳಿಂದ ವೇದ ಶಾಸ್ತ್ರ ಪ್ರವರ್ತನಾರ್ಥವಾಗಿ ಆಜ್ಞಾಪಿತರಾಗಿದ್ದ ಅತ್ರಿ ಪುತ್ರರಾದ ದುರ್ವಾಸ ಮುನಿಗಳೇ ಮೊದಲಾದ ಪರಮಹಂಸರುಗಳು ಶ್ರೀ ವೇದವ್ಯಾಸ ದೇವರ ಅನುಗ್ರಹದಿಂದ ಅವುಗಳನ್ನು ಲೋಕದಲ್ಲಿ ಪ್ರಸಿದ್ಧಮಾಡುತ್ತಲೂ, ತಾವೂ ಅದರಲ್ಲಿ ಪ್ರವರ್ತಿಸುತ್ತಲೂ, ಇದ್ದರು.

ಆ ಕಾಲದಲ್ಲಿ ಕೆಲವು ಜೀವರುಗಳು ಒಂದು ರಹಸ್ಯ ಸ್ಥಾನದಲ್ಲಿ ತಮ್ಮ ಅನುಯಾಯಿಗಳೆಲ್ಲರನ್ನೂ ಸಭೆ ಗೂಡಿಸಿ, ತಂತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುತ್ತಿದ್ದರು. ಅವರಲ್ಲಿ ಒಬ್ಬನು ತನಗೆ ತೋರಿದ ಮಾತನ್ನಾಡುವನು. "ಎಲೈ ಮಿತ್ರರೆ! ನಮ್ಮಲ್ಲಿ ಸಮರ್ಥರಾದ ಕೆಲವರು ಭೂಮಿಯಮೇಲುದಿಸಿ, ನಮ್ಮ ಬೋಧನೆಗಳಿಂದ ಸಕಲರನ್ನೂ ನಮ್ಮವರನ್ನಾಗಿಸಿಕೊಂಡು, ಈಗ ಅತಿಯಾಗಿ ವೃದ್ಧಿಯಲ್ಲಿರುವ ಬೌದ್ಧ ಸಿದ್ಧಾಂತವು ಮಲಿನತೆಯೊಂದುವಂತೆ ಮಾಡಬೇಕು! ಮತ್ತೆ ಕೆಲವರು ಬೌದ್ಧಮತ ವಿರುದ್ಧಾರ್ಥ ಪ್ರತಿಪಾದಕಂಗಳಾದ ಶಾಸ್ತ್ರಂಗಳನ್ನು ರಚಿಸಬೇಕು! ವಿವಿಧ ತರ್ಕಂಗಳಿಂದಲೂ ಬೌದ್ಧರ ಮನೋದಾರ್ಢ್ಯವು ಕಡಮೆಯಾಗುವಂತೆ ಮಾಡಬೇಕು! ಮೊದಲಿನಿಂದಲೂ ನಾವು ಆರಿಗೂ ಹೆದರಿ ಸುಮ್ಮನೆ ಕುಳಿತಿರುವವರಲ್ಲವಷ್ಟೆ? ಚಾರ್ವಾಕ ಮತದಿಂದಲೇ ಈ ಕಾರ್ಯವಾಗಬಹುದೆಂದರೆ ಆ ಮತವು ಬಹುಜನಾದರಣೀಯವಾಗದೆ ಮಾನಹೀನವಾಗಿರುವುದು. ಮತ್ತು ನ್ಯಾಯಸೂತ್ರಕಾರನಾದ ಅಕ್ಷಪಾದನೆಂಬ ಹೆಸರುಳ್ಳ ಗೌತಮನೂ, ವೈಶೇಷಿಕ ಶಾಸ್ತ್ರ ಪ್ರವರ್ತಕನಾದ ಕಣಾದನೂ, ನಾರಾಯಣಾಂಶ ಸಂಭೂತನಾದ ಕಪಿಲಮಹರ್ಷಿಯಲ್ಲದೆ ಬೇರೆ

ಯೂದ ಮತ್ತೊಂದು ಸಾಙ್ಖ್ಯ ಶಾಸ್ತ್ರಕರ್ತನಾದ ಕಪಿಲನೂ ಮುಂ ತಾದವರು ಈಗಾಗಲೇ ಬೇರೆ ಬೇರೆಯಾಗಿ ಶಾಸ್ತ್ರಂಗಳನ್ನು ರಚಿಸಿದ್ದರೂ ಅವುಗಳಿಂದ ಕೇವಲ ನಮ್ಮ ವೈದಿಕಮತ ಸಿದ್ಧಾಂತವು ವ್ಯಕ್ತವಾಗುವುದಿಲ್ಲ. ಅಂತಹ ಸಂದಿಗ್ಧಾರ್ಥಂಗಳುಳ್ಳ ಶಾಸ್ತ್ರಂಗಳಿಂದ ನಮ್ಮ ಕಾರ್ಯಸಿದ್ಧಿಯಾಗಲಾರದು. ಬೌದ್ಧ ಶಾಸ್ತ್ರವು ಸ್ಪಷ್ಟವಾಗಿ ವೇದವಿರುದ್ಧವಾಗಿರುವುದು. ಪೂರ್ವದಲ್ಲಿ ಶರ್ವನಿಂದ ಸಂಹೃತರಾದ ತ್ರಿಪುರಾಸುರರು ಮತ್ತೆ ಭೂಮಿಯಮೇಲುದಿಸಿ ಆಸ್ತಿಕ ಜನರ ಸಹವಾಸದಿಂದ ವೇದಂಗಳನ್ನರಿತು ಅವುಗಳಿಗೆ ತಮ್ಮ ಇಷ್ಟಪ್ರಕಾರ ಅರ್ಥಂಗಳನ್ನು ಕಲ್ಪಿಸುತ್ತಿದ್ದರು. ಹಾಗೆ ನೀಚರಾದ ಆ ದೈತ್ಯರು ವೇದಾಭ್ಯಾಸಮಾಡಿ ಅನರ್ಥಂಗಳನ್ನು ಕಲ್ಪಿಸುತ್ತಿದ್ದುದನ್ನು ಕಂಡು "ಏಧಮಾನದ್ವಿಟ್" (ತಮ್ಮ ಯೋಗ್ಯತೆಗಿಂತಲೂ ಹೆಚ್ಚಿನ ಶ್ರೇಯಸ್ಸನ್ನು ಕೋರುವವರಿಗೆ ವೈರಿ) ಎಂಬ ಶ್ರುತ್ಯುಕ್ತವಾದ ಬಿರುದನ್ನು ಪಡೆದ ಶ್ರೀಹರಿಯು ಬುದ್ಧ (ಜ್ಞಾನಿ) ನಾಮಕನಾಗಿ ಅವತರಿಸಿ, ವೇದಂಗಳು ಅಪ್ರಮಾಣಂಗಳೆಂಬುದಾಗಿ ಹೇಳುತ್ತಿರುವುದರ ಮೂಲಕವಾಗಿ, ಆ ದೈತ್ಯರನ್ನು ವಂಚಿಸುತ್ತಿರುವುದನ್ನು ಕಂಡು, ರುದ್ರಾದಿದೇವತೆಗಳು ಈ ಬುದ್ಧನಮೇಲೆ ಪ್ರಯೋಗಿಸಿದ ಸಮಸ್ತ ಅಸ್ತ್ರ ಶಸ್ತ್ರಂಗಳನ್ನೂ ತಾನು ನುಂಗುವುದರ ಮೂಲಕ, ತಾನು ಅಸಾಧಾರಣವಾದ ಕಾರ್ಯಂಗಳನ್ನು ಪ್ರದರ್ಶನಮಾಡಿ, ತನ್ನ ಮಾತಿನಲ್ಲಿ ಆ ದೈತ್ಯರಿಗೆ ವಿಶ್ವಾಸವನ್ನು ಹುಟ್ಟಿಸಿ, ಮೋಹಪಡಿಸಿದನು. ಆಮೇಲೆ ಆ ದೈತ್ಯರು ಬುದ್ಧ ದೇವರು ಪ್ರಯೋಗಿಸಿರುವ ದೇವೈಕವಿಜ್ಞೇಯವಾದ ಶೂನ್ಯಾದಿ ಶಬ್ದಂಗಳಿಗೆ ಅರ್ಥಾಂತರ ಸದ್ಭಾವರೂಪವಾದ ಸಿದ್ಧಾಂತವನ್ನು ಅರಿಯದವರಾಗಿ, ಆಪಾತತಃಬುದ್ಧೋಕ್ತ ಮಾರ್ಗವಾಗಿ ತಮಗೆ ತೋರುವ ಅಪಾರ್ಥಂಗಳನ್ನೇ ನಂಬಿ, ಅವುಗಳನ್ನೇ ಪ್ರಚಾರ ಮಾಡುತ್ತಾ ಬಂದರು. ಬ್ರಹ್ಮಚರ್ಯ–ಗಾರ್ಹಸ್ಥ್ಯ – ವಾನಪ್ರಸ್ಥ – ಸಂನ್ಯಾಸ – ಎಂಬ ಆಶ್ರಮಗಳಿಲ್ಲದೆ, ನಗ್ನತೆ–ನೀಲವಸನಧಾರಣ–ಮೊದಲಾದ ದುರಾಚಾರಗಳಿಂದ ಕೂಡಿ

ಪ್ರತ್ಯಕ್ಷವಾಗಿಯೇ ಶ್ರುತಿಗಳನ್ನು ದೂಷಿಸಿ, ಸಮಯೋಚಿತ ಕಾರ್ಯಕರಣಪಟುಗಳಾಗದೆ ಮಾಯಾವಾದಮಾಡುವ ಬೌದ್ಧರನ್ನು ಆಸ್ತಿಕರೆಲ್ಲರೂ ನಿಂದಿಸುವರು. ಜೈನ–ಪಾಶುಪತ–ಮೊದಲಾದ ಮತಪ್ರವರ್ತಕರುಕೂಡ ಹೀಗೆಯೇ ಆಸ್ತಿಕರಿಗೆ ವಿರೋಧಿಗಳಾಗಿರುವರಾದರೂ ತದ್ವಿರೋಧಾಚರಣೆಯ ಯುಕ್ತಿಯನ್ನರಿಯರು. ಆದುದರಿಂದ ನಮ್ಮಲ್ಲಿ ಒಬ್ಬನು ಭೂಲೋಕದಲ್ಲಿ ಹುಟ್ಟಿ, ಉತ್ತಮವೆನಿಸಿದ ಯತ್ಯಾಶ್ರಮ ಸ್ವೀಕಾರವನ್ನುಮಾಡಿ ವೇದಾಂತಿಯೆಂದು ಪ್ರಸಿದ್ಧನಾಗಿ ಸಮಸ್ತ ವೇದಂಗಳಿಗೂ ಅರ್ಥಂಗಳನ್ನು ವಿವರಿಸುವುದರಮೂಲಕ ನಮ್ಮ ಮತವನ್ನು ಪ್ರಚಾರಪಡಿಸಬೇಕಾಗಿದೆ. ಈ ಕಾರ್ಯ ಸಾಧನೆಗೆ ಸಮರ್ಥನಾದವನೊಬ್ಬನನ್ನು ಈ ಸಭಿಕರಲ್ಲಿ ಆರಿಸಬೇಕು!” ಎನ್ನಲು ಆ ಸಭಾಸದರೆಲ್ಲರೂ ಸಮ್ಮತಿಸಿ ಸಂತೋಷದಿಂದ, ಆ ಉಪನ್ಯಾಸಕನನ್ನು ಉದ್ದೇಶಿಸಿ, “ಅಣ್ಣಾ ನಿನಗೆ ನಮಸ್ಕರಿಸುವೆವು. ನೀನು ಭೂಲೋಕಕ್ಕೆ ಹೋಗಿ ಅವತರಿಸಿ, ಬೌದ್ಧಮತವನ್ನು ಖಂಡಿಸಿ, ವೇದಂಗಳ ಪ್ರಾಮಾಣ್ಯವನ್ನು ಸಾಧಿಸಿ, ಇತರ ಮತಂಗಳನ್ನು ನಿರಾಕರಿಸಿ, ನಮ್ಮ ಮತವನ್ನು ಪ್ರಚಾರಪಡಿಸಬೇಕು! ಸನಕ ಸನಂದನಾದಿಗಳೇ ಮೊದಲಾದ ಪರಮಹಂಸರ ಕರಕಮಲ ಸಂಜಾತ ವಂಶಸ್ಥರಾದ ಏಕದಂಡಿಗಳೂ, ತ್ರಿದಂಡಿಗಳೂ ಆದ ಯತಿಗಳು ಈಗಲೂ ಇರುವರು. ಅವರುಗಳ ಮಧ್ಯದಲ್ಲಿ ಮುಖ್ಯರಾದ ತಪೋಧನರಾದ ಪರತೀರ್ಥರೆಂಬ ಯತಿಗಳಿರುವರು. ನೀನು ಅವರನ್ನು ಆಶ್ರಯಿಸಿ ಅವರ ಶಿಷ್ಯನಾಗಿ ಸಮಸ್ತ ವಿದ್ಯೆಗಳನ್ನೂ ಸಂಗ್ರಹಿಸಿದಬಳಿಕ ನಿನ್ನ ಕಾರ್ಯಸಾಧನೆಗೆ ಪ್ರಯತ್ನಪಡು! ಆ ಪರತೀರ್ಥರ ಶಿಷ್ಯನೆನಿಸುವುದರಿಂದ ನೀನು ಸರ್ವರಿಂದಲೂ ಸಂಭಾವ್ಯನಾಗುವೆ! ನೀನು ವೇದಂಗಳಿಗೆ ನಿರ್ಣಾಯಕಂಗಳಾದ ಬ್ರಹ್ಮಸೂತ್ರಂಗಳಿಗೆ ನಮ್ಮ ಸಂಪ್ರದಾಯಾನುಸಾರವಾಗಿ ಅರ್ಥವನ್ನು ವಿವರಿಸು! ಕಾಲಾನುಸಾರವಾಗಿ ಪರಮೇಶ್ವರನು ನಮ್ಮಮೇಲೆ ಇಟ್ಟಿರುವ ಅವ್ಯಾಜ ಕರುಣೆಯಿಂದ ಬಹುಜನರು ನಿನ್ನ ವಾದವನ್ನು ನಂಬುವರು. ನಿನ್ನೀವಿಧವಾದ

ವಾದದ ನಿರಾಕರಣದಲ್ಲಿ ಶಕ್ತಿ ರಹಿತರಾದ ಕೆಲವರು ಉಪೇಕ್ಷಿಸ ಬಹುದು. ಸಮರ್ಥರಾದ ಒಬ್ಬಿಬ್ಬರು ಮಾತ್ರ ಈ ವಾದವನ್ನು ಪ್ರತಿಭಟಿಸುವುದಕ್ಕೆ ಪ್ರಯತ್ನಿಸಲೂ ಬಹುದು. ಆದರೂ ಅಲ್ಪ ಸಂಖ್ಯಾತರಾದ ಅವರಿಂದೇನಾದೀತು? ನಿನ್ನ ಕಾರ್ಯಕ್ಕೆ ಸಹಾಯ ಕರಾಗಿ ನಮ್ಮಲ್ಲಿ ಕೆಲವರಾಗಲೇ ಭೂಮಿಯಮೇಲೆ ಹುಟ್ಟಿರುವರು. ನೀನು ಅವತರಿಸಿದಮೇಲೂ ಕೆಲವರು ಉದಯಿಸುವರು. ಆದುದರಿಂದ ನೀನು ಸಹಾಯ ರಹಿತನೆಂದು ಎಣಿಸಬೇಡ!" ಈ ರೀತಿಯಾಗಿ ಆ ಸಭ್ಯರಿಂದ ಆಜ್ಞಪ್ತನಾದಾತನು ಅದರಂತೆ ನಡೆಯಲು ಸಂಕಲ್ಪ ಮಾಡಿದನು.

ಆ ಕಾಲದಲ್ಲಿ ಸಕಲ ಭೂಮಿಯೂ ಬೌದ್ಧಶಾಸ್ತ್ರದಿಂದ ವ್ಯಾಪ್ತ ವಾಗಿದ್ದಿತು. ಅದರ ದೆಸೆಯಿಂದ ವರ್ಣಾಶ್ರಮಧರ್ಮಂಗಳು ತಿರ ಸ್ಕೃತಂಗಳಾಗಿದ್ದುವು. ಆಗಿನ ಬೌದ್ಧರು ಇಂದ್ರಜಾಲ ವಿದ್ಯೆಯಿಂದ ಆಕಾಲದ ರಾಜರನ್ನು ತಮ್ಮ ಸ್ವಾಧೀನಪಡಿಸಿಕೊಂಡು "**ಶೂನ್ಯವೇ ತತ್ವವು**" ಎಂಬುದಾಗಿ ಉಪದೇಶಮಾಡುತ್ತಾ ಆ ರಾಜರ ಬಲದಿಂದ ಸಜ್ಜನರನ್ನು ಬಾಧಿಸುತ್ತಾ ಸರ್ವರನ್ನೂ ಧರ್ಮ ಕರ್ಮ ಭ್ರಷ್ಟರ ನ್ನಾಗಮಾಡಿಸುತ್ತಿದ್ದರು.

ಆ ಸಮಯದಲ್ಲಿ ಗೋವಿಂದ ಭಟ್ಟರೆಂಬ ಒಬ್ಬ ಬ್ರಾಹ್ಮಣರು, ಬ್ರಹ್ಮ-ಕ್ಷತ್ರಿಯ-ವೈಶ್ಯ-ಶೂದ್ರರೆಂಬ ನಾಲ್ಕು ವರ್ಣಂಗಳಲ್ಲಿಯೂ ನಾಲ್ಕು ಮಂದಿ ಕನ್ಯೆಯರನ್ನು ವರಿಸಿ ಬ್ರಾಹ್ಮಣಿಯಲ್ಲಿ ಶಬರನೆಂಬವ ನನ್ನೂ, ಕ್ಷತ್ರಿಯೆಯಲ್ಲಿ ವಿಕ್ರಮಾದಿತ್ಯನೆಂಬವನನ್ನೂ, ವೈಶ್ಯೆಯಲ್ಲಿ ಹರಿಶ್ಚಂದ್ರನೆಂಬವನನ್ನೂ, ಶೂದ್ರ ಸ್ತ್ರೀಯಲ್ಲಿ ಭರ್ತೃಹರಿಯೆಂಬವ ನನ್ನೂ ಮಕ್ಕಳನ್ನಾಗಿ ಪಡೆದರು. ಆಯಾ ವರ್ಣದವಳ ಮಕ್ಕಳು ಆಯಾ ವರ್ಣಾಶ್ರಮ ಧರ್ಮಂಗಳನ್ನು ಶ್ರದ್ಧೆಯಿಂದಾಚರಿಸುತ್ತಾ ಪಂಡಿತರ ಮೆಚ್ಚುಗೆಗೆ ಪಾತ್ರರಾಗಿದ್ದರು. ಗೋವಿಂದಭಟ್ಟರು ಹೆಂ ಡಿರು ಮಕ್ಕಳನ್ನು ಬಿಟ್ಟು ದೇಶಸಂಚಾರಕ್ಕೆ ಹೊರಟುಹೋದರು.

ಬ್ರಾಹ್ಮಣಿಯು ಪುತ್ರನಾದ ಶಬರನು ಆಗ ನಿಬಡೀಕೃತವಾಗಿದ್ದ ಬೌದ್ಧ ಸಿದ್ಧಾಂತಾನುಯಾಯಿಗಳಿಗೆ ತಿಳಿಯದಂತೆ ರಹಸ್ಯವಾಗಿ ವೇದವ್ಯಾಸರ ಶಿಷ್ಯರಾದ ಜೈಮಿನ್ಯಾಚಾರ್ಯರ ಕರ್ಮ ಮೀಮಾಂಸಾಪರವಾದ ಸೂತ್ರಂಗಳಿಗೆ ವ್ಯಾಖ್ಯಾನಂಗಳನ್ನು ಬರೆದನು. ವಿಕ್ರಮಾದಿತ್ಯನು ಭೂಪಾಲೋತ್ತಮನಾದನು. ಹರಿಶ್ಚಂದ್ರನು ದೇವಶ್ರೇಷ್ಠರನ್ನು ಯಜ್ಞದಿಂದ ಸಂತೋಷಪಡಿಸಿ ಅವರಿಂದ ಆಯುರ್ವೇದಶಾಸ್ತ್ರ ಪರಿಣತನಾದನು. ಭರ್ತೃಹರಿಯು ಯಜ್ಞದ ನಿಜವಾದ ಅರ್ಥವನ್ನು ತಿಳಿದುಕೊಂಡು ದೇಶಸಂಚಾರಕ್ಕೆ ಹೊರಟನು.

ವೇದಜ್ಞನಾದ ಶಬರನಿಗೆ ಭಟ್ಟ ಕುಮಾರ (ಕುಮಾರಿಲಭಟ್ಟ) ಭಟ್ಟನಾರಾಯಣ, ಎಂಬ ಇಬ್ಬರು ಮಕ್ಕಳಾದರು. ಆ ಕಾಲದ ಬೌದ್ಧರ ಹಾವಳಿಯಿಂದ ವೇದ ಧರ್ಮಂಗಳಿಗೆ ಲೋಪರೂಪವಾದ ಸಂಕಟ ಉಂಟಾಗುತ್ತಿರಲು, ದೊಡ್ಡವನಾದ ಭಟ್ಟ ಕುಮಾರನು "ಬೌದ್ಧ ಶಾಸ್ತ್ರವನ್ನು ನಿಗ್ರಹಿಸಬೇಕಾದರೆ ಆಶಾಸ್ತ್ರದಲ್ಲಿ ಪರಿಜ್ಞಾನವುಂಟಾಗಿರಬೇಕಾದುದು ಆವಶ್ಯಕ" ಎಂದು ತನ್ನ ತಮ್ಮನೊಡನೆ ಆಲೋಚಿಸಿ ಅದನ್ನು ಕಲಿಯಲಿಕ್ಕೋಸ್ಕರವೇ ತಾನು ಬೌದ್ಧ ವೇಷಧಾರಿಯಾಗಿ, ಒಬ್ಬ ಬೌದ್ಧಾಚಾರ್ಯನಲ್ಲಿ ಶಿಷ್ಯನಾಗಿ ಕೆಲವುಕಾಲ ಆತನನ್ನು ಸೇವಿಸುತ್ತಾ, ಆ ಶಾಸ್ತ್ರದ ರಹಸ್ಯಾಂಶಂಗಳನ್ನು ತಿಳಿದುಕೊಳ್ಳುತ್ತಿದ್ದನು. ಒಂದುದಿನ ಆಚಾರ್ಯನ ಉಪ್ಪರಿಗೆಯ ಮೇಲೆ ಕುಮಾರಿಲಭಟ್ಟನು ಆ ಗುರುವಿನತಲೆಗೆ ಎಣ್ಣೆಯನ್ನು ಒತ್ತುತ್ತಿರುವಾಗ, ಆ ಗುರು ವೇದಾಪ್ರಾಮಾಣ್ಯ ಪ್ರತಿಪಾದಕಂಗಳಾದ ವಾಕ್ಯಂಗಳನ್ನು ನಿರ್ಭಯವಾಗಿ ಹೇಳುತ್ತಿರಲು, ಶಿಷ್ಯನೆನಿಸಿದೀ ಕುಮಾರಿಲಭಟ್ಟನಿಗೆ ಬಹಳ ಮನೋವ್ಯಥೆಯುಂಟಾಗಿ, ಆತನಕಣ್ಣಿಂದ ನೀರು ತನ್ನಷ್ಟಕ್ಕೆ ತಾನೇ ಸುರಿಯುತ್ತಿದ್ದಿತು. ಆ ಗುರುವಿನ ತೊಡೆಯಮೇಲೆ ಆ ದುಃಖಮಿಶ್ರವಾದ ಉಷ್ಣಾಶ್ರು ಬಿಂದುಗಳು ಒಂದೆರಡು ಬಿದ್ದುದನ್ನು ಕಂಡಾಗುರುವು, ಈ ಶಿಷ್ಯನು ಜಾತ್ಯಾ ಬೌದ್ಧನಲ್ಲವೆಂದೂ, ಬೌದ್ಧಶಾಸ್ತ್ರ ಸಿದ್ಧಾಂತವನ್ನು ತಿಳಿಯಲೆಳಸಿ ಪ್ರಚ್ಛನ್ನ

ವೇಷಧಾರಿಯಾಗಿ ಬಂದಿರುವ ಬ್ರಾಹ್ಮಣನೆಂದೂ ನಿಶ್ಚಯಿಸಿ, "ವೇಷಧಾರಿಯಾದೀವೋಸಗಾರನನ್ನೀಗಲೇ ವಿನಾಶಗೊಳಿಸಿರಿ!" ಎಂದು ತನ್ನ ಇತರ ಶಿಷ್ಯರಿಗೆ ಆಜ್ಞೆಮಾಡಿದನು. ಕುಮಾರಿಲಭಟ್ಟನು ಬೌದ್ಧರಿಂದ ಸಂಹೃತನಾಗುವುದಕ್ಕಿಂತಲೂ ಸ್ವಧರ್ಮ ರಕ್ಷಣಾರ್ಥವಾಗಿ ತಾನೇ ಸಾಯುವುದು ಮೇಲೆಂದೆಣಿಸಿ, "ವೇದಂಗಳು ಪ್ರಾಮಾಣ್ಯವುಳ್ಳವುಗಳಾದರೆ ನಾನು ಸಾಯುವುದಿಲ್ಲ" ಎನ್ನುತ್ತಾ ಆ ಉಪ್ಪರಿಗೆಯಿಂದ ಕೆಳಕ್ಕೆ ದುಮುಕಿದನು. ವೇದಂಗಳು ಸತ್ಯಂಗಳಾದಕಾರಣವೇ ಆತನಿಗೆ ಪ್ರಾಣಹಾನಿಯಾಗಲಿಲ್ಲ. ಆದರೆ ಆತನು ಬಿದ್ದಕಡೆ ಇದ್ದ ಒಂದು ಗೂಟವು ತಗಲಿ ಆತನ ಒಂದು ಕಣ್ಣು ಕಳೆದುಹೋಯಿತು. ಆಗ "ಎಲೋ ಕುಮಾರಿಲಭಟ್ಟ! ನೀನು ವೇದಪ್ರಾಮಾಣ್ಯ ವಿಷಯದಲ್ಲಿ ವೇದಂಗಳು ಪ್ರಾಮಾಣ್ಯವುಳ್ಳವುಗಳಾದರೆ, ಎಂದು ಸಂಶಯಪಟ್ಟುದರಿಂದಲೇ ಒಂದು ಕಣ್ಣು ನಿನಗೆ ಇಲ್ಲದಂತಾಯಿತು!" ಎಂಬುದಾಗಿ ಅಶರೀರವಾಣಿಯಾಯಿತು. ಆ ಶಬ್ದವನ್ನು ಸರ್ವರೂ ಕೇಳಿದರು.

ಆ ದೇಶದ ರಾಜನೂ ಆ ಅಶರೀರವಾಣಿಯನ್ನು ಕೇಳಿದವನಾಗಿ ಆ ಕುಮಾರಿಲಭಟ್ಟನನ್ನು ತನ್ನಬಳಿಗೆ ಕರೆಯಿಸಿ "ಎಲೈ ಬ್ರಾಹ್ಮಣನೆ! ವೇದ ಪ್ರಾಮಾಣ್ಯ ವಿಷಯದಲ್ಲಿ ನೀನು ಸಂಶಯಗ್ರಸ್ಥನಾದುದರಿಂದಲೇ ನಿನಗೆ ಒಂದು ಕಣ್ಣು ಕಳೆದುಹೋಯಿತು ಎಂದು ಅಶರೀರವಾಣಿಯಾಯಿತಷ್ಟೆ? ನಿನ್ನ ಮತವೆಂತಹುದು?" ಎಂದು ಕೇಳಲು ಆ ಭಟ್ಟನು ಆತನು ಬೌದ್ಧರಾಜನೆಂಬ ಹೆದರಿಕೆಯಿಲ್ಲದೆ "ಮಹಾರಾಜಾ! ಸಂಸಾರಸಾಗರದ ದುಃಖದ ದೆಸೆಯಿಂದ ಬಿಡುಗಡೆಯನ್ನು ಹೊಂದಲಪೇಕ್ಷೆಯುಳ್ಳವರು-ವರ್ಣ-ಆಶ್ರಮ-ಇವುಗಳಿಗೆ ಅರ್ಹಂಗಳಾದ ಧರ್ಮಂಗಳನ್ನು ಆಚರಿಸಲೇಬೇಕು! ವೇದಂಗಳು ಯಥಾರ್ಥಜ್ಞಾನಪ್ರದಾಯಕಂಗಳು! ಮತ್ತು ಅಪೌರುಷೇಯಂಗಳು! ಇದೇ ನಮ್ಮ ಮತವು! ಎಂದು ಪರಮಾತ್ಮನಿಂದ ಆಜ್ಞಾಪಿಸಲ್ಪಟ್ಟಿರುವುದು. 'ಸೌಗತಂ' ಎಂದರೆ ಬೌದ್ಧ ಸಂಬಂಧವಾದ ಮತವನ್ನು ಬಿಡ

ಬೇಕು ! ಎಲೈ ಜನಸ್ತೋತ್ರ ಪಾತ್ರನಾದ ಸುಗುಣಿಯೆ ! ಬೌದ್ಧರಿಗೂ ನನಗೂ ಶಾಸ್ತ್ರಾರ್ಥ ವಿಚಾರವಾಗಿ ಸಭೆಯನ್ನು ಕೂಡಿಸಿ, ನೀನು ಸಭಾಧ್ಯಕ್ಷನಾಗಿ ನೋಡುತ್ತಿರು ! ಆ ವಾದದಲ್ಲಿ ಆರು ಸೋಲುವರೋ ಅವರನ್ನಾಕ್ಷಣವೇ ಅಗ್ನಿಗೆ ಆಹುತಿಯನ್ನಾಗಿಸು ! ಇದೇ ನನ್ನ ಪ್ರತಿಜ್ಞೆ ! ನೀನು ಇತರ ಮತಪನಾದರೂ ಸೌಜನ್ಯನಿಧಿಯಾಗಿರುವುದರಿಂದ ನೀನೇ ಸಭಾಧ್ಯಕ್ಷನಾಗುವ ವಿಷಯದಲ್ಲಿ ನನಗೆ ಸಂಪೂರ್ಣವಾದ ನಂಬುಗೆಯಿರುವುದು !" ಎಂದು ಹೇಳುತ್ತಲೇ ದೈವ ಚೋದಿತನಾದಾರಾಜನು "ಎಲೈ ಬ್ರಾಹ್ಮಣ ! ನಾನು ರಾಜನಾದುದರಿಂದ ನಿಷ್ಪಕ್ಷಪಾತವಾಗಿ ನ್ಯಾಯ ವಿಮರ್ಶೆಯನ್ನು ಮಾಡುವೆನು. ನಾನು ಬೌದ್ಧನಾದರೂ ಬೌದ್ಧಾಚಾರ್ಯರು ವಾದದಲ್ಲಿ ಸೋತರೆ ಅವರನ್ನಾದರೂ ಅಗ್ನಿಯಲ್ಲಿ ಕೆಡಹುವೆನು" ಎಂದು ಹೇಳಿ ಒಂದುದಿನ ಸಭೆಯನ್ನು ನೆರೆಯಿಸಿದನು.

ಕುಮಾರಿಲಭಟ್ಟನು ತಮ್ಮನಾದ ಭಟ್ಟನಾರಾಯಣನೊಂದಿಗೂ ತಂದೆಯಾದ ಶಬರನೊಂದಿಗೂ ಬೇಗಬಂದು ಸಭೆಯನ್ನು ಸೇರಿದನು. ಹಲವುಮಂದಿ ಬೌದ್ಧಾಚಾರ್ಯರು ರಾಜಾಜ್ಞೆಯಂತೆ ಉತ್ಸಾಹದಿಂದ ಬಂದು ನೆರೆದರು. ಆ ರಾಜನು ಪ್ರತ್ಯಕ್ಷನಾಗಿದ್ದು, ನಿಷ್ಪಕ್ಷಪಾತವಾದ ಬುದ್ಧಿಯಿಂದ ಸಭಾಧ್ಯಕ್ಷನಾಗಿ, ಇವರುಗಳ ತರ್ಕವಿತರ್ಕಂಗಳನ್ನು ಚೆನ್ನಾಗಿ ಕೇಳುತ್ತಿದ್ದನು. ಆ ಕುಮಾರಿಲಭಟ್ಟನು ದೂಷಣಾನುಮಾನಂಗಳಿಂದ ನಿರಾಕರಿಸಲಶಕ್ಯವಾದ ಬೌದ್ಧ ಶಾಸ್ತ್ರವನ್ನು ಭೇದಿಸುವಂತಹ ಜೈಮಿನೀ ಸೂತ್ರಕ್ಕೆ ಶಬರನು ಮಾಡಿದ ಭಾಷ್ಯದ ಅರ್ಥವನ್ನು ವಿವರಿಸಿದನು. "ಕುಮಾರಿಲಭಟ್ಟನಿಗೂ ಬೌದ್ಧಾಚಾರ್ಯರುಗಳಿಗೂ ಈದಿನ ವಾದವಿವಾದಂಗಳು ನಡೆಯುವುವು !" ಎಂಬ ಪ್ರಸಿದ್ಧ ಪತ್ರಿಕೆಯು ಆ ನಗರದ ಬಹಿರ್ದ್ವಾರದಲ್ಲಿ ಪತಾಕೆಯಂತೆ ಪರಿಶೋಭಿಸುತ್ತಿದ್ದಿತು. "ಸೋತವರು ಅಗ್ನಿ ಪ್ರವೇಶಮಾಡುವುದೇ" ಎಂಬ ಪಣವಾಗುಳ್ಳ ಆ ವಾದದಲ್ಲಿ ಸ್ವಪಕ್ಷಸ್ಥಾಪನವಿಲ್ಲದೆ ಪರಪಕ್ಷನಿರಾಕರಣಮಾತ್ರವಾಗುಳ್ಳ (ವಿತಂಡ) ವಾದ

ಮಾಡುವ ಬೌದ್ಧರನ್ನು ಜಯಿಸಿ, ವೇದಂಗಳ ಅಪ್ರಾಮಾಣ್ಯ ಪ್ರತಿಪಾದನಾದಿಗಳಿಂದ ಅಲ್ಪಾಯುಷ್ಕರಾಗಿದ್ದ ಬೌದ್ಧರುಗಳನ್ನು ರಾಜಾಜ್ಞೆಯಂತೆ ಬಹುಬೇಗನೆ ಅಗ್ನಿ ಪ್ರವೇಶಮಾಡಿಸಿದನು. ಕೆಲವರು ಹಡಗಿನಲ್ಲಿ ಕುಳಿತು ಹೊರಟುಹೋಗಿ ದೇಶಾಂತರಗತರಾದರು. ಕೆಲವರು ಬೌದ್ಧ ಚಿಹ್ನೆಗಳನ್ನು ತ್ಯಜಿಸಿ ವೈದಿಕರಂತಾದರು. ಕೆಲವರು ಆ ದೇಶದ ಗಡಿಗಳನ್ನು ದಾಟಿ ಬಹುದೂರಕ್ಕೆ ಓಡಿಹೋದರು. ಬಕ್ಕನೇ ಮೊದಲಾದ ಕೆಲವರೂ ಆ ರಾಜನೂ ವೈದಿಕ ಮತಾವಲಂಬಿಗಳಾದರು.

ಇಂತು ಕರ್ಣಾಟಕ ವಚನ ಮಣಿಮಂಜರಿಯಲ್ಲಿ

ಐದನೆಯ ಸರ್ಗವು ಮುಗಿದುದು.

ಶ್ರೀ ರಾಮಾರ್ಪಣಮಸ್ತು

ಆರನೆಯ ಸರ್ಗ

ಈ ಬಗೆಯಾಗಿ ವೇದ ವಿರೋಧಿಗಳಾದ ಬೌದ್ಧರು ನಾಶವಾಗುತ್ತಿರಲು, ವೇದಾರ್ಥ ನಿರ್ಣಾಯಕಂಗಳಾದ ಪೂರ್ವೋತ್ತರಮೀಮಾಂಸಾಶಾಸ್ತ್ರಂಗಳೂ ವರ್ಣಾಶ್ರಮಧರ್ಮಂಗಳೂ ವಿಕಾಸವನ್ನೊಂದುತ್ತಿದ್ದುವು. ಬ್ರಾಹ್ಮಣರು ಸಂತುಷ್ಟರಾದರು. ಜ್ಯೋತಿಷ್ಟೋಮಾದಿ ಯಜ್ಞಂಗಳು ಸರಿಯಾಗಿ ನಡೆಯಿಸಲ್ಪಡುತ್ತಿದ್ದುವು.

ಆಗ ಭಾರವಿಯೆಂಬ ಕವಿಯು ಕರ್ಮವೇ ಪ್ರಧಾನವೆಂಬ ಭಟ್ಟ ಸಂಬಂಧಿಯಾದ ನಿರೀಶ್ವರಮತವನ್ನು ನಿರಾಕರಿಸಿದನು. ಕರ್ಮ ಪ್ರಾಧಾನ್ಯವೆಂಬ ಮತದ ವಿಷಯದಲ್ಲಿ ಭಟ್ಟ (ಕುಮಾರಿಲಭಟ್ಟ) ಮುರಾರಿ-ಗುರು (ಭಾರವಿಯ ತಮ್ಮನಾದ ಪ್ರಭಾಕರನು) ಎಂಬ ಮೂವರು ಮೀಮಾಂಸಕರು ಶಾಸ್ತ್ರ ರಚನೆಮಾಡಿದರೂ ಭಟ್ಟ ಸಂಬಂಧಿಯಾದ ಕರ್ಮವೇ ಪ್ರಾಧಾನ್ಯವೆಂಬ ನಿರೀಶ್ವರವಾದಿ ಮತವು ನಿರಾಕರಿಸಲ್ಪಟ್ಟಿತೆಂದು ತಿಳಿಯತಕ್ಕುದು. ಗುರು (ಪ್ರಭಾಕರನು) ಭಟ್ಟನಲ್ಲಿ ಮಾತ್ಸರ್ಯದಿಂದಲೇ ಅವನ ಶಾಸ್ತ್ರವನ್ನು ಶ್ರವಣಮಾಡಿದನು. ಮಾಘ-ವರರುಚಿ-ಬಾಣ-ಮಯೂರ- ಕಾಳಿದಾಸ-ದಂಡಿ ಮುಂತಾದವರೂ ಭಟ್ಟಶಾಸ್ತ್ರವನ್ನು ಉಪೇಕ್ಷಿಸಿದರು. ತರ್ಕಶಾಸ್ತ್ರ ವೇತ್ತನಾದ ಉಮ್ಬೇಕ-ತನ್ತ್ರಿ (ಮೀಮಾಂಸಾ ಶಾಸ್ತ್ರಕಾರಕನಾದ ಪ್ರಭಾಕರ) ರೇಫಣ-ಇವರುಗಳು ಭಟ್ಟ ಶಾಸ್ತ್ರವನ್ನು ಕಾರಣಾಂತರಗಳಿಂದ ಶ್ರವಣಮಾಡಿದರು.

ಪ್ರಭಾಕರನಾದರೋ ಮೊದಲಿನಿಂದಲೂ ಭಾಟ್ಟಶಾಸ್ತ್ರದಲ್ಲಿ ಮಾತ್ಸರ್ಯವಿದ್ದುದರಿಂದಲೂ, ಅದು ಸ್ವಸಿದ್ಧಾಂತ ಸ್ಥಾಪನ ಸಮ

ರ್ಥಂಗಳಲ್ಲದ ವ್ಯರ್ಥವಾದ ಯುಕ್ತಿಗಳಿಂದ ಕೂಡಿದ್ದುದರಿಂದಲೂ, ಆ ಶಾಸ್ತ್ರಕ್ಕೆ ವಿರುದ್ಧವಾಗಿ ಅನೇಕ ಸಿದ್ಧಾಂತ ಸಮಾಧಾನಗಳಿಂದ ಕೂಡಿದ ವಿಸ್ತಾರವಾದ "ಪ್ರಭಾಕರತನ್ತ್ರ"ವೆಂಬ ಮೀಮಾಂಸಾ ಶಾಸ್ತ್ರವನ್ನು ರಚಿಸಿದನು.

ಆ ಕಾಲದಲ್ಲಿ ಶಂಕರಾಚಾರ್ಯರವರು ಅವತರಿಸಿದರು. ಅವರ ಉತ್ಪತ್ತಿಯು ವಿಚಾರವು ಬಗೆಬಗೆಯಾಗಿ ಗ್ರಂಥಾಂತರಗಳಿಂದ ತಿಳಿದು ಬರುವುದು. ಅವರ ಶಿಷ್ಯರಲ್ಲೊಬ್ಬರಾದ "ಆನಂದಗಿರಿ" ಎಂಬವರಿಂದ ರಚಿತವಾದ ಶಂಕರ ವಿಜಯದ ಎರಡನೆಯ ಪ್ರಕರಣದಲ್ಲಿ ವಿಶಿಷ್ಟೆ ಎಂಬ ಸಾಧ್ವಿಯ ಮುಖದಲ್ಲಿ ಪರಮೇಶ್ವರನು ಪ್ರವೇಶಿಸಲಾಗಿ ಗರ್ಭನಿಂತು ಶಂಕರಾಚಾರ್ಯರುದ್ಭವಿಸಿದರೆಂದು ಬರೆದಿದೆ! ಮಾಧವಾಚಾರ್ಯ ಮತ್ತು ಚಿದ್ವಿಲಾಸಮುನಿ ಇವರುಗಳಿಂದ ವಿರಚಿತಂಗಳಾದ ಶಂಕರ ವಿಜಯಂಗಳಲ್ಲಿ ಶಿವಗುರುವೆಂಬ ಬ್ರಾಹ್ಮಣರ ಪತ್ನಿಯಲ್ಲಿ ಈಶ್ವರಾನು ಗ್ರಹದಿಂದ ಶಂಕರಾಚಾರ್ಯರವತರಿಸಿದರೆಂದೂ ಶಂಕರಾಚಾರ್ಯರ ಮೂರನೆಯ ವರ್ಷದಲ್ಲಿಯೇ ತಂದೆ ಗತಿಸಿಹೋಗಿ ತಾಯಿ ವಿಧವೆ ಯಾದಳೆಂದೂ, ಇವರು ಬಾಲ್ಯದಲ್ಲಿಯೇ ಸಂನ್ಯಾಸ ಗ್ರಹಣಮಾಡಿದ ಕಾರಣ ವಿಧವೆಯೂ ಸಾಯುವಕಾಲಕ್ಕೆ ಇತರ ಮಕ್ಕಳಿಲ್ಲದವಳೂ ಆದವಳಿಗೆ ಅಗ್ನಿಸಂಸ್ಕಾರಮಾಡುವುದಕ್ಕೆ ಬಂದ ಶಂಕರಾಚಾರ್ಯ ರೆನ್ನಿಸಿಕೊಂಡ ಸಂನ್ಯಾಸಿಗೆ ಅಗ್ನಿಯನ್ನೂ ಸ್ಥಳವನ್ನೂ ಕೊಡುವು ದಕ್ಕೆ ಅಲ್ಲಿನ ಬ್ರಾಹ್ಮಣರು ಹಿಂಜರಿದರೆಂದೂ, ಅದಕ್ಕಾಗಿ ಶಂಕರಾ ಚಾರ್ಯರು ಆ ಬ್ರಾಹ್ಮಣರಿಗೆ ಶಾಪಕೊಟ್ಟರೆಂದೂ ಹೇಳಿದೆ.

ಪುರುಷೋತ್ತಮ ಭಾರತಿಗಳಿಂದ ವಿರಚಿತವಾದ ಶಂಕರ ವಿಜ ಯದಲ್ಲಿ ಒಬ್ಬ ಬ್ರಾಹ್ಮಣ ವಿಧವೆಯು ಪರಮೇಶ್ವರನನ್ನು ಭಕ್ತಿ ಯಿಂದಾರಾಧಿಸುತ್ತಿರಲು ಪರಮೇಶ್ವರನು ಆಕೆಯ ಭಕ್ತಿಗೆ ಮೆಚ್ಚಿ ಆಕೆಗೆ ಪ್ರತ್ಯಕ್ಷನಾಗಿ ಒಂದು ಕುಂಬಳದ ಬೀಜವನ್ನು ಕೊಟ್ಟು ಇದನ್ನು ಭೂಮಿಯಲ್ಲಿ ನೆಟ್ಟು ಕಾಪಾಡಿದರೆ ಆಗುವ ಆ ಗಿಡದಲ್ಲಿ

ಬಿಡುವ ಒಂದು ಹಣ್ಣಿನಿಂದ ನಾನು ಉದ್ಭವನಾಗುವೆನೆಂದು ಹೇಳಿದಂತೆ ಶಂಕರಾಚಾರ್ಯರುದಯಿಸಿದರೆಂದೂ, ಕೇರಳೋಕ್ತಿಯೆಂಬ ಗ್ರಂಥದಲ್ಲಿ ಮತ್ತೊಂದು ವಿಧವಾಗಿಯೂ ಹೇಳಿರುವುದು. ಶ್ರೀ ರಾಮಕೃಷ್ಣಾದ್ಯವತಾರಂಗಳ ವಿಷಯದಲ್ಲಿ ಕೂಡ ಒಂದೊಂದು ಗ್ರಂಥದಲ್ಲಿ ಒಂದೊಂದು ರೀತಿ ಇರುವುದು ಸಾಮಾನ್ಯವಾಗಿ ಕಂಡು ಬರುವುದು. ಹಾಗೆಯೇ ಸುಪ್ರಸಿದ್ಧರಾದೀ ಆಚಾರ್ಯರವರ ಜನನದ ನಿಜಸ್ಥಿತಿಯನ್ನು ತಿಳಿಯಲವಕಾಶವಿಲ್ಲದೆ ಆ ಕಾಲದ ಗ್ರಂಥಕಾರರು ಬಗೆಬಗೆಯಾಗಿ ಬರೆದಿರಬಹುದು. ಈ ಮಣಿಮಂಜರೀ ಗ್ರಂಥಕಾರರು ಇವುಗಳಲ್ಲಾವುದರ ಆಧಾರದಿಂದಲೋ ಆಗಿನ ಕೆಲವು ಜನಗಳೆಂದುಕೊಳ್ಳುತ್ತಿದ್ದ ವಾರ್ತೆಗಳಂತೆಯೋ ಶಂಕರಾಚಾರ್ಯರವರ ಅವತಾರಕ್ರಮವನ್ನು ನಿರೂಪಿಸಿರಬಹುದು. ಈ ವಿಚಾರವನ್ನಿಲ್ಲಿಗೆ ವಿರಮಿಸುವೆನು. ಏಕೆಂದರೆ ದೇವಮೂಲ–ಋಷಿಮೂಲ–ನದೀಮೂಲ–ಮುಂತಾದವುಗಳನ್ನು ನಿಜವಾಗಿ ತಿಳಿಯುವುದು ಅತ್ಯಂತ ಗಹನವಾದುದೆಂದು ಆರ್ಯರೊರೆವರು. ಅತ್ಯಂತ ಗಹನವಾದ ಪಥವು ಅನುಸರಣೀಯವಲ್ಲವಷ್ಟೆ? "ಯದಾಯದಾಹಿಧರ್ಮಸ್ಯಗ್ಲಾನಿರ್ಭವತಿ ಭಾರತ ॥ ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂಸೃಜಾಮ್ಯಹಂ ॥"(ಭ. ಗೀ. ೪–೭) ಎಂದರೆ ಅರ್ಜುನ! ಯಾವ ಯಾವ ಕಾಲದಲ್ಲಿ ಧರ್ಮಕ್ಕೆ ಹಾನಿಯೊದಗಿ ಅಧರ್ಮವು ಹಬ್ಬುವುದೋ ಆಗ ನಾನು ಜನ್ಮವನ್ನು ತೆಗೆದುಕೊಳ್ಳುವೆನು. ಎಂಬ ಭಗವದ್ವಾಕ್ಯವನ್ನೂ, "ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವವಾ ॥ ತತ್ತದೇವಾವಗಚ್ಛತ್ವಂ ಮಮತೇಜೋಂಶಸಂಭವಂ ॥" (ಭ. ಗೀ. ೧೦–೪೧) ಎಂದರೆ ಆವಾವುದು ಕಾಂತಿ, ಬಲ, ಮೊದಲಾದ ಉತ್ತಮ ಗುಣಗಳಿಂದ ಇತರಕ್ಕಿಂತಲೂ ಹೆಚ್ಚಿನದೆನಿಸಿಕೊಂಡಿರುವುದೋ ಅದೆಲ್ಲವೂ ನನ್ನ ಪ್ರಭಾವದ ಅಂಶದಿಂದಲೇ ಹುಟ್ಟಿದುದು. ಎಂಬ ಭಗವದ್ವಾಕ್ಯವನ್ನೂ ನಂಬುವವರು ಶ್ರೇಷ್ಠರಾದ ಮತ್ತು ನಾಶವಾಗುತ್ತಿದ್ದ ವೈದಿಕ ಧರ್ಮವನ್ನುದ್ಧರಿಸುವಷ್ಟು ತೇಜೋವಿಶೇಷದಿಂದ ಬೆಳಗಿದ

ವರಾದ ಸತ್ಕೀರ್ತಿಮಯವಿಗ್ರಹರಾಗಿ ಲೋಕವಂದ್ಯರಾಗಿರುವ ಶ್ರೀ ಶಂಕರಾಚಾರ್ಯರ ಅವತಾರವು ದೈವಿಕವಾದುದು ಮತ್ತು ಶ್ಲಾಘನೀಯಪ್ರಕಾರದಿಂದಾದುದು ಎಂದು ಒಪ್ಪಲೇ ಬೇಕು !

ದೈವದತ್ತವಾದಾ ಮಗುವನ್ನು ಆ ಬ್ರಾಹ್ಮಣಿತಿಯು ಕಂಡು ಸಂತೋಷಪಟ್ಟು, ತನ್ನ ಉಪಾಸಕ ದೈವವಾದ ಶ್ರೀ ಶಂಕರ (ಶ್ರೀ=ಸಂಪತ್ತು, ಶಂ=ಸುಖ, ಇವುಗಳನ್ನು ಕರ=ಉಂಟುಮಾಡುವವನು) ಎಂಬ ನಾಮವನ್ನೇ ಆ ಕೂಸಿಗೂ ಇಟ್ಟು ಕರೆಯುತ್ತಿದ್ದಳು. ತಮ್ಮ ಪ್ರೀತಿಗೆ ಪಾತ್ರರಾದ ಮಕ್ಕಳಿಗೆ ತಮ್ಮ ಉಪಾಸ್ಯ ದೇವರ ಮತ್ತು ತಮ್ಮ ಕೃತಜ್ಞತೆಗೆ ಪಾತ್ರರಾದ ಗುರುಹಿರಿಯರ ಹೆಸರುಗಳನ್ನು ಇಡುವುದರಿಂದ ತಮ್ಮ ಅಮೂಲ್ಯವಾದ ಪ್ರೀತಿಪ್ರದರ್ಶನಮಾಡಿದಂತಾಗುವುದು ಮಾತ್ರವಲ್ಲದೆ ಆ ಮಕ್ಕಳಲ್ಲಿರುವ ತಮ್ಮ ವಾತ್ಸಲ್ಯದ ದೆಸೆಯಿಂದ ತಮ್ಮ ಆಪತ್ಕಾಲದಲ್ಲಿ ಆವ ಕಾರಣದಿಂದಲಾದರೂ ಆ ಮಕ್ಕಳನ್ನು ಕರೆಯುವುದರಿಂದ ಆ ಹೆಸರಿನ ಸಂಬಂಧವಾದ ದೇವ ಗುರು ಹಿರಿಯರ ಸ್ಮರಣೆ ಮಾಡಿದಂತಾಗಿ ತಮಗೆ ಐಹಿಕಾಮುಷ್ಮಿಕ ಸುಖ ಸದ್ಗತಿಗಳು ಪ್ರಾಪ್ತವಾಗುವುವೆಂಬ ನಂಬುಗೆಯು ನಮ್ಮ ಆರ್ಯ ಜನಾಂಗಕ್ಕೆ ಅನಾದಿ ಸಿದ್ಧವಾಗಿದ್ದುದೆಂಬುದಕ್ಕೆ ಇಂತಹ ಅನೇಕ ದೃಷ್ಟಾಂತಗಳುಂಟು ! ಆಕೆಯು ವಿಧವೆಯಾಗಿ ಸಹಾಯ ರಹಿತಳಾಗಿದ್ದುದರಿಂದ ಸಾಂಸಾರಿಕ ತಾಪತ್ರಯಂಗಳುಳ್ಳವಳಾಗಿ ಅನೇಕವೇಳೆ ಆಹಾರಕ್ಕೆ ಅಭಾವವಾಗಿ ತಾನು ಅಡವಿಯ ಹಣ್ಣು ಗಡ್ಡೆ ಗೆಣಸುಗಳ ಸೇವನೆಯಿಂದ ಹೇಗೆ ಕಾಲಹರಣಮಾಡುತ್ತಿದ್ದಳೋ ಹಾಗೆ ಆ ಮಗುವಿಗೂ ತತ್ಕಾಲಕ್ಕೆ ದೊರೆತ ಆಹಾರಗಳನ್ನು ಕೊಡುತ್ತಾ ಕಾಪಾಡುತ್ತಿದ್ದಳು. ಆ ಬಾಲಕನಿಗೆ ಐದು ವರ್ಷವಾಯಿತು ; ಒಂದುದಿನ ಆಕೆಯು ಮಗುವನ್ನು ಕುರಿತು "ಮಗು ! ತೋಟಕ್ಕೆ ಹೋಗಿ ನಾಲ್ಕೈದು ಬದನೆಯಕಾಯಿಗಳನ್ನು ಕಿತ್ತುಕೊಂಡುಬಾ !" ಎನ್ನಲು ಆ ಮಗನು ತೋಟಕ್ಕೆ ಹೋಗಿ ಬದನೆಯ ಗಿಡಗಳಲ್ಲಿ ಕಾಯಿಗಳನ್ನು ಕೀಳುತ್ತಾ ಒಂದು ! ಒಂದು ! ಎಂದು ಎಣಿಸುತ್ತಿದ್ದನೇ ಹೊರತು ಎಲ್ಲವನ್ನೂ ಕೂಡಿಸಿ ಎಣಿಸಲಿಲ್ಲ ! ಆದರಿಂದ ಎರಡೆಂಬ

ಸಂಖ್ಯೆಯು ಆತನಿಗೆ ತಿಳಿಯಲಿಲ್ಲ! ಆ ಕಾಯಿಗಳನ್ನು ತಂದು ತನ್ನ ತಾಯಿಗೆ ಒಪ್ಪಿಸಿ, "ಅಮ್ಮ! ಬದನೆಯಕಾಯಿ ನನಗೆ ಒಂದೊಂದಾಗಿ ಕಂಡಿತೇ ಹೊರತು ನಾಲ್ಕೈದಾಗಿ ಕಾಣಲೇ ಇಲ್ಲ! ಒಂದೊಂದನ್ನೇ ತಂದಿರುವೆನು! ನೀನು ಹೇಳಿದಂತೆ ನಾಲ್ಕೈದನ್ನು ನಾನು ಹೇಗೆ ತರಲಿ?" ಎನ್ನುತ್ತಿರುವಾಗ ತಾಯಿಯು "ಮಕ್ಕಳ ಮುದ್ದುಮಾತು ಗಳು!" ಎನ್ನುತ್ತಾ ನಗುತ್ತಿದ್ದಳು. ಈ ಮಾತುಗಳನ್ನು ಕೇಳುತ್ತಿದ್ದ ದಾರಿಗರು ಈತನು ಅದ್ಭುತ ಪ್ರಜ್ಞೆಯುಳ್ಳವನು! ಆವ ಒಂದು ವಸ್ತು ವಿನಲ್ಲಿಯೂ ಎರಡನ್ನು ಆರೂ ಕಾಣಲಾರರು! ಎಂದುಕೊಂಡು ನಗು ತ್ತಾ ಹೋಗುತ್ತಿದ್ದರು.

ಆ ಬಾಲಕನಿಗೆ ಬಾಲ್ಯಾವಸ್ಥೆ ಕಳೆಯುತ್ತಿರುವಾಗ ಆರೋ ಒಬ್ಬ ಬ್ರಾಹ್ಮಣರು ಆತನಿಗೆ ಉಪನಯನವನ್ನುಮಾಡಿ ಚೆನ್ನಾಗಿ ಮಾತಾಡುವುದರಲ್ಲಿ ನಿಪುಣನಾದ ಆ ವಟುವನ್ನು ಸುಭಿಕ್ಷವಾಗಿದ್ದ ಸೌರಾಷ್ಟ್ರ ದೇಶಕ್ಕೆ ವಿದ್ಯಾಭ್ಯಾಸಕ್ಕಾಗಿ ಸೇರಿಸಿದರು. ಆ ವಟುವು ಪೂರ್ವಜನ್ಮದಲ್ಲಿ ತಾನು ಮಾಡಿದ ತಪಸ್ಸಿನಿಂದ ಸಂತುಷ್ಟರಾದ ರುದ್ರ ದೇವರ ವರಪ್ರಸಾದದಿಂದ ಅತಿ ಶೀಘ್ರವಾಗಿ ವೇದವೇದಾಂಗಗಳನ್ನು ಅಭ್ಯಾಸಮಾಡಿ ಸಕಲ ವಿದ್ಯೆಗಳನ್ನೂ ಸ್ವಾಧೀನಪಡಿಸಿಕೊಂಡನು. ಆತನೊಂದುದಿನ ಎಲ್ಲಿಗೋ ಹೋಗುತ್ತಿರುವಾಗ ಒಂದು ನದಿಯನ್ನು ದಾಟಬೇಕಾಗಿ ಅದರಲ್ಲಿಳಿದು ಹೋಗುತ್ತಿರುವಾಗ ಆ ನದಿಯ ಪ್ರವಾ ಹದ ದೆಸೆಯಿಂದ ಆತನ ಯಜ್ಞೋಪವೀತವು ನೀರಿನಲ್ಲಿ ಕೊಚ್ಚಿ ಕೊಂಡು ಹೋಗುತ್ತಿರಲು ಆದನ್ನಾತನು ಕಂಡು "ಎಲೆ ದಾರವೆ! ನೀನು ನನ್ನನ್ನು ಬಿಟ್ಟುದಕ್ಕೆ ಮೊದಲೇ ನಿನ್ನನ್ನು ನಾನೇ ಬಿಡಬೇಕೆಂ ದಿದ್ದೆನು. ಇತರ ಆಶ್ರಮಗಳಿಗಿಂತಲೂ ಸಂನ್ಯಾಸಾಶ್ರಮವು ಸುಖವು; ಲೋಕಸೇವೆಗೆ ಈ ಆಶ್ರಮದಿಂದ ಆವ ತೊಂದರೆಯೂ ಉಂಟಾಗದು; ನಾನು ಲೋಕಸೇವೆಗಾಗಿ ಹುಟ್ಟಿದೆನು; ಇನ್ನು ಮುಂದೆ ನನಗೆ ನಿನ್ನಿಂ ದೇನಾಗಬೇಕು?" ಎನ್ನುತ್ತಾ ಹೊರಟುಹೋದನು.

ಆತನು ದುರ್ವಾಸ ಮಹರ್ಷಿಗಳ ವಂಶ (ಶಿಷ್ಯ) ಪರಂಪರೆಯಲ್ಲಿ ಮುಖ್ಯರಾದ ಪರತೀರ್ಥರೆಂಬ ಚಾತುರ್ವರ್ಣಾಸ್ಯಾದಿ ವ್ರತಾನುಷ್ಠಾನ ಪರರಾದ ಮಹನೀಯರಾದ ಯತಿಗಳನ್ನು ಸಂದರ್ಶಿಸಿದನು. ಜ್ಞಾನಿಗಳಾದಾ ಯತೀಂದ್ರರು ಈತನನ್ನು ಕಂಡೂ ಕಾಣದವರಂತೆ ಉದಾಸೀನವಾಡಿದರು. ಮತ್ತು ಉಪಚಾರೋಕ್ತಿಯನ್ನೂ ಆಡದಿದ್ದರು. ಆ ವಟು ಅಲ್ಲಿಂದ ಹೊರಟು ಗೋದಾವರಿಯನ್ನು ದಾಟಿ ಅಣು ಬದರಿಕಾಶ್ರಮವನ್ನು ಸೇರಿ ಅಲ್ಲಿ ಪರತೀರ್ಥರ ಶಿಷ್ಯರಾದ ಸತ್ಯಪ್ರಜ್ಞತೀರ್ಥರವರನ್ನು ಕಂಡು, "ಸ್ವಾಮಿ! ನಾನು ತಮ್ಮ ಗುರುಗಳಾದ ಪರತೀರ್ಥರವರ ಸಂದರ್ಶನವಾಡಿಕೊಂಡು ತಮ್ಮಲ್ಲಿಗೆ ಬಂದೆನು!" ಎನ್ನಲು ಆ ಪ್ರಜ್ಞಾನಿಧಿಗಳಾದಾಸತ್ಯಪ್ರಜ್ಞ ತೀರ್ಥರು ಕೂಡಾ ಈತನನ್ನು ಗೌರವದಿಂದ ಕಾಣಲಿಲ್ಲ.

ಆಮೇಲೆ ಆತನು ತನ್ನ ಪೂರ್ವಜನ್ಮಾರ್ಜಿತ ಪುಣ್ಯದಿಂದ, ಕೆಲವುಕಾಲ ನಿರ್ಗುಣನೆಂದೋ, ಆಕಾಶ ಸ್ವರೂಪವೆಂದೋ, ಏಕಾತ್ಮ ಭಾವದಿಂದಲೋ ಪರತತ್ವವನ್ನು ಉಪಾಸನೆ ಮಾಡುತ್ತಿದ್ದನು. ಏಕಾಂಗಿಯಾಗಿಯೂ, ಸದ್ಗುರೂಪದೇಶವಿಲ್ಲದುದರಿಂದ ಚಂಚಲಾತ್ಮನಾಗಿಯೂ, ಯತಿವೇಷಧಾರಿಯಾಗಿಯೂ, ತನಗೆ ಸಹಾಯವಾಡುವ ಮಿತ್ರನೊಬ್ಬನನ್ನು ಹುಡುಕಿಕೊಂಡು ದೇಶಾಟನ ಮಾಡುತ್ತಿದ್ದನು. ಒಂದುದಿನ ರಾತ್ರಿ ಮಲಗಿರುವಾಗ ಸ್ವಪ್ನದಲ್ಲಿ ಒಬ್ಬ ಮಿತ್ರನು ಬಂದು "ಎಲೈ ಮಿತ್ರನೆ! ನೀನು ನಮ್ಮ ಮತಾಭಿವೃದ್ಧಿಯನ್ನು ಮಾಡಬೇಕು! ನಿನಗಿಂತಲೂ ಪೂರ್ವದಲ್ಲಿಯೇ ಬೌದ್ಧರು ಭಟ್ಟಕುಮಾರನ ಭಯದಿಂದ ಸತ್ವಹೀನರಾಗಿ ದ್ವೀಪಾಂತರಗಳಿಗೆ ಹೊರಟುಹೋದರು. ಭಟ್ಟ ಕುಮಾರನ ತಮ್ಮನಾದ ಭಟ್ಟ ನಾರಾಯಣನೂ ಅಲ್ಲಿಯ ಬೌದ್ಧರ ವಿನಾಶನ ಕಾರ್ಯಕ್ಕಾಗಿ ಅಲ್ಲಿಗೂ ಹೋಗಿ ಅಲ್ಲಿಯ ಬೌದ್ಧರನ್ನೂ ಹೊರಡಿಸಿ ಅನೇಕರನ್ನು ವೈದಿಕ ಮತಪರನ್ನಾಗಿಸಿ ಹಿಂದಿರುಗಿ ತನ್ನ ಅಣ್ಣನಬಳಿಗೆ ಬರಲು ಬಹುಕಾಲಪರ್ಯಂತ ಮ್ಲೇಚ್ಛರ ದೇಶದಲ್ಲಿ ಆವನು ವಾಸವಾಡಿದುದರಿಂದ ಅವನು ಜಾತಿ

ಭ್ರಷ್ಟನಾಗಿರಬಹುದೆಂದು ಅನುಮಾನಪಟ್ಟು ಅವನನ್ನು ಅಣ್ಣನಾದ ಕುಮಾರಿಲಭಟ್ಟನು ತನ್ನ ಸಹಪಙ್ಕ್ತಿಗೆ ಸೇರಿಸಲಿಲ್ಲ! ಆದರಿಂದ ಆ ಭಟ್ಟನಾರಾಯಣನು ಅಣ್ಣನಮೇಲೆ ಕೋಪಗೊಂಡು ಮತ್ತೆ ಬೌದ್ಧ ಸಿದ್ಧಾಂತವನ್ನು ಅನುಸರಿಸಬೇಕೆಂದು ಪ್ರಯತ್ನ ಮಾಡುವ ವೃತ್ತಾಂತವನ್ನು ಕುಮಾರಿಲಭಟ್ಟನು ಕೇಳಿ, ತನ್ನ ತಮ್ಮನು ಬೌದ್ಧ ಮತ ಪ್ರಸಾರಕ್ಕೆ ಹೊರಟರೆ ಮತ್ತೆ ವೈದಿಕಮತವು ನಾಮಾವಶೇಷ ವಾಗುವುದೆಂದು ಭಾವಿಸಿ ತಾನು ಒಂದೆಡೆ ಪ್ರಚ್ಛನ್ನನಾಗಿದ್ದುಕೊಂಡೇ "ಕುಮಾರಿಲಭಟ್ಟನು ಮೃತನಾದನು!" ಎಂಬದಾಗಿ ಸುದ್ದಿಯನ್ನು ಹುಟ್ಟಿಸಿ ಅದನ್ನು ತನ್ನ ಶಿಷ್ಯರ ಮೂಲಕ ಲೋಕದಲ್ಲಿ ಹರಡಿಸಿದನು. ಈ ವೃತ್ತಾಂತವು ಭಟ್ಟನಾರಾಯಣನಿಗೆ ತಿಳಿದು ತನ್ನ ದೆಸೆಯಿಂದಲೇ ತನ್ನ ಅಣ್ಣನು ಅಗ್ನಿಗಾಹುತಿಯಾದನೆಂದು ಪಶ್ಚಾತ್ತಾಪವನ್ನು ಹೊಂದಿ, ತದ್ದೋಷ ಪರಿಹಾರಾರ್ಥವಾಗಿ ತಾನೂ ಅಗ್ನಿಪ್ರವೇಶ ಮಾಡಿದನು.

ಆಗ ಗೌಡಪಾದರೆಂಬ ಆಸ್ತಿಕ ಮತೀಯರೊಬ್ಬರು ವೃದ್ಧರಾಗಿ ಸಂನ್ಯಾಸಾಶ್ರಮವನ್ನು ತೆಗೆದುಕೊಳ್ಳಲಪೇಕ್ಷೆಯುಳ್ಳವರಾಗಿ ಆಸ್ತಿಕ ಮತವನ್ನು ಅಭಿವೃದ್ಧಿಯೊಂದಿಸುತ್ತಿರಲು 'ಬಕ್ಕಸ್ವಾಮಿ' ಎಂಬವರು ಬಂದು ಆ ಗೌಡಪಾದರನ್ನು ಕುರಿತು "ಬ್ರಹ್ಮಮಾನಸ ಪುತ್ರರಾದ ಸನತ್ಕುಮಾರರು ನನ್ನನ್ನು ಲೋಕರಿಗೆ ಮೋಕ್ಷಸಾಧನವಾದ ಉಪಾಸನಾದಿಗಳ ಮಾರ್ಗಗಳನ್ನು ಬೋಧಿಸಬೇಕೆಂದು ಆಜ್ಞೆಮಾಡಿ ಕಳುಹಿಸಿರುವರು! ಜೀವಬ್ರಹ್ಮೈಕ್ಯ ಬೋಧಕವಾದ 'ಸೋಹಂ' ಎಂಬುದಾಗಿ ಭಗವದುಪಾಸನೆ ಮಾಡುವುದು ಅದರ ಕ್ರಮವು! ದ್ವೈತವೆಂದರೆ ಜೀವ ಬ್ರಹ್ಮರಿಗೆ ಭೇದವುಂಟೆಂಬ ಅಭಿಪ್ರಾಯವು ನಿರರ್ಥಕವಾದುದು. ಈ ಪ್ರತ್ಯಕ್ಷವಾಗಿ ನಮಗೆ ಕಾಣಿಸುವ ಪ್ರಪಂಚವೆಲ್ಲವೂ ಆಕಾಶದಲ್ಲಿ ಸೇರಿಕೊಂಡು ಇರುವುದು. ಪ್ರತಿಯೊಂದರಲ್ಲಿಯೂ ಆಕಾಶವು ಆರೋಪಿತವಾಗುವುದು! ಅದ್ವೈತ=ಎಂದರೆ ಬೇರೆಯಾದುದಿಲ್ಲ, ಎಂಬ ತಿಳಿವು ಅದು ಉಂಟಾದಕೂಡಲೇ ಪ್ರತ್ಯಕ್ಷ

ಪ್ರಪಂಚವು ತನ್ನ ಪಾಲಿಗೆ ಇಲ್ಲದಂತಾಗುವುದು. ಸರ್ವವೂ ತಾನೇ ಎಂಬ ಭಾವನೆಯು ಪೂರ್ಣವಾಗಿ ಉಂಟಾದಕೂಡಲೇ ತಾನೆಂಬುದೂ ಕಾದ ಕಬ್ಬಿಣದಮೇಲಿನ ನೀರಿನಂತೆ ಆರಿದುಹೋಗುವುದು ! ಆಮೇಲೆ ಜೀವನು ಬ್ರಹ್ಮನೊಡನೈಕ್ಯವಾಗುವನು. ಆ ಬ್ರಹ್ಮನೇ ತನ್ನ ಲೀಲೆಗಾಗಿ ಈ ಪ್ರಪಂಚದಲ್ಲಿ ನೋಡುವನು, ನಡೆಯುವನು, ಓಡುವನು, ಆಡುವನು, ಎಂದು ಭಾವಿಸತಕ್ಕ ಜೀವನು ಬ್ರಹ್ಮನಂತೆ ನಿರ್ಗುಣ, ನಿರ್ಮಮ, ನಿರಹಂಕಾರಿಯಾಗಬೇಕು ! ಆಗ ಅಂತಹ ಜೀವಿಗೆ ಸರ್ವವೂ ಆಕಾಶದಂತೆ ನಿರ್ಗುಣವಾಗಿ ತೋರುವುದು ! ಅಂತಹ ತತ್ವವು ತಾನೇ ! ಬೇರೆಯಿಲ್ಲ ! ಈ ಕಾರಣಗಳಿಂದ ನೀವು ಆ ಪರಮಾತ್ಮನೇ ನಾನು ಎಂದರೆ "ಸೋಹಂ" (ಸಃ + ಅಹಂ) ಎಂದು ಉಪಾಸನೆ ಮಾಡಲು ತಕ್ಕವರಾಗಿರುವಿರಿ!" ಎಂಬ ರೀತಿಯಾಗಿ ಉಪದೇಶಿಸಿದರು. ಆ ತತ್ವಾರ್ಥವನ್ನು ಗೌಡಪಾದರು ಗೌರವಿಸಿ ಅವರಿಂದ ಸಂನ್ಯಾಸಾಶ್ರಮ ಸ್ವೀಕಾರಮಾಡಿ ತಮ್ಮ ಜೀವಿತ ಕಾಲವೂ ಅದನ್ನೇ ವಿಚಾರಮಾಡುತ್ತಾ ಮನನಮಾಡುತ್ತಾ ಇದ್ದರು.

ಈ ಗೌಡಪಾದರ ಸಂದರ್ಶನಾರ್ಥಿಗಳಾಗಿ ಗೋವಿಂದಭಟ್ಟರೆಂಬುವರು ಬಂದು ಇವರಿಂದ ಸಂನ್ಯಾಸಾಶ್ರಮ ಸ್ವೀಕಾರಮಾಡಿ ಆ ಸಂಪ್ರದಾಯದ ತತ್ವವೆಂದರೆ ಸರ್ವಾಭಾವಾದಿ ರೂಪವಾದ ತತ್ವವನ್ನು ಕೇಳಿ ಅದನ್ನೇ ನಂಬಿ ಅದರಂತೆ ಉಪಾಸಕರೂ ಆಗಿರುವರು. ಸಂನ್ಯಾಸಾಶ್ರಮವು ಆರಾದರೊಬ್ಬ ಸನ್ಯಾಸಿಗಳ ಸಮ್ಮುಖವಾಗಿ ಸ್ವೀಕರಿಸಬೇಕೆಂಬ ಆರ್ಯ ಪದ್ಧತಿಯಿರುವುದರಿಂದ ಅದರಂತೆ, ಹೇ ಶಂಕರಸ್ವಾಮಿ ! ನೀನು ಆ ಗೋವಿಂದಸ್ವಾಮಿಯವರಿಂದ ದಂಡಕಮಂಡಲಾದಿ ಯತ್ಯುಪಕರಣಂಗಳನ್ನು ಪಡೆದು ಯತ್ಯಾಶ್ರಮವನ್ನು ಸ್ವೀಕರಿಸಿ ಬೌದ್ಧಮತ ಖಂಡನಾತ್ಮಕವಾದ ನಮ್ಮ ಮತವನ್ನು ಪ್ರಚಾರಮಾಡು ! ನಿನ್ನ ಮುಖಾಂತರವಾಗಿ ನಮ್ಮ ಮತವು ಅತಿ ಪವಿತ್ರವೆನಿಸಿ ಲೋಕಮಾನ್ಯವಾಗುವುದು !" ಎಂಬೀಪರಿಯಿಂದ ಹೇಳಿದಂತಾಯಿತು.

ಆ ಸ್ವಪ್ನೋಕ್ತಿಯಂತೆ ಆತನು ಗೋವಿಂದಸ್ವಾಮಿಯವರನ್ನು ಕಂಡು "ಸ್ವಾಮಿ! ಶಂಕರನಾಮಕನಾದ ನಾನು ತಮ್ಮ ಶಿಷ್ಯನಾಗಲೆಳಸಿಬಂದೆನು. ತಾವೇ ನನಗೆ ಗುರುಗಳು!" ಎಂದು ನಮಸ್ಕರಿಸಲು ಗೋವಿಂದಸ್ವಾಮಿಗಳು ಪ್ರೀತಿಯಿಂದಾತನನ್ನು ತಮ್ಮ ಶಿಷ್ಯನನ್ನಾಗಿಸಿಕೊಂಡರು. ಆಮೇಲೆ "ಸ್ವಾಮಿ! ನಾವು ಬೌದ್ಧ ಸಂಬಂಧವಾದ ಶೂನ್ಯವಾದವನ್ನು ನಿರಾಕರಿಸಿ, ವೇದಾಂತಿಗಳೆನ್ನಿಸಿಕೊಂಡು ನಮ್ಮ ಮತವನ್ನು ಪ್ರಸಿದ್ಧ ಮಾಡಬೇಕು! ಅದನ್ನು ಎಂದರೆ ಬೌದ್ಧ ಮತ ತತ್ವವನ್ನು ಖಂಡಿಸದಿದ್ದರೆ ಈ ಕಾಲದ ಜನರು ನಮ್ಮ ಮತವನ್ನು ಗೌರವಿಸರು! ಈ ಕಾರ್ಯ ಸಾಧನೆಗಾಗಿ ತ್ರಿದಂಡಿ ಸನ್ಯಾಸಿಗಳಾದ ಬ್ರಹ್ಮದತ್ತರೆಂಬ ಯತಿಗಳ ಬಳಿಗೆ ಹೋಗಿ ಬ್ರಹ್ಮಸೂತ್ರಾರ್ಥವನ್ನು ಶ್ರವಣ ಮಾಡುವೆನು!" ಎಂದು ಹೇಳಿ ಆ ನೂತನ ಯತಿಗಳು (ಇನ್ನುಮೇಲೆ ಇವರನ್ನು ಶಂಕರಾಚಾರ್ಯರೆನ್ನುವೆವು) ಪ್ರಭಾಕರ–ಕುಮಾರ–ಭಾಸ್ಕರ–ಎಂಬವರೊಡನೆ ಬ್ರಹ್ಮದತ್ತರ ಬಳಿಗೆ ಹೋಗಿ ಸೂತ್ರಾರ್ಥಶ್ರವಣ ಮಾಡಿದರು. ಈ ಶಿಷ್ಯರೆಲ್ಲರೂ ಒಟ್ಟಿಗೆ ಒಬ್ಬರೇ ಗುರುಗಳಲ್ಲಿ ವಿದ್ಯಾವಂತರಾದರೂ ಅವರವರ ಪೂರ್ವಜನ್ಮ ಸಂಸ್ಕಾರವನ್ನು ಅನುಸರಿಸಿದ ಬುದ್ಧಿಬಲದಿಂದ, ಬೇರೆ ಬೇರೆಯಾದ ಅಭಿಪ್ರಾಯವುಳ್ಳವರಾದರು. ಭಟ್ಟ ಸಂಬಂಧವಾದ ಮೀಮಾಂಸಾ ಶಾಸ್ತ್ರವನ್ನು ಆತನು ತನ್ನ ಶಿಷ್ಯರಿಗೆ ಪ್ರಚುರಪಡಿಸುವಂತೆ ಆಜ್ಞಾಪಿಸಿ ತಾನು ದೈವಾಧೀನನಾದನು. ಭಾರವಿಯ ತಮ್ಮನಾದ ಪ್ರಭಾಕರನು ತನ್ನ ಮೀಮಾಂಸಾ ಶಾಸ್ತ್ರವನ್ನು ತಾನೇ ಪ್ರಚಾರ ಮಾಡಿದನು. ಶಂಕರಾಚಾರ್ಯರು ನಿರ್ಗುಣತ್ವವನ್ನು ಬ್ರಹ್ಮವೆಂದೂ ಸಂವೃತಿ (ಸಂಸ್ಕೃತಿ) ಎಂದರೆ ಜಗತ್ಕಾರಣತ್ವವೆಂಬುದನ್ನು ಅವಿದ್ಯೆಯೆಂದೂ, ಪ್ರಸಿದ್ಧಮಾಡಿದರು. ಈ ಸಿದ್ಧಾಂತಕ್ಕೆ ಅನುಸಾರವಾಗಿ ಬ್ರಹ್ಮನಿಗೆ ನಿರ್ಗುಣತ್ವವನ್ನು ಆರೋಪಿಸಿ, ಬ್ರಹ್ಮಸೂತ್ರಂಗಳಿಗೆ ಪರಸ್ಪರ ವಿರುದ್ಧಂಗಳಾಗಿದ್ದ ಪ್ರಾಚೀನ ಭಾಷ್ಯಂಗಳನ್ನು ಖಂಡಿಸಿ ಬೇರೆ ಭಾಷ್ಯವನ್ನು ವಿರಚಿಸಿ ಪ್ರಕಾಶಪಡಿಸಿದರು. ಇದಕ್ಕೆಯೇ ಅದ್ವೈತ ಭಾಷ್ಯವೆಂದು ಹೆಸರು! ಇದು ಇಂದಿಗೂ ಲೋಕಮಾನ್ಯವಾಗಿರು

ವುದು ! ಈ ಮಹನೀಯರಾದಾಚಾರ್ಯರವರು ನಿರಂತರವೂ ನಿಶ್ಚಲ ಮನೋಭಾವದಿಂದ ಭಗವದುಪಾಸನೆಯನ್ನು ಮಾಡುತ್ತಿದ್ದುದೇ, ಇವರನ್ನು ಲೋಕದವರು ಗೌರವಿಸುತ್ತಿದ್ದುದಕ್ಕೂ, ಇವರ ಮಾತನ್ನು ನಂಬುವುದಕ್ಕೂ, ಬಹುಜನಗಳು ಇವರ ಆಜ್ಞೆಯನ್ನುಲ್ಲಂಘಿಸದಿರಲಿಕ್ಕೂ, ಕಾರಣವು !

ಇಂತು ಕರ್ಣಾಟಕ ವಚನ ಮಣಿಮಂಜರಿಯಲ್ಲಿ

ಆರನೆಯ ಸರ್ಗವು ಮುಗಿದುದು.

ಶ್ರೀ ರಾಮಾರ್ಪಣಮಸ್ತು

ಏಳನೆಯ ಸರ್ಗ

ಬಳಿಕ ಆ ಶಂಕರಾಚಾರ್ಯರು ವಿಶ್ವರೂಪರೆಂಬ ಒಬ್ಬ ಬ್ರಾಹ್ಮಣರ ಮನೆಗೆ ಹೋಗಿ ಆ ದಂಪತಿಗಳಿಂದ ಆದೃತರಾಗಿ ಅವರು ಮಹಾ ಪಂಡಿತರಾಗಿದ್ದುದರಿಂದ ಅವರನ್ನು ವಾದದಲ್ಲಿ ಗೆಲ್ಲಲಿಚ್ಛಿಸಿ, ಅವರ ಒಪ್ಪಿಗೆಯನ್ನು ಪಡೆದು ತಮ್ಮಿಬ್ಬರ ವಾದವಿವಾದಂಗಳನ್ನು ವಿಮರ್ಶಿಸಿ ಜಯಾಪಜಯಂಗಳನ್ನು ಗೊತ್ತುಮಾಡುವುದಕ್ಕೆ ಒಬ್ಬ ನ್ಯಾಯಾಧಿಪತಿಗಳಿರಬೇಕಾದುದರಿಂದ ತನ್ನಿದಿರಾಳಿಯಾದಾ ಬ್ರಾಹ್ಮಣರ ಸತಿಯನ್ನೇ ಸಭಾಧ್ಯಕ್ಷತೆಯನ್ನು ವಹಿಸುವಂತೆಯೂ ತಮ್ಮಿಬ್ಬರಲ್ಲಿ ಪರಾಜಿತರಾದವರು ತಮ್ಮ ತಾತ್ಕಾಲಿಕವಾಗಿದ್ದ ಆಶ್ರಮವನ್ನು ತ್ಯಜಿಸಿ ಬೇರೆಯಾಶ್ರಮವನ್ನು ವಹಿಸಲೇಬೇಕೆಂದೂ ನಿರ್ಧರಮಾಡಿಕೊಂಡರು. ಹೀಗೆ ನಿಶ್ಚಿತರಾಗಿ ವಾದಮಾಡಲಿಕ್ಕೆ ಕುಳಿತುಕೊಂಡು ಕೊನೆಗೆ ವಿಶ್ವರೂಪನೇ ಸೋತನೆಂದು ಸಿದ್ಧಾಂತವಾದಬಳಿಕ ಆತನು ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, ಶಂಕರಾಚಾರ್ಯರ ಶಿಷ್ಯನಾದನು. ನೂತನ ಶಿಷ್ಯನೊಂದಿಗೆ ಶಂಕರಾಚಾರ್ಯರು ದೇಶಸಂಚಾರಕ್ಕೆ ಹೊರಟು, ದಾರಿಯಲ್ಲಿ ಭಟ್ಟಕುಮಾರನಿಂದ ಪರಾಜಿತನಾಗಿ, ಮತ್ತೆ ಅನೇಕ ಶಾಸ್ತ್ರಂಗಳನ್ನು ಅಭ್ಯಾಸಮಾಡಿ ತನ್ನ ಪಾಂಡಿತ್ಯದಿಂದ ಸಂತುಷ್ಟರಾದ ಪೃಥಿವೀಪತಿಗಳು ಕೊಟ್ಟ ಅನೇಕ ಮಂಡನಂಗಳಿಂದ ಮಂಡಿತನಾಗಿ ಆನೆಯನ್ನೇರಿ ಬರುತ್ತಿರುವ ಮಂಡನಮಿಶ್ರನೆಂಬವನನ್ನು ಕಂಡರು. ಈ ಕೆಳಗೆ ಕಂಡಂತೆ ಶಂಕರಾಚಾರ್ಯರಿಗೂ ಆ ಮಂಡನಮಿಶ್ರನಿಗೂ ಮಾತುಗಳು ನಡೆದುವು.

ಮಂಡನಮಿಶ್ರ:— ಎಲೈ ಮುಂಡ! (ಕೃತಕ್ಷೌರನು ಅಥವಾ ಯತಿ) ನೀನೆಲ್ಲಿಂದ ಬಂದೆ?

ಶಂಕರಾಚಾರ್ಯ:— ಹೇ ಮುಂಡನ (ಅಲಂಕೃತ ಪುರುಷ) ನಾನು ಕಂಠಪರ್ಯಂತವಾಗಿಯೇ ಮುಂಡನು !

ಮಂಡ:—ಯತಿಯೇ ! ನಾನು ನಿನ್ನ ದಾರಿಯನ್ನು ಕೇಳಿದೆನು.

ಶಂಕರಾಚಾರ್ಯ:—ಅದೇನೆಂದಿತು ?

ಮಂಡನ:—(ಕೋಪದಿಂದ) ಎಲೆ ಯತಿಯೆ ! ನಿನ್ನ ತಾಯಿ ರಂಡೆಯೆಂದಿತು !

ಶಂಕರಾಚಾರ್ಯ:—(ಹಾಸ್ಯಸೂಚಕ ಮುಖದಿಂದ) ಓಹೋ! ನಿಜವೋ ? ನಿನ್ನ ತಾಯಿ ರಂಡೆಯೆಂದಿತೋ ? ಅದು ನಿಜವೇ ಇರಬಹುದು ? ಆದುದರಿಂದಲೇ ಅದು ಆ ಮಾತೆಂದಿರುವುದು ! ಹಾಗಾದರೆ ನೀನು ರಂಡಾಪುತ್ರನೋ ?

ಹೀಗೆ ದಾರಿಯ ವಾಗ್ವಾದದಿಂದಲೂ ಆಚಾರ್ಯರ ಪೂರ್ಣ ಪಾಂಡಿತ್ಯವನ್ನು ಸೂಚಿಸುವ ಮುಖತೇಜಶ್ಯಕ್ತಿಯಿಂದಲೂ ಸೋತವನಾಗಿ ಮಂಡನಮಿಶ್ರನು ಶಂಕರಾಚಾರ್ಯರ ಶಿಷ್ಯನಾದನು.

ಅನಂತರ ತೋಟಕ–ಪದ್ಮಪಾದ–ಜ್ಞಾನೋತ್ತಮ–ಬೀಜಾದ–ಎಂಬ ನಾಲ್ವರು ಈ ಶಂಕರಾಚಾರ್ಯರ ಶಿಷ್ಯರಾದರು. ಈಶಿಷ್ಯರುಗಳು ತಮ್ಮ ಗುರುಗಳ ಮತಾನುಸಾರವಾದ ಗ್ರಂಥಂಗಳನ್ನು ರಚಿಸಿ ತಾವೂ ಆ ಗುರುಗಳಿಂದ ಸಂನ್ಯಾಸಸ್ವೀಕಾರಮಾಡಿ, ತಮ್ಮ ಜ್ಞಾನವಂಶಾಭಿವೃದ್ಧಿಗಾಗಿ ತಂತಮ್ಮ ಶಿಷ್ಯರುಗಳಲ್ಲಿ ಕೆಲಕೆಲವರನ್ನು ಸಂನ್ಯಾಸಿಗಳನ್ನಾಗಮಾಡುತ್ತಲೂ ಇದ್ದರು. ಶಂಕರಾಚಾರ್ಯರು ಕೆಲವುಕಾಲದಮೇಲೆ ತಮ್ಮ ಜನ್ಮಸ್ಥಳವಾದ ದಕ್ಷಿಣದಿಕ್ಕಿನಲ್ಲಿ ಕೇರಳದೇಶದಲ್ಲಿರುವ 'ಕಾಲಡಿ' ಎಂಬ ಗ್ರಾಮಕ್ಕೆ ಬಂದು ತಮ್ಮ ತಾಯಿಯ ಅಂತ್ಯೇಷ್ಟಿಯನ್ನಾಚರಿಸಿ ಮತ್ತೆ ಉತ್ತರದೇಶಕ್ಕೆ ಹೋಗಿ ತಮ್ಮ ಮಠದಲ್ಲಿ ಶ್ವಾಸ ಜ್ವರಾದಿರೋಗಗಳಿಂದ ಪೀಡಿತರಾದುದರಿಂದ ಮುಂದೆ ಅವರ ವಾಚಾಲತೆ ಕುಂಠಿತವಾಯಿತು. ಅವರ ಶಿಷ್ಯರುಗಳು ಆ ಸಮಯದಲ್ಲಿ ತಮ್ಮ ಗುರುಗಳ ಸಮೀಪಕ್ಕೆ ಹೋಗಿ "ಸ್ವಾಮಿ ! ನಮ್ಮ ಕರ್ತವ್ಯವೇನು? ಆಜ್ಞಾಪಿಸಬೇಕು! " ಎಂದು ಪ್ರಾರ್ಥಿಸಲು, ಆ ಆಚಾರ್ಯರು "ನನ್ನ ಪ್ರಿಯ ಶಿಷ್ಯರುಗಳಿರಾ ! ಇದುವರೆಗೆ

ನಮ್ಮ ಕಾರ್ಯಂಗಳು ಯಥಾಸಾಂಗವಾಗಿ ನೆರವೇರಿಸಲ್ಪಟ್ಟಿರುವುವು. ನೀವು ಈ ಕಾರ್ಯಂಗಳನ್ನು ಲೋಪವಾಗದಂತೆ ಅಭಿವೃದ್ಧಿಪಡಿಸಿ ಕೊಂಡಿರಬೇಕೆಂಬುದೊಂದಲ್ಲದೆ; ಪರತೀರ್ಥರ ಶಿಷ್ಯರಾದ ಸತ್ಯಪ್ರಜ್ಞ ತೀರ್ಥರೆಂಬವರು ಹಿಮವತ್ಪರ್ವತದ ಹಿಂಭಾಗದಲ್ಲಿ ಋಷಿಗಳಿಗೆ ವೇದಪ್ರವಚನ ಮಾಡಿಸುತ್ತಿರುವರು. ಆದುದರಿಂದ ಅವರ ಶಿಷ್ಯರಾದ ಪ್ರಾಜ್ಞತೀರ್ಥರು ಐದಾರುಮಂದಿ ಶಿಷ್ಯರಿಗೆ ಮಾತ್ರ ವೇದಾಭ್ಯಾಸ ಮಾಡಿಸುತ್ತಾ ನಂದಿ ಗ್ರಾಮದಲ್ಲಿರುವರು. ನೀವು ಅವರನ್ನು ವಾದ ದಲ್ಲಿ ನಿಗ್ರಹಿಸಿ ನಮ್ಮ ಮತಕ್ಕೆ ಪ್ರಾಶಸ್ತ್ಯವನ್ನುಂಟುಮಾಡಿರಿ! ನನ್ನ ಪ್ರಿಯಶಿಷ್ಯನಾದ ಬೀಜಾದನು ಎಲ್ಲಿರುವನೋ ಕರೆದುಕೊಂಡು ಬನ್ನಿರಿ" ಎಂದು ಆಜ್ಞಾಪಿಸಲು, ಆ ಶಿಷ್ಯರು ಎಲ್ಲೆಲ್ಲಿಯೋ ಹೋಗಿ ಹುಡುಕಿ ಬೀಜಾದನನ್ನು ಕಾಣದೆ ಕಂಡಕಂಡವರುಗಳೆಲ್ಲರನ್ನೂ ವಿಚಾರಿಸುತ್ತಿರುವಾಗ ಆರೂ ತಮಗೆ ಸರಿಯಾದ ಉತ್ತರವನ್ನು ಕೊಡ ಲಿಲ್ಲವೆಂಬ ವಿಷಯವನ್ನು ತಮ್ಮ ಗುರುಗಳಲ್ಲಿ ಅರಿಕೆಮಾಡುತ್ತಿದ್ದರು. ಆಗ ಒಬ್ಬ ಶಿಷ್ಯನು ಬಂದು ನಮಸ್ಕರಿಸಿ, ಸ್ವಾಮಿ! ನಾನೊಂದುಕಡೆ ಹೋಗುತ್ತಿರುವಾಗ ಚೆಂಡನ್ನಾಡುತ್ತಿದ್ದವನೊಬ್ಬನು ನನ್ನನ್ನು ನೋ ಡುತ್ತಲೇ ಅಯ್ಯ! ಶ್ರೀ ಶಂಕರಾಚಾರ್ಯರವರು ತಮ್ಮ ಮುಂದಿನ ರೀತಿಯನ್ನರಿಯದೆ ಇಲ್ಲವು! ಅವರ ಅಂತ್ಯಕಾಲದಲ್ಲಿ ನನಗೆ ದರ್ಶನ ಮಾಡಿಸಬೇಕೆಂಬ ಅನುಗ್ರಹ ಬುದ್ಧಿಯಿಂದ ನಿನ್ನನ್ನು ನನ್ನಬಳಿಗಾಗಿ ಕಳುಹಿಸಿದರೋ?" ಎಂದು ನನ್ನ ಹಿಂದೆಯೇ ಬಂದಿರುವನು. ಎನ್ನಲು ಶಂಕರಾಚಾರ್ಯರವರು "ಅಂತರ್ಮುಖಿಯಾದ ಬೀಜಾದ! ನೀನು ಹೇಗಿದ್ದರೂ ಎಲ್ಲಿದ್ದರೂ ನನ್ನವನೇ! ಶಂಕರಾ!" ಎನ್ನುತ್ತಿರುವಾ ಗಲೇ ಕಾಲಗತಿಯೊದಗಿ ದೀರ್ಘ ನಿಶ್ವಾಸವನ್ನು ಬಿಟ್ಟು ಪರಲೋಕ ವಾಸಕ್ಕೆ ತೆರಳಿದರು.

ಇಂತು ಕರ್ಣಾಟಕ ವಚನ ಮಣಿಮಂಜರಿಯಲ್ಲಿ
ಏಳನೆಯ ಸರ್ಗವು ಮುಗಿದುದು.
ಶ್ರೀರಾಮಾರ್ಪಣಮಸ್ತು

—:o:—

ಎಂಟನೆಯ ಸರ್ಗ

ಶಂಕರಾಚಾರ್ಯರಿಂದಾಜ್ಞಪ್ತರಾದಾ ಶಿಷ್ಯರುಗಳು, ಪ್ರಾಜ್ಞತೀರ್ಥರಲ್ಲಿಗೆ ಹೋಗಿ, ಅವರನ್ನು ವಾದದಲ್ಲಿ ಗೆಲ್ಲಲಾರದೆ "ಶೇಷಂ ಕೋಪೇನಪೂರಯೇತ್" ಎಂಬ ವಾಕ್ಯಾನುಸಾರವಾಗಿ, ಪ್ರಾಜ್ಞತೀರ್ಥರಮೇಲೆ ಅತ್ಯಂತ ಕೋಪಾವಿಷ್ಟರಾದರು. ಆ ಪ್ರಾಜ್ಞತೀರ್ಥರು ತಮ್ಮ ಪ್ರತಿಕಕ್ಷಿಗಳ ಗುಂಪು ಬಹಳವಾಗಿ ತಾವು ಕೆಲವುಮಂದಿ ಮಾತ್ರವಿದ್ದುದರಿಂದ, ಆ ಸ್ಥಳದಲ್ಲಿರುವುದು ಸರಿಯಲ್ಲವೆಂದೆಣಿಸಿ, ಆ ಸ್ಥಳವನ್ನು ಬಿಟ್ಟು ಶ್ರೀಹರಿಯ ಆವಾಸಸ್ಥಾನವಾದ ಓಢ್ರ ದೇಶದಲ್ಲಿರುವ (ವಡ್ಡಿ ಜಗನ್ನಾಥ) ಜಗನ್ನಾಥನಾಮಕ ಕ್ಷೇತ್ರಕ್ಕೆ ಹೊರಟುಹೋಗುತ್ತಿರಲಾಗಿ, ಇವರು ಅವರ ಬೆಂಬಿಡಿದುಹೋಗಿ ನಿರ್ಜನವಾದ ವನಪ್ರದೇಶದಲ್ಲಿ ಪ್ರಾಜ್ಞತೀರ್ಥರನ್ನೂ ಅವರ ಶಿಷ್ಯರನ್ನೂ ತಮ್ಮ ಮತಾವಲಂಬಿಗಳಾಗಲೇಬೇಕೆಂದು ಬಲಾತ್ಕರಿಸಲಾಗಿ, ಅನ್ವರ್ಥನಾಮಧಾರಿಗಳಾದಾಯತೀಂದ್ರರು "ಅಯ್ಯ! ನಿಮ್ಮ ಇಷ್ಟದಂತೆ ನಿಮ್ಮ ಮತವನ್ನು ಅನುಸರಿಸುವೆವು. ನಮ್ಮ ಮೇಲೆ ದಯೆಯಿಡಿರಿ!" ಎಂದರು. ಶಂಕರಾಚಾರ್ಯರ ಶಿಷ್ಯರುಗಳಲ್ಲಿ ಒಬ್ಬನಾದ ಜ್ಞಾನೋತ್ತಮನೆಂಬುವನು ಸ್ವಲ್ಪ ದಯೆಯುಳ್ಳವನಾಗಿ, ಆ ಪ್ರಾಜ್ಞತೀರ್ಥರಿಗೆ ಮೊದಲಿನಂತೆ ದಂಡ ಕಮಂಡಲಾದಿಗಳನ್ನು ಕೊಟ್ಟು, ಅವರು ಊರ್ಧ್ವಪುಂಡ್ರಾದಿ ವೈಷ್ಣವಚಿಹ್ನೆಗಳ ಸ್ಥಾನದಲ್ಲಿ ತಿರ್ಯಕ್ಪುಂಡ್ರ ವಿಭೂತಿಧಾರಣಾದಿ ಶೈವ ಚಿಹ್ನೆಗಳನ್ನು ಧರಿಸುವಂತೆ ಏರ್ಪಡಿಸಿ, ಅವರಿಗೆ ತಮ್ಮ ಮತ ಸಂಪ್ರದಾಯಾದಿಗಳನ್ನು ಬೋಧಿಸಿದರು.

ಸಮಯೋಚಿತಾಚಾರಾನುಸರಣಕುಶಲರಾದ ಆ ಪ್ರಾಜ್ಞತೀರ್ಥಾದಿಗಳು ತಮ್ಮ ನಿಜವಾದ ಅಭಿಪ್ರಾಯಂಗಳನ್ನು ಆಚ್ಛಾದಿಸಿ



ಶ್ರೀಮಚ್ಛಂಕರಾಚಾರ್ಯರವರು

ಅವರುಗಳ ಬಾಧೆಗೋಸ್ಕರವಾಗಿ ಶಾಂಕರ ಬ್ರಹ್ಮಸೂತ್ರ ಭಾಷ್ಯವನ್ನು ಶ್ರವಣಮಾಡಿದರು. ಇವರಿಂತಾದುದರಿಂದ ಸಂತುಷ್ಟರಾದಾ ಜ್ಞಾನೋತ್ತಮಾದಿಗಳು ಆನಂದಬಾಲವೆಂಬ ಮಠವನ್ನು ಸೇರಿ ತಮ್ಮ ಕರ್ತವ್ಯನಿಷ್ಠೆಗಾಗಿ ತಮ್ಮಿಷ್ಟಕ್ಕೆ ತಾವೇ ಸಂತೋಷಿಸುತ್ತಿದ್ದರು. ಅಲ್ಲದೆ ಸ್ವಸುಖಲೋಲುಪರಾಗಿ ಅದಕ್ಕೋಸ್ಕರವೇ ತಂತಮ್ಮ ತನುಧನಮನಃಕಾಲಂಗಳನ್ನು ವಿನಿಯೋಗಿಸುತ್ತಿದ್ದರು. ಆದರೂ ಪ್ರಾಜ್ಞತೀರ್ಥಾದಿಗಳು ತಮ್ಮನ್ನು ಹೇಗಾದರೂ ದೂಷಿಸಬಹುದೆಂದು ಭಾವಿಸಿ ಅಲ್ಲಿಗೆ ಅತಿ ದೂರವಾಗಿರುವ ಬೇರೆ ಯೆಡೆಗೆ ಹೊರಟು ಹೋದರು.

ಅನಂತರ ಪ್ರಾಜ್ಞತೀರ್ಥರು ತಮಗೆ ಅನುಕೂಲರಾಗಿರುವ ಶಿಷ್ಯರುಗಳನ್ನು ಏಕಾಂತಸ್ಥಾನಕ್ಕೆ ಕರೆದು, "ನಮ್ಮ ದ್ವೇಷಿಗಳು ನಮ್ಮನ್ನು ಬಿಟ್ಟು ದೂರಕ್ಕೆ ಹೋದುದು ನಮ್ಮ ಪೂರ್ವಪುಣ್ಯವೇ ಸರಿ! ಇದು ಪರಮಾತ್ಮನಾದ ಶ್ರೀಹರಿಯ ಅನುಗ್ರಹ. ಇವರು ಇಲ್ಲಿ ಇಲ್ಲದುದು ನಮಗೆ ಪರಮಾನಂದವಾಗಿದೆ. ಇಲ್ಲಿ ಚಾತುರ್ಮಾಸ್ಯ ವ್ರತವನ್ನು ಪೂರೈಸಿಕೊಂಡು ಇಲ್ಲಿಂದ ಹೊರಡೋಣ! ನಾವು ಗಂಗಾನದಿಯನ್ನು ಸೇರಿ ಸ್ನಾನಾದಿಗಳಿಂದ ಪೂತರಾಗಿ ಅಲ್ಲಿಂದ ಮೆಲ್ಲಗೆ ನಂದಿ ಗ್ರಾಮವನ್ನು ಸೇರೋಣ!" ಎಂದು ಆಲೋಚಿಸಿ, ಚಾತುರ್ಮಾಸ್ಯಾನಂತರ ಅಲ್ಲಿಂದ ಹೊರಟು ಗಂಗಾಸ್ನಾನವನ್ನು ಮಾಡಿ, ಉತ್ತರಕ್ಕೆ ಹೊರಟು ನಂದಿ ಗ್ರಾಮವನ್ನು ಸೇರಿ, ಶ್ರೀಹರಿಸ್ಮರಣ ತತ್ಪರರಾಗಿ, ತಮ್ಮ ಸಿದ್ಧಾಂತದಂತೆಯೇ ಮತ್ತೆ ಆಚರಿಸುತ್ತಾ, ತಮ್ಮ ಶಿಷ್ಯವೃಂದಕ್ಕೆ ಹಿತವನ್ನು ಕೋರುತ್ತಾ, ಶ್ರೀಹರಿಯ ಸೇವಾನಿರತರಾಗಿದ್ದರು. ಕೆಲವು ಕಾಲದಮೇಲೆ ಬದರಿಕಾಶ್ರಮಕ್ಕೆ ಸಶಿಷ್ಯರಾಗಿ ಹೋಗಿ, ಅಲ್ಲಿಯವರಿಂದ ಸಂಭಾವಿತರಾಗಿ, ಅಲ್ಲಿಯ ಶ್ರೀ ನಾರಾಯಣದೇವರ ಸೇವೆಯನ್ನು ಮಾಡಿ, ಆ ಪುಣ್ಯಸ್ಥಳದಲ್ಲಿರುವ ನಾರದತೀರ್ಥಾದಿಗಳಲ್ಲಿ ಸ್ನಾನದೇವತಾರ್ಚನಾದಿ ಭಗವತ್ಕೈಂಕರ್ಯಂಗಳನ್ನೂ ತೀವ್ರವಾದ ತಪಸ್ಸನ್ನೂ ಮಾಡುತ್ತಾ,

"ಭಗವಂತನಾದ ನಾರಾಯಣಸ್ವಾಮಿ ! ನಿನಗೆ ನಮಸ್ಕಾರ ! ತತ್ವಾಭಿಮಾನಿಗಳಾದ ದೇವತೆಗಳಿರಾ ನಿಮಗೆ ಅಭಿವಂದನವು ! ಗುರುಗಳಾದ ಸತ್ಯಪ್ರಜ್ಞತೀರ್ಥಸ್ವಾಮಿಗಳೇ ತಮಗೆ ಪ್ರಣಾಮಂಗಳು ! ನಮಗೆ ಸದ್ಗತಿಯನ್ನುಂಟುಮಾಡಿರಿ!" ಎಂಬದಾಗಿ ನಿರಂತರವೂ ಸಂಪ್ರಾರ್ಥಿಸುತ್ತಿದ್ದರು. ಆ ಸಮಯದಲ್ಲಿ ಸತ್ಯಪ್ರಜ್ಞತೀರ್ಥರು ಮಹರ್ಷಿಗಳೊಡನೆ ಈ ಪ್ರಾಜ್ಞತೀರ್ಥರಿಗೆ ಪ್ರತ್ಯಕ್ಷರಾಗಿ, ಅವರಿಂದ ನಮಸ್ಕಾರಂಗಳನ್ನು ಕೈಕೊಂಡು, ಅವರುಗಳಿಗೆ ಅಭಯ ವರಪ್ರದಾನವನ್ನು ಮಾಡಿ, ಆದರಿಸಿ, "ಮಹನೀಯರೆ! ನಾನು ಯೋಗಪ್ರಭಾವದಿಂದ ನಿಮ್ಮ ಸಕಲ ವೃತ್ತಾಂತವನ್ನೂ ಅರಿತವನಾಗಿರುವೆನು! ಈಕಾಲದಲ್ಲಿ ಕಲಿಪ್ರಾದುರ್ಭಾವದಿಂದ ಸಜ್ಜನರಿಗೆ ಉಪದ್ರವಂಗಳುಂಟಾಗುವುವು ! ಅವು ಪರಿಣಾಮದಲ್ಲಿ ಅವರನ್ನೇನೂ ಮಾಡಲಾರವು ! ನೀವು ಅತ್ಯುಗ್ರವಾದ ತತ್ತ್ವವಿಪ್ಲವ ಸಂಕಟವನ್ನು ಬಿಡಿರಿ ! ನಿಮ್ಮಂತಹ ಭಕ್ತರುಗಳು ಪುರುಷೋತ್ತಮ ಸಂಬಂಧವುಳ್ಳ ಒಡ್ಡಿ ಜಗನ್ನಾಥ (ಓಢ್ರದೇಶದಲ್ಲಿರುವ ಜಗನ್ನಾಥ) ಕ್ಷೇತ್ರದಲ್ಲಿ ಶ್ರೀಹರಿಯನ್ನು ಉಪಾಸನೆಮಾಡಿ ಉತ್ತಮಸಿದ್ಧಿಯನ್ನು ಪಡೆಯಬಹುದು. ನೀವೂ ನಿಮ್ಮ ಶಿಷ್ಯರುಗಳೂ ಕಾಲಾನುಸಾರವಾಗಿ ನಡೆದುಕೊಳ್ಳಿರಿ! ಆದರೂ ಸಚ್ಛಾಸ್ತ್ರಾರ್ಥವನ್ನು ಮಾತ್ರ ಅಂತರಂಗಿಕವಾಗಿ ಮನನಮಾಡುತ್ತಿರಬೇಕು ! ಪ್ರಾಜ್ಞತೀರ್ಥರೇ ! ನೀವು ನಿಮ್ಮ ಶಿಷ್ಯರಲ್ಲಿ ಒಬ್ಬರಿಗೆ ಸಂನ್ಯಾಸವನ್ನು ಕೊಡಿರಿ! ಅವರು ಅವರ ಶಿಷ್ಯರಲ್ಲೊಬ್ಬರಿಗೆ ಕೊಡಲಿ ಹೀಗೆ ಪರಂಪರೆಯಾಗಿ ದುರ್ವಾಸಾದಿ ಪರಮಹಂಸರ ಸತ್ಸಂಪ್ರದಾಯವು ಶಿಷ್ಯಪರಂಪರೆಯಾಗಿ ಅವಿಚ್ಛಿನ್ನವಾಗಿ ಬೆಳೆದುಕೊಂಡು ಬರುತ್ತಿರಲಿ ! ನಾರಾಯಣನೇ ಸರ್ವೋತ್ತಮನು ! ನಾನು ಅವನ ಸೇವಕನು ! ಎಂಬ ಸತ್ಸಂಪ್ರದಾಯವು ಶಿಷ್ಯಮಂಡಲಿಯಲ್ಲಿ ಅಭಿವೃದ್ಧಿಯಾಗುತ್ತಿರಲಿ! ಹೃದಯಸ್ಥನಾದ ನಾರಾಯಣನೇ ಸ್ಮರ್ತವ್ಯನು ! ನೀವು ಪ್ರತಿಪಕ್ಷಿಗಳಿಗೂ ವಂದನೆಯನ್ನು ಮಾಡಬಹುದು ! ಆ ವಂದನವು ಅವರ ಅಂತರ್ಯಾಮಿಯಾದ ಪರಮಾತ್ಮನಿಗೇ ಹೊರತು "ನಾನು" ಎಂಬ ಜೀವಾತ್ಮನಿಗಲ್ಲವೆಂದು ಭಾವಿಸತಕ್ಕುದು. ಈಕಾಲ

ದಲ್ಲಿ ನಿಮ್ಮ ಸಂಪ್ರದಾಯವನ್ನು ರೂಢಿಸಲು ಉದ್ಯೋಗಿಸುವುದರಿಂದ ಫಲವಾಗುವುದಿಲ್ಲ. ಇತರ ಮತೀಯರ ಗುಂಪು ಅಧಿಕವಾಗಿರುವುದರಿಂದ ಅವರು ಸಕಲರನ್ನೂ ತಮ್ಮ ವಶ್ಯರನ್ನಾಗಿಸಿಕೊಳ್ಳುವರಾಗಿರುವರು. ನಿಮಗೆ ಅಂತಹ ಸಾಧನಂಗಳಿಲ್ಲ! ಆದುದರಿಂದ ಈ ಸಮಯದಲ್ಲಿ ನೀವು ಆವುದೋ ಉಪಾಯದಿಂದ ನಿಮ್ಮಗಳನ್ನು ಕಾಪಾಡಿಕೊಂಡು ಪರಂಪರಾಗತ ಸಂಪ್ರದಾಯವು ಭಿನ್ನವಾಗದಂತೆ ಮುಂದಣ ನಿಮ್ಮ ವಂಶಾಭಿವೃದ್ಧಿ (ಎಂದರೆ ಒಬ್ಬಯತಿ ಮತ್ತೊಬ್ಬರಿಗೆ ಯತ್ಯಾಶ್ರಮವನ್ನು ಕೊಡುವಿಕೆ) ಪಡಿಸುತ್ತಾ ನೀವುಗಳು ಸದ್ಗತಿಯನ್ನು ಪಡೆಯಿರಿ! ಸ್ವಲ್ಪ ಕಾಲಾನಂತರ ನಿಮ್ಮ ಶಿಷ್ಯ ಪರಂಪರೆಯಲ್ಲಿ ಒಬ್ಬ ಮಹಾತ್ಮರು ಅವತರಿಸಿ ನಿಮ್ಮ ಸಂಪ್ರದಾಯವನ್ನು ವಿಸ್ತರಿಸುವರು" ಎಂದು ಅಪ್ಪಣೆಯನ್ನು ಕೊಟ್ಟು ಪ್ರಾಜ್ಞತೀರ್ಥರಿಗೆ ಅಭಯವರದವಾದ ತಮ್ಮ ಹಸ್ತದಿಂದ ದಂಡ ಕಮಂಡಲಾದಿ ಯತ್ಯುಪಕರಣಂಗಳನ್ನು ಅನುಗ್ರಹ ಪೂರ್ವಕವಾಗಿ ಕೊಟ್ಟು ಅವರಿಗೆ ಸಂತೋಷವನ್ನುಂಟುಮಾಡಿ, ಅವರುಗಳಿಂದ ಅಭಿವಂದನಂಗಳನ್ನು ಪಡೆದು, ತಾವು ತಿರೋಹಿತರಾದರು.

ಆ ಬಳಿಕ ಪ್ರಾಜ್ಞತೀರ್ಥರೇ ಮುಂತಾದವರು ಗುರುಗಳ ಆಜ್ಞೆಯಂತೆ ಜಗನ್ನಾಥ ಕ್ಷೇತ್ರವನ್ನು ಸೇರಿ, ತಮ್ಮ ಗುರೂಪದಿಷ್ಟವಾದ ಮಾರ್ಗದಲ್ಲಿದ್ದರು. ಪ್ರಾಜ್ಞತೀರ್ಥರು ಒಬ್ಬರಿಗೆ, ಅವರು ಮತ್ತೊಬ್ಬರಿಗೆ, ಆಶ್ರಮವನ್ನು ಕೊಡುತ್ತಾ, ಹೀಗೆ ಪರಂಪರಾಗತವಾಗಿ ಸ್ವಸಂಪ್ರದಾಯ ಸರಣಿಯು ಅನುಸ್ಯೂತವಾಗಿ ಬರುತ್ತಿದ್ದಿತು. ಕೆಲವುಕಾಲದಮೇಲೆ ಅಚ್ಯುತಪ್ರೇಕ್ಷಾಚಾರ್ಯರೆಂಬ ಯತೀಂದ್ರರುಂಟಾದರು.

ಆ ಸಮಯದಲ್ಲಿ ತತ್ವಜ್ಞಾನದಾನದಲ್ಲಿ ಜಾಣರೂ, ಜಗತ್ಪ್ರಾಣರೂ ಆದ ವಾಯುದೇವರು, ದೇವತೆಗಳಿಂದ ಪ್ರಾರ್ಥಿತರಾಗಿ, ಶ್ರೀರಮಾರಮಣನ ಅಪ್ಪಣೆಯಂತೆ, ಪಶ್ಚಿಮಸಮುದ್ರತೀರದ ಪಾಜಕ ಕ್ಷೇತ್ರದಲ್ಲಿ ಮಧ್ಯಗೇಹನಾಮಕರಾದ ಬ್ರಾಹ್ಮಣರೊಬ್ಬರ ಮಕ್ಕ

ಳಾಗಿ, ವಾಸುದೇವಾಭಿಧರಾಗಿ ಅವತರಿಸಿ, ತಂದೆಯಿಂದ ಉಪನಯನಾದಿ ಸಂಸ್ಕಾರಂಗಳನ್ನು ಹೊಂದಿದವರಾಗಿ ಸಕಲವೇದ ವೇದಾಂಗಗಳನ್ನೂ ಅಭ್ಯಾಸಮಾಡಿ, ಸಂನ್ಯಾಸಿಶ್ರೇಷ್ಠರಾದ ಅಚ್ಯುತ ಪ್ರೇಕ್ಷಾಚಾರ್ಯರವರಿಂದ ಪರಮಹಂಸ ಸಂಬಂಧಿಯಾದ ಸಂನ್ಯಾಸಾಶ್ರಮವನ್ನು ವಹಿಸಿದರು. ಆಗ ಆದಿಯಲ್ಲಿ ಸನಕಾದಿ ಮಹರ್ಷಿಗಳಿಂದ ಆವ ಸಂಪ್ರದಾಯ ಮತವು ಅನುಸರಿಸಲ್ಪಟ್ಟಿದ್ದಿತೋ, ಅವರ ತರುವಾಯ ಪರತೀರ್ಥರು, ಸತ್ಯಪ್ರಜ್ಞತೀರ್ಥರು, ಪ್ರಾಜ್ಞತೀರ್ಥರು, ಮೊದಲಾದ ಯತೀಂದ್ರರಿಂದ ಆವುದು ಅನುಷ್ಠಿಸಲ್ಪಡುತ್ತಿದ್ದಿತೋ, ಅವರುಗಳಿಂದ ಲೋಕಮರ್ಯಾದೆಯನ್ನು ಅನುಸರಿಸಿ ವಿವರಿಸಲ್ಪಟ್ಟ ಶ್ರೀಪರಮಾತ್ಮನ ಆ ಉಪಾಸನಾ ಪದ್ಧತಿಯನ್ನು ಈಸಂನ್ಯಾಸಾಶ್ರಮದಲ್ಲಿ ನೂತನನಾಮಧಾರಕರಾದ ಶ್ರೀ ಮಧ್ವಾಚಾರ್ಯ(ವಾಸುದೇವ)ರಿಗೋಸ್ಕರ, ಸಂನ್ಯಾಸಿಗಳಲ್ಲಿ ಶ್ರೇಷ್ಠರಾದ ಅಚ್ಯುತಪ್ರೇಕ್ಷಾಚಾರ್ಯರವರು, ಶ್ರೀಮದನಂತೇಶ್ವರನ ದಯೆಯಿಂದ ತಮಗೆ ಲಭ್ಯರಾದ ಶಿಷ್ಯೋತ್ತಮರೆಂಬ ಮಾಹಾತ್ಮ್ಯಜ್ಞಾನಯುಕ್ತಪ್ರೀತಿಯಿಂದ ಉಪದೇಶಮಾಡಿದರು.

ದೇವತೆಗಳಿಗೆ ಕೂಡ ತತ್ತ್ವೋಪದೇಶಕರೂ, ಅನಂತ ಮಹಿಮಾನ್ವಿತರೂ ಶ್ರೀಮದ್ವಾಯ್ವಂಶಸಂಜಾತರೂ ಆದ ಶ್ರೀಮದಾಚಾರ್ಯರವರು ಅತ್ಯಂತಾಧಿಕವ್ಯಾಪ್ತಿಯುಳ್ಳ ಶ್ರೀಹರಿಯ ಅಮೋಘವಾದ ಜ್ಞಾನಾನಂದರೂಪಂಗಳಲ್ಲಿ ತಮ್ಮ ಮನಸ್ಸನ್ನು ಸ್ಥಿರೀಕರಿಸಿ, ಉಪಾಸನೆಮಾಡಿ ಧನ್ಯರಾದರು. ಮತ್ತು ಶ್ರೀಮಧ್ವಾಚಾರ್ಯರವರು ವೇದಪ್ರಾಮಾಣ್ಯವನ್ನು ದೃಢೀಕರಿಸುವುದಾಗಿರುವ ಬ್ರಹ್ಮಸೂತ್ರಂಗಳಿಗೆ ಅದುವರೆಗೆ ಪ್ರಚಾರದಲ್ಲಿದ್ದ (೧. ಭಾರತೀವಿಜಯ– ೨. ಸಚ್ಚಿದಾನಂದ–೩. ಬ್ರಹ್ಮಘೋಷ–೪. ಶತಾನಂದ–೫. ಉದ್ಧತ– ೬. ವಿಜಯ–೭. ರುದ್ರಭಟ್ಟ–೮. ವಾಮನ–೯. ಯಾದವ ಪ್ರಕಾಶ– ೧೦. ಭರ್ತೃಪ್ರಪಂಚ–೧೧. ದ್ರವಿಡ–೧೨. ಬ್ರಹ್ಮದತ್ತ–೧೩. ಭಾಸ್ಕರ ೧೪. ಪಿಶಾಚ–೧೫. ವೃತ್ತಿಕಾರ–೧೬. ವಿಜಯಭಟ್ಟ–೧೭. ವಿಷ್ಣು

ಕ್ರಾಂತ–೧೮. ವಾದೀಂದ್ರ–೧೯. ಮಾಧವದಾಸ– ೨೦. ಶಂಕರಾಚಾರ್ಯ– ೨೧. ರಾಮಾನುಜಾಚಾರ್ಯ – ಎಂಬವರುಗಳು ರಚಿಸಿದ್ದ) ಇಪ್ಪತ್ತೊಂದು ಭಾಷ್ಯಂಗಳ ಅರ್ಥಂಗಳನ್ನೂ ಪರಿಶೀಲಿಸಿ, ಅವುಗಳಲ್ಲಿಯ ಅಸಾಮಂಜಸ್ಯಂಗಳನ್ನು ಹೊರಪಡಿಸಿ, ತಮಗೆ ಸೂಕ್ತವೆಂದು ತೋರಿದ ಮತ್ತು ನಿರ್ದೋಷವಾದ ಇಪ್ಪತ್ತೆರಡನೆಯದಾದ ಭಾಷ್ಯವನ್ನು ರಚನೆಮಾಡಿ, ಶ್ರೀ ವೇದವ್ಯಾಸ ದೇವರಿಗೆ ಸಮರ್ಪಿಸಿ, ಅವರ ಅಪ್ಪಣೆಯಂತೆ ಲೋಕದಲ್ಲಿ ಅದನ್ನು ಪ್ರಚಾರಮಾಡಿದರು. ಅದನ್ನೇ ದ್ವೈತಭಾಷ್ಯವೆನ್ನುವರು.

ಶ್ರೀ ವೇದಾಭಿಮಾನಿ ದೇವತೆಗಳಿಗೆ ನಿಯಾಮಕರಾದ ಶ್ರೀವೇದವ್ಯಾಸದೇವರ ಆಜ್ಞಾಚಕ್ರವನ್ನು ನಡೆಯಿಸುವ ಶ್ರೀಮನ್ಮಧ್ವಾಚಾರ್ಯರವರು, ಬ್ರಹ್ಮಮೀಮಾಂಸಾಶಾಸ್ತ್ರ (ಬ್ರಹ್ಮಸೂತ್ರ) ಉಪನಿಷತ್ತುಗಳು, ಭಗವದ್ಗೀತಾ, ಎಂಬ ಪ್ರಸ್ಥಾನತ್ರಯಂಗಳಿಗೆ ಭಾಷ್ಯಂಗಳನ್ನು ರಚಿಸಿದುದಲ್ಲದೆ, ರಾಮಾಯಣ, ಭಾರತ, ಭಾಗವತಂಗಳಿಗೆ ತಾತ್ಪರ್ಯ ನಿರ್ಣಯಂಗಳೇ ಮುಂತಾದ ಮೂವತ್ತೇಳು ಗ್ರಂಥಂಗಳನ್ನು ವಿರಚಿಸಿ, ಲೋಕೋದ್ಧಾರಕರೆಂದು ಸತ್ಕೀರ್ತಿಯುತರಾದರು. (೧ ಬ್ರಹ್ಮಸೂತ್ರ ಭಾಷ್ಯ–೨ ಐತರೇಯೋಪನಿಷದ್ಭಾಷ್ಯ– ೩ ತೈತ್ತಿರೀಯೋಪನಿಷದ್ಭಾಷ್ಯ–೪ ಈಶಾವಾಸ್ಯೋಪನಿಷದ್ಭಾಷ್ಯ– ೫ ತಲವಕಾರೋಪನಿಷದ್ಭಾಷ್ಯ–೬ ಕಾಠಕೋಪನಿಷದ್ಭಾಷ್ಯ– ೭ ಮುಂಡಕ ಅಥವಾ ಅಥರ್ವಣೋಪನಿಷದ್ಭಾಷ್ಯ–೮ ಮಾಂಡೂಕ್ಯೋಪನಿಷದ್ಭಾಷ್ಯ–೯ ಷಟ್ಪ್ರಶ್ನೋಪನಿಷದ್ಭಾಷ್ಯ– ೧೦ ಬೃಹದಾರಣ್ಯಕೋಪನಿಷದ್ಭಾಷ್ಯ– ೧೧ ಛಾಂದೋಗ್ಯೋಪನಿಷದ್ಭಾಷ್ಯ– ೧೨ ಶ್ರೀಮದ್ಭಗವದ್ಗೀತಾಭಾಷ್ಯ– ೧೩ ಗೀತಾತಾತ್ಪರ್ಯ– ೧೪ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ–೧೫ ಶ್ರೀಮದ್ಭಾಗವತತಾತ್ಪರ್ಯ ನಿರ್ಣಯ–೧೬ ತಂತ್ರಸಾರ–೧೭ ಪ್ರಮಾಣಲಕ್ಷಣ ಪ್ರಕರಣ–೧೮ ಕಥಾಲಕ್ಷಣಪ್ರಕರಣ– ೧೯ ಉಪಾಧಿಖಂಡನ ಪ್ರಕರಣ– ೨೦. ಮಾಯಾವಾದಿ ಖಂಡನ ಪ್ರಕರಣ– ೨೧ ಮಿಥ್ಯಾತ್ವಾನುಮಾನ ಖಂಡನ ಪ್ರಕರಣ–

೨೨ ತತ್ವಸಂಖ್ಯಾನಪ್ರಕರಣ– ೨೩ ತತ್ತ್ವವಿವೇಕ ಪ್ರಕರಣ– ೨೪ ತತ್ತ್ವೋದ್ಯೋತಪ್ರಕರಣ–೨೫ ಕರ್ಮನಿರ್ಣಯಪ್ರಕರಣ–೨೬ ವಿಷ್ಣು ತತ್ವನಿರ್ಣಯ ಪ್ರಕರಣ– ೨೭ ಅಣುಭಾಷ್ಯ– ೨೮ ಯಮಕಭಾರತ– ೨೯ ಅನುವ್ಯಾಖ್ಯಾನ–೩೦ ನ್ಯಾಯವಿವರಣ– ೩೧ ಋಗ್ಭಾಷ್ಯ–೩೨ ಜಯಂತೀನಿರ್ಣಯ– ೩೩ ಯತಿಪ್ರಣವಕಲ್ಪ– ೩೪ ಶ್ರೀಕೃಷ್ಣಾಮೃತ ಮಹಾರ್ಣವ–೩೫ ನೃಸಿಂಹನಖಸ್ತೋತ್ರ–೩೬ ಸದಾಚಾರಸ್ಮೃತಿ– ೩೭ ದ್ವಾದಶಸ್ತೋತ್ರ ಎಂಬಿವು ಶ್ರೀಮನ್ಮಧ್ವಾಚಾರ್ಯರವರು ವಿರಚಿಸಿದ ಗ್ರಂಥರತ್ನಂಗಳು !)

ಶ್ರೀಮನ್ಮಧ್ವಾಚಾರ್ಯರವರನ್ನೂ, ಅವರ ಚರಿತ್ರದ ಪ್ರಾಶಸ್ತ್ಯವನ್ನೂ ಶ್ರೀಮನ್ನಾರಾಯಣ ಪಂಡಿತಾಚಾರ್ಯರವರು ಶ್ಲೇಷಾರ್ಥಗರ್ಭಿತಂಗಳಾದ ಶಬ್ದಂಗಳಿಂದ ಕೂಡಿದ ಒಂದೇ ಶ್ಲೋಕದಲ್ಲಿ ಸ್ತುತಿಸಿರುವರು. ಅದನ್ನು ನೋಡಿದರೆ ಆ ಗ್ರಂಥಕರ್ತರ ಪ್ರೌಢಿಮೆ ಸಕಲರಿಗೂ ವಿದಿತವಾಗುವುದರಿಂದ ಆ ಒಂದು ಶ್ಲೋಕವನ್ನು ಮಾತ್ರ ತಾತ್ಪರ್ಯಸಹಿತವಾಗಿ ಈ ಕೆಳಗೆ ಬರೆಯುವೆನು.

ಶ್ಲೋ॥ ವೃದ್ಯೋತಿಷ್ಟವಿಚಿತ್ರವೃತ್ತ ರುಚಿರಃ ಸಂಪೂರ್ಣ ವಿದ್ಯಾಕರಃ |
ಕೃಷ್ಣಸ್ಯಾದ್ಭುತವೀರ್ಯವರ್ಣನಪರೋ ನಾನಾರ್ಥಸಾರ್ಥೋಜ್ವಲಃ ||
ಶರ್ವೇಂದ್ರಾದಿ ಸುರೇಂದ್ರಲಾಲಿತಪದೋ ಮಾಯಾವಿನಾಂಭೀಷಣಃ |
ಶ್ರೀಮಧ್ವೋ ವಿಜಯಿಾಚ, ಮಧ್ವ ವಿಜಯೋ ನಾರಾಯಣಪ್ರೋದ್ಭವಃ ||

ತಾತ್ಪರ್ಯ:— (ಶ್ರೀ ಮಧ್ವಾಚಾರ್ಯರಪರವಾಗಿ) ನಾನಾ ವಿಧಂಗಳಾದ ಗಂಗಾತರಣಾದಿ ಚರಿತಂಗಳಿಂದ ಮನೋಹರರಾದ, ಸಮಗ್ರಂಗಳಾದಜ್ಞಾನಂಗಳಿಗೆ ಜನ್ಮಸ್ಥಾನಭೂತರಾದ, ಶ್ರೀಹರಿಯ ಅದ್ಭುತ ವೀರ್ಯವರ್ಣನದಲ್ಲಿ ಆಸಕ್ತರಾದ ಅನೇಕಂಗಳಾದ ಎಂದರೆ ಮೂರಾದ ಅರ್ಥಗಳುಳ್ಳ ವೇದಂಗಳ ಸಮೂಹವನ್ನು ವಿಷ್ಣುಪರವಾಗಿ ಪ್ರಕಾಶಮಾಡುವವರಾದ, ಅಥವಾ ನಾನಾವಿಧಂಗಳಾದ ಪಂಚಭೇದಾದ್ಯರ್ಥಂಗಳನ್ನು ಪ್ರಕಾಶಮಾಡಿರುವವರಾದ, ಶರ್ವ ಇಂದ್ರ

ಮೊದಲಾದ ದೇವತೆಗಳಿಂದ ಸನ್ಮಾನಿತರಾದ ವಾಯುದೇವರಅಂಶವುಳ್ಳ ವರಾದ, ಪಾಪರೂಪಾದಿಗಳಿಗೆ (ಬೌದ್ಧಾದಿ ಮತೀಯರಿಗೆ) ಭಯಂಕ ರರಾದ, ಸಂಕರ್ಷಣಾಖ್ಯ ಶ್ರೀಮನ್ನಾರಾಯಣನಿಂದ ಆದಿಸೃಷ್ಟಿ ಯಲ್ಲಿ ಪ್ರಕೃಷ್ಟೋತ್ಪತ್ತಿಯುಳ್ಳವರಾದ, ಉತ್ಕರ್ಷತೆಯುಳ್ಳವರಾದ ಶ್ರೀ ಮಧ್ವಾಚಾರ್ಯರೆಂಬ ಶ್ರೀಮದಾನಂದ ತೀರ್ಥಾಚಾರ್ಯಗುರು ಗಳು ಪ್ರಕಾಶಿಸಿದರು.

(ಗ್ರಂಥದಪರವಾಗಿ) ಶಾರ್ದೂಲವಿಕ್ರೀಡಿತಾದಿ ನಾನಾವಿಧ ವೃತ್ತಂಗಳಿಂದ ಮನೋಹರವಾದ, ಅಪರಿಚ್ಛಿನ್ನನಾದ ಶ್ರೀಹರಿಯಲ್ಲಿ ಭಕ್ತಿಜ್ಞಾನವನ್ನುಂಟುಮಾಡುವುದಾದ, ಶ್ರೀಕೃಷ್ಣದೇವರ ಆಶ್ಚರ್ಯ ಕರಂಗಳಾದ ಸಾಮರ್ಥ್ಯಂಗಳನ್ನು ವರ್ಣಿಸುವುದಾದ, ಅನೇಕಾರ್ಥ ಶ್ಲೋಕಂಗಳ ಸಮೂಹಂಗಳಿಂದ ಶೋಭಿಸುವುದಾದ, ಮನೋಹರಾ ರ್ಥಯುಕ್ತವಾಗಿದೆಯೆಂದು ಸಕಲರಿಂದಲೂ ಸನ್ಮಾನಿತವಾದ, ನಿಜ ವಾದ ಅರ್ಥವನ್ನು ಆಚ್ಛಾದಿಸುವವರಿಗೆ ಪಂಡಿತರ ದೆಸೆಯಿಂದ ಭಯ ವನ್ನುಂಟುಮಾಡಿಸುವುದಾದ, ನಾರಾಯಣ ಪಂಡಿತಾಚಾರ್ಯರಿಂದ ರಚಿತವಾದ, ಉತ್ಕರ್ಷತೆಯುಳ್ಳುದಾದ, ಶ್ರೀಮಧ್ವವಿಜಯ ಕಥಾಂಶ ವುಳ್ಳ ಈ ಮಣಿಮಂಜರೀ ಗ್ರಂಥವು ಪ್ರಕಾಶಿಸಿತು.

ಇಂತು ಕರ್ಣಾಟಕವಚನ ಮಣಿ ಮಂಜರಿಯಲ್ಲಿ
ಎಂಟನೆಯಸರ್ಗವು ಮುಗಿದುದು.

॥ ಶ್ರೀರಾಮಾರ್ಪಣಮಸ್ತು ॥

ಕಂ॥ ವಾದಿಭಯಂಕರರೆನಿಸುತೆ ।
ಭೇದಂಗಳ್ ಸತ್ಯವೆಂದು ಸಾರುತೆ ಮಧ್ವಾ ॥
ಖ್ಯಾದಿ ಗುರುತಿಲಕರೆಲ್ಲರ ।
ನಾದನು ಜಾರಾತಿ ಭಕ್ತರಂಗೆಯ್ದೆಸೆದರ್ ॥೩॥

ಶ್ರೀ ಮಧ್ವ ಮತದ ಸಾರಾಂಶವನ್ನು ಶ್ರೀಮದ್ವಾದಿರಾಜ ಯತೀಂದ್ರರು ಒಂದೇ ಶ್ಲೋಕದಲ್ಲಿ ವಿವರಿಸಿರುವುದನ್ನು ಸರ್ವರೂ ಸುಲಭವಾಗಿ ಗ್ರಹಿಸುವುದಕ್ಕೆ ಅನುಕೂಲವಾಗಿರುವಂತೆ ಈ ಕೆಳಗೆ ವಿವರಿಸಲ್ಪಟ್ಟಿರುವುದು.

ಶ್ಲೋ॥ ಶ್ರೀಮನ್ಮಧ್ವಮತೇ ಹರಿಃ ಪರತರಸ್ಸತ್ಯಂ ಜಗತ್‌ತತ್ತ್ವತೋ ।
ಭೇದೋ ಜೀವಗಣಾಃ ಹರೇರನುಚರಾಃ ನೀಚೋಚ್ಚಭಾವಂಗತಾಃ ॥
ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚತತ್ಸಾಧನಂ ।
ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥

ತಾತ್ಪರ್ಯ:—೧. ಹರಿ ಸರ್ವೋತ್ತಮತ್ವವೂ, ೨. ಜಗತ್ಸತ್ಯತ್ವವೂ, ೩. ಜೀವೇಶ್ವರರಿಗೆ ಭೇದ-ಜಡ ಈಶರಿಗೆ ಭೇದ-ಜೀವ ಜೀವರಲ್ಲಿ ಭೇದ-ಜಡ ಜಡಗಳಲ್ಲಿ ಭೇದ-ಜಡ ಜೀವರಿಗೆ ಭೇದ-ಎಂಬ ಈ ಪಂಚ ಭೇದಂಗಳುಂಟೆಂಬುದೂ, ೪, ಆವಾಗಲೂ ಜೀವಿಗಳು ಪರಮಾತ್ಮನ ಸೇವಕರೇ ಎಂಬುದೂ, ೫. ಜೀವಿಗಳಲ್ಲಿ ಉತ್ತಮ ಮಧ್ಯಮಾಧಮ ಎಂಬ ತಾರತಮ್ಯವು ಸ್ವಾಭಾವಿಕವಾಗಿ ನಿತ್ಯವೆಂಬುದೂ, ೬, ನೈಜವಾದ ಸುಖಾನುಭೂತಿಯೇ ಮುಕ್ತಿ ಎಂಬುದೂ, ೭. ಆ ಮುಕ್ತಿಯನ್ನು ಪಡೆಯುವುದಕ್ಕೆ ಪ್ರೀತಿಪೂರ್ವಕವಾದ ನಿರ್ಮಲವಾದ ಭಗವದ್ಭಕ್ತಿಯೇ ಮುಖ್ಯ ಸಾಧನವೆಂಬುದೂ, ೮. ಇವುಗಳನ್ನು ನಂಬುವುದಕ್ಕೆ ಪ್ರತ್ಯಕ್ಷ-ಅನುಮಾನ-ಶಬ್ದ (ಆಪ್ತ ವಾಕ್ಯ) ಎಂಬ ಮೂರು ಪ್ರಮಾಣಂಗಳುಂಟೆಂಬುದೂ, ೯. ಸಮಸ್ತ ವೇದಾ



ಶ್ರೀಮನ್ಮಧ್ವಾಚಾರ್ಯರು.

With kind Courtesy of the Prabhakara Press, Udipi.

ಗಮ ಪುರಾಣಂ.ಗಳಲ್ಲಿಯೂ ಶ್ರೀ ಹರಿಯೇ ಪ್ರತಿಪಾದ್ಯನೆಂಬುದೂ ಶ್ರೀ ಮಧ್ವ ಮತದ (ದ್ವೈತಮತದ) ಒಂಭತ್ತು ಪ್ರಮೇಯಂಗಳಾಗಿ ರುವುವು; ಮುಖ್ಯ ತತ್ತ್ವಂಗಳಾಗಿಯೂ ಇರುವುವು.

ಕಂ|| ರಾಮಾಕೃಷ್ಣಾ ಜಗದಭಿ |
ರಾಮಾ, ಸುರವೈರಿ ಭೀಮ, ಸದ್ಗುಣಧಾಮಾ ||
ಶ್ರೀಮಾ ಪ್ರೇಮಾ, ವೇಂಕಟ|
ನಾಮಾ, ನಿನಗಕ್ಕೆ ಮಂಗಳಂಗಳಜಸ್ರಂ ||೪||

ಶ್ರೀರಾಮಾರ್ಪಣಮಸ್ತು
ಸಂಪೂರ್ಣಂ

ಮಂಗಳಮಗಮತ್
ಶ್ರೀ ರಾಮ

ಶ್ರೀ ರಾಮ

ವಿಜ್ಞಾಪನೆ

ಈ ಕೆಳಗೆ ಕಂಡ ಗ್ರಂಥಗಳ ಆದಾಯವೆಲ್ಲವೂ ಇಲ್ಲಿನ ಧಾರ್ಮಿಕ ವಾಚಕ ಶಾಲೆಗೆ ವಿನಿಯೋಗವಾಗುವುದರಿಂದ ಧರ್ಮ, ದೇಶ, ಭಾಷಾಭಿಮಾನಿಗಳಾದ ಮಹನೀಯರುಗಳು ತಾವೂ ತಮ್ಮ ಮಿತ್ರರೂ, ತಕ್ಕಷ್ಟು ಈ ಗ್ರಂಥಗಳನ್ನು ಸಂಗ್ರಹಿಸುವುದರ ಮೂಲಕ ಪುಣ್ಯ ಕೀರ್ತಿಗಳನ್ನಾರ್ಜಿಸಬೇಕಾಗಿ ಪ್ರಾರ್ಥನೆ.

ನೀತಿ ಬೋಧಕವಾದ ನೂತನ ಗ್ರಂಥಗಳು.

	ರೂ. ಆ.		ಆ. ಪೈ.
ಸಾವಿತ್ರಿ ನಾಟಕಂ	೦—೧೦	ಶ್ರೀರಾಮ—ಶ್ರೀಸೋಮ —ಸುಧಾಸಾರಗಳು	೦—೬
ಯಯಾತಿ ನಾಟಕಂ	೦—೮	ಸುಶೀಲಾಚರಿತ್ರಂ	೬—೦
ಯಯಾತಿ ಚರಿತ್ರಂ	೦—೪	ಸುಮತಿ	೬—೦
ಯದುರಾಜವಿಜಯ ನಾಟಕಂ	೧—೦	ಶ್ರೀರಾಮ ಚರಿತದ ಮಹಿಮೆ	೪—೦
ಕಲ್ಯಾಣೀ ನಾಟಕಂ	೧—೦	ಚಂದ್ರಹಾಸ ಚರಿತ್ರೆ	೨—೦
ಕಲಾವತೀರೂಪಕಂ *		ಅಭಿಜ್ಞಾನ ಚಂದ್ರಹಾಸ	೪—೦
ಮನೋಹರ	೦—೨	ಶ್ರೀನಿವಾಸ ಕಲ್ಯಾಣ *	....
ವೇದಾಂತಿ ಸ್ಥಿತಿ ಪ್ರಹಸನಂ	೦—೩	ಪುರಂಜನೋಪಾಖ್ಯಾನ	೨—೦
ಅಸತೀಪ್ರೀತಿ ಪ್ರಹಸನಂ	೦—೨	ಸತಿಯ ಸಹಾಯ	೦—೬
ವರದಕ್ಷಿಣಾ ಪ್ರಹಸನಂ	೦—೫	ಚಿರಸ್ಮರಣೀಯವಾದ ಸ್ವಪ್ನ	೦—೬
ಹಳೆಯ ಸಾಲಗಳನ್ನು ತೀರಿಸುವ ಹೊಸಮಾರ್ಗ *		ಕರ್ಣಾಟಕ ವಚನ ಮಣಿಮಂಜರಿ	೬—೦
ಶ್ರೀ ಹರಿ ಸ್ಮರಣಾನಂದಿನಿ	೦—೨	ಶ್ರೀ ವಿದುರಾಶ್ವತ್ಥ ಪೂರಾವೃತ್ತ	೪—೬
ಶ್ರೀ ವಿಶ್ವರೂಪ ಸಂದರ್ಶನಂ (ಕೀರ್ತನಗ್ರಂಥ)	೦—೨	ಡಿಟೋ ತೆನುಗು	೨—೦
ಪಾರ್ವತೀ ಪರಿಣಯಂ ,,	೦—೪	ಶ್ರೀ ಸುಬ್ರಹ್ಮಣ್ಯ ಪುರಾವೃತ್ತ	೨—೦
		ಗಜೇಂದ್ರ ಮೋಕ್ಷಂ (ಹಂದಂ)	೧—೦

N. B.—* ಈ ಗುರ್ತಿನ ಪುಸ್ತಕಗಳು ಮುದ್ರಣದಲ್ಲಿವೆ. ಮೇಲೆ ಕಂಡ ಬೆಲೆಯಲ್ಲಿ ಟ. ಖ. ಸೇರಿಲ್ಲ. ಒಟ್ಟಿಗೆ ತರಿಸುವವರಿಗೆ ೧೨ಕ್ಕೆ ೧ರಂತೆ ಬಹುಮಾನವು ಕೊಡಲ್ಪಡುವುದು.

ನಮ್ಮ ವಿಳಾಸ:—ಕರ್ಣಾಟಕ ಸಾಹಿತ್ಯ ಸಿಧಿ,

ಶಾ. ವೆಂಕಟರಮಣಯ್ಯ, ಕಾರ್ಯದರ್ಶಿ.

ಅಲಕಾಪುರೀ ಧಾರ್ಮಿಕ ವಾಚಕ ಶಾಲಾ,

ಅಲಕಾಪುರ, ಗೌರೀಬಿದನೂರು ತಾಲೂಕು.